'ನಿಸರ್ಗ' ಕಾದಂಬರಿಯಲ್ಲಿಯ ಜೈನ ಸಂವೇದನೆಗಳು

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಶೋಧನ ನಿಬಂಧ

ನೋಂದಣಿ ಸಂಖ್ಯೆ :
BRDSHKS-141301030055

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೭೬

೨೦೧೪-೧೫

'ನಿಸರ್ಗ' ಕಾದಂಬರಿಯಲ್ಲಿಯ ಜೈನ ಸಂವೇದನೆಗಳು

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಶೋಧನ ನಿಬಂಧ

ಮಾರ್ಗ: V.S. ಮಾಳ್ಗಿ

ನೋಂದಣಿ ಸಂಖ್ಯೆ : ಸಂ:- ಮಂಗಾಜ ತ್ರಿಶಲ ಶ್ರೀಪಾದ
BRDSHKS-141301030055

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೪-೧೫

ಪರಿವಿಡಿ

ಅಧ್ಯಾಯ : ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರವೇಶ :

'ಕಾದಂಬರಿ ಕರತಲ ರಂಗಭೂಮಿ' ಎಂಬ ಕುವೆಂಪುರವರ ಅಭಿಪ್ರಾಯ ದಿಟವಾದದ್ದು. ಏಕೆಂದರೆ ಒಂದು ಉತ್ತಮ ಕಾದಂಬರಿ ಜೀವನ ದರ್ಶನವನ್ನು ಬಿಂಬಿಸುತ್ತದೆ. ಕಾದಂಬರಿಯು ರಂಗಭೂಮಿಗಿಂತ ಹೆಚ್ಚು ಸರಳವಾಗಿ ಜನರನ್ನು ತಲುಪಬಲ್ಲದು. 'ಆನಂದಮಠ'ದಂತಹ ಕಾದಂಬರಿ ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಜನಸಾಮಾನ್ಯರ ಬೈಬಲ್ ಆಗಿತ್ತು. ರಾಷ್ಟ್ರಾಭಿಮಾನವನ್ನು ಬೆಳಸಿಕೊಳ್ಳುವಲ್ಲಿ ಕಾದಂಬರಿಗಳ ಪಾತ್ರ ಹಿರಿದು. ಪ್ರಮುಖ ಕಾದಂಬರಿಕಾರರಾದ ಕುವೆಂಪು, ಶಿವರಾಮ ಕಾರಂತ, ದೇವನೂರ ಮಹಾದೇವ, ಪೂರ್ಣಚಂದ್ರ ತೇಜಸ್ವಿ, ರಾವಬಹಾದ್ದೂರ, ಭಾರತೀಸುತ, ಮಿರ್ಜಿ ಅಣ್ಣಾರಾಯರ ಕಾದಂಬರಿಗಳು ನೆನಪಿನಾಳದಲ್ಲಿ ಅಮರವಾಗಿ ನಿಲ್ಲುತ್ತವೆ. ಕುವೆಂಪುರವರ 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ', ಕಾರಂತರ 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಚೋಮನ ದುಡಿ', ದೇವನೂರ ಮಹಾದೇವರ 'ಒಡಲಾಳ', ರಾವಬಹಾದ್ದೂರರ 'ಗ್ರಾಮಾಯಣ', ತೇಜಸ್ವಿಯವರ 'ಚಿದಂಬರ ರಹಸ್ಯ', ಅನಂತಮೂರ್ತಿಯವರ 'ಸಂಸ್ಕಾರ', ಎಂ.ಕೆ. ಇಂದಿರಾರವರ 'ಪಣಿಯಮ್ಮ', ಮಿರ್ಜಿ ಅಣ್ಣಾರಾಯರ 'ನಿಸರ್ಗ' ಇವು ಕನ್ನಡದ ಅತ್ಯುತ್ತಮವಾದ ಕಾದಂಬರಿಗಳು. ಇವುಗಳಲ್ಲಿ ಪ್ರಾದೇಶಿಕ ಕಾದಂಬರಿಗಳು ಒಂದು ಸಮುದಾಯದ ಜಾತಿ, ಧರ್ಮ, ಭಾಷೆ, ಆಚಾರ–ವಿಚಾರ, ಆಹಾರ–ವಿಹಾರ, ವೇಷಭೂಷಣಗಳು ಮತ್ತು ಅವರ ಬದುಕಿನ ಒಳನೋಟಗಳನ್ನು ಪ್ರತಿಬಿಂಬಿಸುತ್ತವೆ.

ಪ್ರಾದೇಶಿಕ ಕಾದಂಬರಿಗಳು ಒಂದು ಪ್ರದೇಶದ ಸಂಸ್ಕೃತಿಕ ಜೀವನವನ್ನು ವೈವಿಧ್ಯಮಯವಾಗಿ ಕಟ್ಟಿಕೊಡುತ್ತವೆ. ಒಂದು ಪ್ರದೇಶದ ಮಣ್ಣಿನ ವಾಸನೆ, ಭಾಷೆ, ಜನರ ತುಡಿತ ಮತ್ತು ಭಾವನೆಗಳನ್ನು ಮನೋಜ್ಞವಾಗಿ ಚಿತ್ರಿಸುತ್ತವೆ. 'ಕಾದಂಬರಿಕಾರ ಆ ಪ್ರದೇಶಕ್ಕೆ ತೀವ್ರ ಸಮೀಪದವನಾಗಿ ಅಲ್ಲಿಯ ಗಾಳಿ, ನೀರುಗಳಿಂದ ಬೆಳೆದವನಾದುದರಿಂದ ಆತ ಪ್ರಾದೇಶಿಕ ಸಂಸ್ಕೃತಿಯ ಜೀವಂತ ವಿವರಗಳನ್ನು ಯಥಾರ್ಥವಾಗಿ ಮತ್ತು ವಿಶ್ವಾಸಾರ್ಹವಾಗಿ ನಮ್ಮೆದುರು ಇಡುತ್ತಾನೆ'[೧]. ಈ ಕಾದಂಬರಿಗಳು ಪ್ರಾದೇಶಿಕತೆಯನ್ನು

ಒಳಗೊಂಡೇ ಇಡೀ ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಒಂದು ನಿರ್ದಿಷ್ಟ ಪ್ರದೇಶ ಸಂಸ್ಕೃತಿಕ ಅಧ್ಯಯನಕ್ಕೆ ಒಳಪಡುತ್ತದೆ. ಪ್ರಾದೇಶಿಕ ಕಾದಂಬರಿಗಳು ಇತರ ಕಾದಂಬರಿಗಳಿಗಿಂತ ಒಂದು ಪ್ರದೇಶದ ಯಥಾರ್ಥ ಚಿತ್ರಣ ನೀಡುತ್ತವೆ.

ಶ್ರೀ ದೇಜಗೌ ಈ ವಿಚಾರವನ್ನು ಪ್ರಸ್ತಾಪಿಸುತ್ತ 'ಪ್ರಾದೇಶಿಕತೆ ಅಥವಾ ಮಣ್ಣಿನ ವಾಸನೆ ಕಾದಂಬರಿಗಳ ಹೆಗ್ಗುಣಗಳಲ್ಲೊಂದು. ಗಿಡದಂತೆ ಕಾದಂಬರಿಯೂ ನಿರ್ದಿಷ್ಟವಾದೊಂದು ನೆಲದಲ್ಲಿ ಬೇರೂರಿ ಬೆಳೆಯುತ್ತದೆ. ಮಣ್ಣಿನ ಗುಣಕ್ಕೂ, ಹಣ್ಣಿನ ರಸಕ್ಕೂ ಸಂಬಂಧವಿರುವಂತೆಯೇ ನೆಲದ ಗುಣಕ್ಕೂ ಕಾದಂಬರಿಯ ಅಗ್ಗಳಿಕೆಗೂ ಸಂಬಂಧವಿರುತ್ತದೆ'[೨]. ಕುವೆಂಪುರವರ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಮಲೆನಾಡಿನ ಸಮಗ್ರ ಜೀವನವನ್ನು ತೆರೆದಿಡುವುದರ ಜೊತೆಗೆ ಆ ನೆಲದ ಜನಜೀವನದ ಒಳತುಡಿತಗಳನ್ನು ಚಿತ್ರಿಸುತ್ತವೆ. ಇದೇ ಪಂಕ್ತಿಯಲ್ಲಿ ಮೂಡಿಬಂದ ಕಾದಂಬರಿಗಳೆಂದರೆ ಬೈರಪ್ಪನವರ 'ಗೃಹಭಂಗ', ಮಾದವ ಕುಲಕರ್ಣಿಯವರ 'ಬಲಪೀಠ', ಭಾರತೀಸುತರ 'ಹುಲಿಯ ಹಾಲಿನ ಮೇವು', ಚದುರಂಗರ 'ವೈಶಾಖ', ರಾವಬಹಾದ್ದೂರರ 'ಗ್ರಾಮಾಯಣ' ಮತ್ತು ಮಿರ್ಜಿ ಅಣ್ಣಾರಾಯರ 'ನಿಸರ್ಗ'.

ವಿ. ಎಂ. ಇನಾಂದಾರ್‌ರ 'ಕುವೆಂಪು ಕಾದಂಬರಿಗಳು', ದೇಜಗೌ ಅವರ 'ಕುವೆಂಪು ಸಾಹಿತ್ಯ; ಕೆಲವು ಅಧ್ಯಯನಗಳು', ಎನ್. ಬೋರಲಿಂಗಯ್ಯನವರ 'ಕಾನೂರು ಹೆಗ್ಗಡತಿ ವಿವೇಚನೆ', ಬೊಮ್ಮಣ ಶೆಟ್ಟಿಯವರ 'ರಾವಬಹಾದ್ದೂರರ ಬದುಕು ಮತ್ತು ಸಾಹಿತ್ಯ', ಗುರುಪಾದ ಮರಿಗುದ್ದಿಯವರ 'ಕುವೆಂಪು ಕಾದಂಬರಿಗಳು', ಶ್ರೀ ಕೃಷ್ಣ ಆಳನಹಳ್ಳಿಯವರ 'ಗ್ರಾಮಾಯಣ ಸಮೀಕ್ಷೆ', ಮಹಾದೇವ ಕಣವಿಯವರ 'ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು' ಒಂದು ಅಧ್ಯಯನ ಮುಂತಾದ ಅಧ್ಯಯನಗಳು ಇತ್ತೀಚಿಗೆ ನಡೆದಿವೆ. ಆದರೆ ಕನ್ನಡದಲ್ಲಿ ಗಂಭೀರವಾಗಿ ಪ್ರಾದೇಶಿಕ ಕಾದಂಬರಿಗಳು ಅಧ್ಯಯನ, ವಿಶ್ಲೇಷಣೆ ನಡೆದೇ ಇಲ್ಲ. ಅಷ್ಟೇ ಅಲ್ಲ ಅವುಗಳ ವಿವೇಚನೆಯನ್ನು ಕುರಿತಾದ ಒಂದು ಪೂರ್ಣ ಪ್ರಮಾಣದ ಲೇಖನವೂ ಬಂದಿಲ್ಲವೆಂದರೆ ಅದೇನೂ ಆರೋಪವಲ್ಲ'[೩]. ಪ್ರಸ್ತುತ ಸಂದರ್ಭದಲ್ಲಿ ಈ ಕಾದಂಬರಿಗಳನ್ನು ಸಮಗ್ರವಾಗಿ ಮತ್ತೆ ಮತ್ತೆ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಇದರಿಂದ ಹೊಸ ಹೊಸ ಹೊಳಹುಗಳು ಬೆಳಕಿಗೆ ಬರುತ್ತವೆ. ಆದ್ದರಿಂದ ವಿಮರ್ಶಕರು ಮತ್ತು ಸಂಶೋಧಕರು ಪ್ರಾದೇಶಿಕ ಕಾದಂಬರಿಗಳು ಅಧ್ಯಯನದತ್ತ ಗಮನ ಹರಿಸಬೇಕಾಗಿದೆ. ಪ್ರಾದೇಶಿಕ ಕಾದಂಬರಿಗಳ ವಿಮರ್ಶಕರಿಂದ ನಿರ್ಲಕ್ಷಕ್ಕೊಳಗಾಗಿವೆ. ಆದ್ದರಿಂದ ಈ ಕಿರು ಪ್ರಬಂಧ ಒಂದು ಹೊಸ ಕ್ಷೇತ್ರದ ಅನ್ವೇಷಣೆಯಾಗಿದೆ.

೧.೧ ಅಧ್ಯಯನದ ಉದ್ದೇಶ :

'ನಿಸರ್ಗ' ಕಾದಂಬರಿಯು ಹಲವು ದೃಷ್ಟಿಗಳಿಂದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ನಿಸರ್ಗ ಇಷ್ಟೊಂದು ಪ್ರಖ್ಯಾತಿಯನ್ನು ಪಡೆದುಕೊಳ್ಳಲು ಕಾರಣವೇನೆಂದರೆ

ಅದರಲ್ಲಿ ಬಳಕೆಯಾದ ಮರಾಠಿ, ಕನ್ನಡ ಮಿಶ್ರಿತ ಗಡಿನಾಡಿನ ದೇಸಿಭಾಷೆ. ಅದರಲ್ಲಿ ಅಭಿವ್ಯಕ್ತಗೊಂಡ ಪ್ರಾದೇಶಿಕ ಸಂವೇದನೆಗಳು. ನಿಸರ್ಗದ ಕಥಾವಸ್ತು ಮತ್ತು ಶೈಲಿ ತುಂಬಾ ವೈವಿಧ್ಯಮಯವಾದದ್ದು. ಅಣ್ಣಾರಾಯರು ಒಂದು ಜೈನ ಕುಟುಂಬದಲ್ಲಿಯೇ ಹುಟ್ಟಿ, ಜೈನ ಧರ್ಮದಲ್ಲಿಂಯ ಒಳ್ಳೆಯತನ ಮತ್ತು ಅಲ್ಲಿಯ ದೋಷಗಳನ್ನು, ಜನರ ಸಂಕುಚಿತತೆ, ಜನರ ವಿಚಾರಗಳು, ಆಸ್ತಿ ಕೇಂದ್ರಿತ ಭಾವನೆಗಳು ಮುಂತಾದವುಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತಾರೆ. ಜೈನ ಸಮುದಾಯದಲ್ಲಿ ಯಾವುದನ್ನು ಮಡಿವಂತಿಕೆ ಎಂದು ಹೇಳುತಿದ್ದರೋ ಅದನ್ನೇ ಅವರು ಯಾವ ಭಯವಿಲ್ಲದೇ ನಿಸರ್ಗದಲ್ಲಿ ಚಿತ್ರಿಸಿದ್ದಾರೆ. ಹೆಣ್ಣು ಗಂಡುಗಳ ಅನೈತಿಕ ಸಂಬಂಧವನ್ನು ವಸ್ತುವಾಗಿರಿಸಿಕೊಂಡು ಕಾದಂಬರಿಯನ್ನು ರಚಿಸಿರುವುದು ಸ್ತುತ್ಯಾರ್ಹ.

ಇಡೀ ಕಾದಂಬರಿಯ ಕೇಂದ್ರಬಿಂದು ಒಂದು ಮಧ್ಯಮ ವರ್ಗದ ಜೈನ ಕುಟುಂಬ. ಜೈನ ಧರ್ಮ ಮತ್ತು ಜೈನ ಕುಟುಂಬಗಳ ಸಮಗ್ರ ಚಿತ್ರಣ ನೀಡುತ್ತಾರೆ. ನಿಸರ್ಗದ ಜೀವಾಳ ಅನಂತ ತಾರೆಯರು. 'ಅನಂತ ತಾರೆಯರು ಬೆಳೆದು ಬಂದ ಪರಿಸರದ ಪರಿಣಾಮವಾಗಿ ಅವರಲ್ಲಿ ಪ್ರೇಮಾಂಕುರವಾದದ್ದು ನಿಸರ್ಗ ಸಹಜ ಧರ್ಮ. ನಿಸರ್ಗ ಶಕ್ತಿಗೆ ಶರಣು ಹೋದ ಅವರು ತಮ್ಮ ಅನ್ಯೋನ್ಯ ಪ್ರೇಮವನ್ನು ವಿವಾಹದ ನಂತರವೂ ಉಳಿಸಿಕೊಳ್ಳುತ್ತಾರೆ. ನೀತಿ ನಿಯಮಗಳು ಕೂಡ ನೈಸರ್ಗಿಕ ಸೆಳೆತಗಳನ್ನು ಗೆಲ್ಲಲು ಸಾಧ್ಯವಾಗಲಿಲ್ಲ. 'ನಿಸರ್ಗ' ಎಂಬ ಶೀರ್ಷಿಕೆ ಈ ಅದಮ್ಯ ಪ್ರೇಮಶಕ್ತಿಯನ್ನು ಸಮರ್ಥಿಸುತ್ತದೆ. ಅನಂತ ತಾರೆಯರು ಚಿಕ್ಕಂದಿನಿಂದ ಬೆಳೆದು ಬಂದ ವಾತಾವರಣವೇ ಅಂತಹದಾಗಿತ್ತು. ನಿಸರ್ಗದತ್ತವಾಗಿ ಬಂದ ಕಾಮವನ್ನು ಗೆಲ್ಲುವ ಒಂದು ಸೆಣಸಾಟವೂ ಇಲ್ಲಿ ನಡೆಯುತ್ತದೆ. ಆದರೆ ಅದರಲ್ಲಿ ಯಶಸ್ಸು ದೊರೆಯುವುದಿಲ್ಲ. ನೈಸರ್ಗಿಕವಾದದ್ದೇ ಮೈಲುಗೈ ಸಾಧಿಸುತ್ತದೆ. ಇದಕ್ಕೆ ಪ್ರಾದೇಶಿಕ ಬದುಕಿನ ಹಿಂದಿನ ವಾತಾವರಣ, ಪರಿಸರ ಕಾರಣವಾಗುತ್ತದೆ'[೪].

ಬ್ರಾಹ್ಮಣ ಧರ್ಮದಲ್ಲಿಯ ಕಟ್ಟುಪಾಡು, ಕರ್ಮಟತನಗಳ ಬದುಕು ಜೈನ ಧರ್ಮದಲ್ಲಿ ನೆಲೆಮಾಡಿವೆ. ಬ್ರಾಹ್ಮಣ ಧರ್ಮದಲ್ಲಿಯ ಹಿಂಸೆಯನ್ನು 'ಪರಿತ್ಯಜಿಸಿ' ರಚನೆಯಾದ ಧರ್ಮವೆಂದರೆ ಅದು ಜೈನ ಧರ್ಮ. ಬ್ರಾಹ್ಮಣ ಧರ್ಮದಲ್ಲಿಯ ಎಲ್ಲ ಕಟ್ಟುಪಾಡುಗಳು ಜೈನ ಧರ್ಮದಲ್ಲಿ ಜೀವಂತವಾಗಿ ಉಳಿದುಕೊಂಡಿವೆ. ಆರಂಭದ ಘಟ್ಟದಲ್ಲಿ ಅಹಿಂಸಾ ಪರಮೋಧರ್ಮವೆಂದು ಭೋದಿಸುತ್ತಿದ್ದ ಜೈನ ಧರ್ಮ ಕಾಲಾನಂತರದಲ್ಲಿ ತನ್ನ ಸ್ವರೂಪವನ್ನು ಬದಲಿಸಿಕೊಂಡಿತು. ಸರ್ವಸಮಾನತೆಯನ್ನುಂಟು ಮಾಡುವುದು ಜೈನಧರ್ಮದ ಗುರಿಯಾದರೂ ಅನ್ಯ ಸಂಪ್ರದಾಯಗಳ ಪ್ರಭಾವದಿಂದ ಜೈನರು ಇದನ್ನು ಮರೆತಿದ್ದಾರೆ. ಇದರಿಂದಾಗಿ ಜಾತಿಭೇದಗಳನ್ನು ಅನುಸರಿಸುತ್ತಿದ್ದಾರೆ. ಜೈನ ಸಂಸ್ಕೃತಿಗೆ ಒಗ್ಗದೇ ಇರುವ ಜ್ಯೋತಿಷ್ಯ ಆಚರಣೆಯಲ್ಲಿದೆ. ಯಜ್ಞ ಕ್ರಿಯಾಕಾಂಡಗಳನ್ನು ಉಳಿಸಿಕೊಂಡು ಬಂದಿರುವುದು ಜೈನ ಸಂಸ್ಕೃತಿಯ ವಿರುದ್ಧವಾಗಿದೆ ಎಂಬುದು ಅವರ ಅಭಿಮತ. ಜೈನ ಧರ್ಮದಲ್ಲಿ ಕರ್ಮಟತನ ನಿರ್ಮಾಣವಾದದ್ದು ಹೇಗೆ? ಎಂಬುದು ನಿಸರ್ಗ ಕಾದಂಬರಿಯಲ್ಲಿ

ಅಭಿವ್ಯಕ್ತಗೊಂಡಿದೆ. ಈ ದೃಷ್ಟಿಯಿಂದ ನಿಸರ್ಗದಲ್ಲಿಯ ಸಂವೇದನೆಗಳು ಸಾಕಷ್ಟು ಪ್ರಸ್ತುತವಾಗುತ್ತವೆ. ಮೂಲ ಜೈನ ಧರ್ಮ ಮತ್ತು ಪ್ರಸ್ತುತ ಜೈನ ಧರ್ಮದಲ್ಲಿ ನಡೆದ ಎಲ್ಲ ಮಾರ್ಪಾಡುಗಳನ್ನು ತಿಳಿದುಕೊಳ್ಳುವುದು ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ.

ಅಣ್ಣಾರಾಯರಿಗೆ ಗುಜರಾತಿ ಮತ್ತು ಬಂಗಾಲಿ ಭಾಷೆಗಳ ಜ್ಞಾನ ಇತ್ತೆ? ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಆದರೆ ಶರಶ್ಚಂದ್ರ ಚಟರ್ಜಿಯವರ 'ದೇವದಾಸ', ಅಣ್ಣಾರಾಯರ 'ನಿಸರ್ಗ' ಒಂದೇ ಕಥಾವಸ್ತುವನ್ನು ಒಳಗೊಂಡಿವೆ. ಬಂಗಾಲಿ ಕಾದಂಬರಿಯ ಪ್ರಭಾವ ಅವರ ಮೇಲೆ ಬೀರಿರದಿದ್ದರೆ ಅಣ್ಣಾರಾಯರ 'ನಿಸರ್ಗ' ಕಲ್ಪನೆ ತೀರ ಹೊಸದು.

ಅಣ್ಣಾರಾಯರಿಗೆ ಇಂಗ್ಲೀಷ ಚೆನ್ನಾಗಿ ಗೊತ್ತಿರಲಿಲ್ಲ. ಜೊತೆಗೆ ಮನೋವಿಜ್ಞಾನವನ್ನು ಅಧ್ಯಯನ ಮಾಡಿದವರಲ್ಲ. ಸಿಗ್ಮಂಡ ಫ್ರಾಯ್ಡ ಮತ್ತು ಯೂಂಗರ ಸಿದ್ಧಾಂತಗಳತ್ತ ದೃಷ್ಟಿ ಬೀರಿದವರಲ್ಲ. ಆದರೆ ನಿಸರ್ಗ ಮನೋವೈಜ್ಞಾನಿಕ ನೆಲೆಯಲ್ಲಿ ವಿಕಾಸಗೊಳ್ಳುತ್ತ ಹೋಗುತ್ತದೆ. ಅನೇಕ ಮನೋವೈಜ್ಞಾನಿಕ ಸಂಗತಿಗಳು ನಿಸರ್ಗದುದ್ದಕ್ಕೂ ಗೋಚರಿಸುತ್ತವೆ. 'ಇಂಗ್ಲೀಷ ವಿದ್ಯಾಭ್ಯಾಸದ ಪ್ರಭಾವದಿಂದ ದೂರುಳಿದು ಬರೇ ಮರಾಠಿ ಸಾಹಿತ್ಯವನ್ನೋದಿಕೊಂಡು ಬರೆದಂತ ತಮ್ಮ ಮೊದಲ ಕಾದಂಬರಿ ಇಷ್ಟೊಂದು ಪ್ರಸಿದ್ಧತೆಯನ್ನು ಪಡೆದು ಬಹುಮಾನ ಇತ್ಯಾದಿಗಳನ್ನು ಗಳಿಸಿತೆಂದು ಸ್ವತಃ ಅಣ್ಣಾರಾಯರಿಗೇ ಅನಿಸಿರಲಿಕ್ಕಿಲ್ಲ'[೫] ಎಂದು ನಿಸರ್ಗದ ಬಗೆಗೆ ಬರೆದುದು ಸಮಂಜಸವಾಗಿದೆ.

'ನಿಸರ್ಗ'ವಂತೂ ಕನ್ನಡ ಪ್ರಾದೇಶಿಕ ಕಾದಂಬರಿಗಳಲ್ಲಿ ಶ್ರೇಷ್ಠ ಶ್ರೇಣಿಯ ಕೃತಿ ಜೀವನವನ್ನು ಸಮಗ್ರ ದೃಷ್ಟಿಯಿಂದ ನೋಡುವ, ವಿಸ್ತಾರವಲ್ಲದೆ ಪ್ರಾದೇಶಿಕತೆಯ ಬೆಡಗನ್ನೂ ಗರ್ಭೀಕರಿಸಿಕೊಂಡ ಗಮನಾರ್ಹ ಕಾದಂಬರಿಯದು. ಈ ಕಾದಂಬರಿಯ ಭಾಷೆ, ಆ ಪ್ರದೇಶದ ಜನರಾಡುವ ದಿನಬಳಕೆಯ ಮಾತು, ಜನಸಮುದಾಯದ ಉಸಿರು, 'ನಿಸರ್ಗದಷ್ಟು ನಿರರ್ಗಳವಾಗಿ ಹರಿದು ಬಂದ ಭಾಷೆ ಕತೆಯೊಡನೆ ಹೆಣೆದುಕೊಂಡು ಕಾದಂಬರಿಯ ಶ್ರೇಷ್ಠತೆಗೆ ಕಾರಣವಾಗಿದೆ. ದೇಸಿಭಾಷೆಯನ್ನು ತಂದು ಕಾದಂಬರಿಯ ಶೈಲಿ ಸಂವಾದಗಳಲ್ಲಿ ಎರಕ ಹೊಯ್ಯುವ ಶಕ್ತಿ ಅಣ್ಣಾರಾಯರಂಥ ಜೀವನ ವಿಮರ್ಶಕರಿಗೆ ಸಾಧ್ಯ' ಎಂಬ ಅಭಿಪ್ರಾಯವನ್ನು ಮೆಚ್ಚಲೇಬೇಕು.[೬]

ಒಬ್ಬ ಸೃಜನಶೀಲ ಲೇಖಕ ಸೃಜನಶೀಲ ಮನಸ್ಸುಗಳನ್ನು ಚಿತ್ರಿಸುತ್ತಾನೆ ಎಂಬುದಕ್ಕೆ ನಿಸರ್ಗವೇ ಸಾಕ್ಷಿ. ಆದುದರಿಂದ 'ನಿಸರ್ಗ'ದ ಅಧ್ಯಯನ ಪ್ರಸ್ತುತವೂ ಮತ್ತು ಮಹತ್ವಪೂರ್ಣವೂ ಆಗಿದೆ. ಒಟ್ಟಂದದಲ್ಲಿ ನಿಸರ್ಗ ಕಾದಂಬರಿಕಾರರಾದ ಅಣ್ಣಾರಾಯರ

ಬದುಕು ಮತ್ತು ಬರಹ ಇವೆರಡು ವೈಶಿಷ್ಟ್ಯಪೂರ್ಣವಾಗಿವೆ. ಈ ನಿಟ್ಟಿನಲ್ಲಿ ನಿಸರ್ಗ ಕಾದಂಬರಿಯಲ್ಲಿ ಜೈನ ಸಂವೇದನೆಯು ಹಾಗೂ ತಾತ್ವಿಕ ಚಿಂತನೆಯು ಎಲ್ಲೆಡೆಯಲ್ಲಿ ಮಾನವೀಯ ಮೌಲ್ಯಗಳನ್ನು ಹಾಗೂ ಚಿಂತನೆಗಳನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದೆ. ಈ ನಿಸರ್ಗ ಕಾದಂಬರಿಯನ್ನು ಸಂಪೂರ್ಣ ಅಧ್ಯಯನಕ್ಕೊಳಪಡಿಸಿ ಅದರಲ್ಲೂ ಜೈನ ಸಂವೇದನೆಗಳು ಎಂಬ ಅಂಶದಿಂದ ನೋಡಲಾಗಿ ಎಂ.ಫಿಲ್. ಅಧ್ಯಯನಕ್ಕಾಗಿ ಒಟ್ಟು ಐದು ಅಧ್ಯಾಯಗಳನ್ನಾಗಿ ಮಾಡಿ ವಿಂಗಡಿಸಿಕೊಳ್ಳಲಾಗಿದೆ.

೧.೨ ಅಧ್ಯಯನದ ಸ್ವರೂಪ :

ಪ್ರಸ್ತುತ ಅಧ್ಯಯನವು ಐದು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ಒಳಗೊಂಡಿದೆ. ಎರಡನೆಯ ಅಧ್ಯಾಯವು 'ಅಣ್ಣಾರಾಯರು ಮತ್ತು ಜೈನ ಪರಿಸರ', ಮೂರನೆಯ ಅಧ್ಯಾಯದಲ್ಲಿ 'ನಿಸರ್ಗ ಕಾದಂಬರಿಯ ವಸ್ತು ಮತ್ತು ತಾತ್ವಿಕತೆ' ಕುರಿತು ಚರ್ಚಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ "ನಿಸರ್ಗ'ದಲ್ಲಿಯ ಜೈನ ಸಂವೇದನೆಯ ಒಳನೋಟಗಳು', ಐದನೆಯ ಅಧ್ಯಾಯ ಸಮಾರೋಪ. ಇದರಲ್ಲಿ ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ.

೧.೩ ಅಧ್ಯಯನದ ವ್ಯಾಪ್ತಿ :

ಅಣ್ಣಾರಾಯರ ಬಹುಪಾಲು ಸಾಹಿತ್ಯ ಜೈನ ಧರ್ಮ ಕುರಿತಾದದ್ದು. ಅವರು ಒಟ್ಟು ೫೭ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಪ್ರಸ್ತುತ ಅಧ್ಯಯನ ಸೂಕ್ಷ್ಮ ಅಧ್ಯಯನವಾಗಿದ್ದುದರಿಂದ ಅವರ 'ನಿಸರ್ಗ' ಕಾದಂಬರಿಯನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕೃಷ್ಣಾ ನದಿತೀರದಲ್ಲಿ 'ಜೈನ ಧರ್ಮವೇ ಪ್ರಧಾನವಾಗಿರುವ ಪ್ರದೇಶದಲ್ಲಿ ಆ ಪ್ರದೇಶದ ಜೈನ ಸಮಾಜದ ಸಂಪ್ರದಾಯಗಳು, ಮದುವೆಯ ಸಂಭ್ರಮ, ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ, ಸೊಸೆಯನ್ನು ಮನೆತುಂಬಿಸಿಕೊಳ್ಳುವಾಗ ಅನುಸರಿಸುವ ನಿಯಮಗಳು, ಶೋಭನ ಪ್ರಸ್ತ, ದೇವತೆಗಳಿಗೆ ಮಾಡುವ ಹಬ್ಬ ಇವೆಲ್ಲವುಗಳಲ್ಲೆಲ್ಲ ತನ್ನ ದೊಡ್ಡಸ್ತಿಕೆಯನ್ನು ತೋರಿಸುವ 'ಪಂಡಿತ' ಅಂದರೆ ಜೋಯಿಸ, ಉಡಿಕೆ ಮಾಡಿಕೊಳ್ಳುವ ಪದ್ಧತಿ, ಜಾತ್ರೆ, ಪೂಜಾರಿಯ ಮೈಮೇಲೆ ದೇವರು ಬರುವುದು, ಭವಿಷ್ಯ ಹೇಳುವುದು ಇಂತಹ ಅಂಶಗಳೆಲ್ಲ ಕಾದಂಬರಿಗೆ ಕಸುವನ್ನಿತ್ತು ಅದನ್ನು ಅರ್ಥಪೂರ್ಣವಾಗಿಸಿವೆ'[೭]. ಅಣ್ಣಾರಾಯರ ಇನ್ನುಳಿದ ಎಲ್ಲ ಕಾದಂಬರಿಗಳಲ್ಲಿ 'ನಿಸರ್ಗ' ಉನ್ನತಮಟ್ಟದ ಕೃತಿ. ಅಣ್ಣಾರಾಯರು ತಮ್ಮ ಸುತ್ತಲೂ ನಿಸರ್ಗದಂತೆ ಹಬ್ಬಿದ ಜನಜೀವನದ ವಿವಿಧ ಮುಖಗಳ ಚಿತ್ರಣವನ್ನು ಕಣ್ಣು ಕಟ್ಟುವಂತೆ ಚಿತ್ರಿಸುತ್ತಾರೆ. 'ಬೆಳಗಾವಿ ಜಿಲ್ಲೆಯ ಕೃಷ್ಣಾತೀರದ ಸಮಗ್ರ ಜೀವನಾನುಭವ ಜೀವಂತಿಕೆಯ ಪಾಠಶಾಲೆಯಂತಿದೆ'[೮].

೧.೪ ಅಧ್ಯಯನದ ವೈಧಾನಿಕತೆ :

ಇದು ಪಠ್ಯ ಕೇಂದ್ರಿತ ಅಧ್ಯಯನವಾಗಿರುವುದರಿಂದ ನಿಸರ್ಗ ಕಾದಂಬರಿಯನ್ನು ಅಂರತ್‌ಶಿಸ್ತೀಯ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ನಿಸರ್ಗ ಕನ್ನಡದ ಮಹತ್ವದ ಪ್ರಾದೇಶಿಕ ಕಾದಂಬರಿಗಳಲ್ಲೊಂದು. ಅಲ್ಲಿಯ ನಿಸರ್ಗ ತತ್ವ ವಿಶ್ವಮಾನ್ಯವಾಗಿದ್ದರೂ ಅದನ್ನು ನೋಡುವ ದೃಷ್ಟಿ ಅಪ್ಪಟ ಪ್ರಾದೇಶಿಕವಾದುದು. ಜೈನ ಸಮುದಾಯಿಕ ಭಾವನೆಗಳನ್ನು ಅಣ್ಣಾರಾಯರು ಮನೋಜ್ಞವಾಗಿ ಬಿಂಬಿಸಿರುವರು. ಆದ್ದರಿಂದ ಈ ಕೃತಿ ಕೇಂದ್ರಿತ ವಿಶ್ಲೇಷಣಾ ವಿಧಾನವನ್ನು ಅಳವಡಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕಾದಂಬರಿಯ ವಸ್ತು, ಪಾತ್ರಗಳ ಬೆಳವಣಿಗೆ, ವೈಚಾರಿಕ ಸಂಘರ್ಷ, ಧಾರ್ಮಿಕ ಮತ್ತು ಸಾಮಾಜಿಕ ತಾಕಲಾಟಗಳನ್ನು ಹೊಸಗನ್ನಡ ಸಂದರ್ಭದ ಅನೇಕ ಸಾಹಿತ್ಯಿಕ ಚಳುವಳಿಗಳೊಂದಿಗೆ ಅನ್ವಯಿಸಿ ನೋಡುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಸ್ತ್ರೀವಾದದ ಹಿನ್ನಲೆಯಲ್ಲಿ ಈ ಕಾದಂಬರಿಯ ನಾಯಕಿಯನ್ನು ಕಂಡುಕೊಳ್ಳಲು ಯತ್ನಿಸಲಾಗಿದೆ.

❖❖❖❖❖

ಅಡಿಟಿಪ್ಪಣಿಗಳು :

೧. ಮಹಾದೇವ ಕಣವಿ : ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು ಒಂದು ಅಧ್ಯಯನ : ಪು.ಸಂ. ೯೮
೨. ದೇ.ಜ.ಗೌ : ಬ್ರಹ್ಮಗಿರಿ (ಭಾರತೀಸುತರ ಕಾದಂಬರಿಗಳಲ್ಲಿ ಪ್ರಾದೇಶಿಕತೆ) : ಪು.ಸಂ. ೩೨೫
೩. ಮಹಾದೇವ ಕಣವಿ : ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು ಒಂದು ಅಧ್ಯಯನ : ಪು.ಸಂ. ೫೭
೪. ಶಿವಾನಂದ ಗಾಳಿ : ಮಿರ್ಜಿ ಅಣ್ಣಾರಾಯರು – ಒಂದು ಅಧ್ಯಯನ : ಪು.ಸಂ. ೮೮
೫. ಶಾಂತಿನಾಥ ದೇಸಾಯಿ : ಸ್ವಸ್ತಿ (ತ. ಸು. ಶಾಮರಾಯರ ಅಭಿನಂದನ ಗ್ರಂಥ) : ಪು.ಸಂ. ೭೧೯
೬. ಹಿರೇಮಲ್ಲೂರು ಈಶ್ವರನ್ – ಮಿರ್ಜಿ ಅಣ್ಣಾರಾಯ : ಪು.ಸಂ. ೩೯
೭. ಮಹಾದೇವ ಕಣವಿ : ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು ಒಂದು ಅಧ್ಯಯನ : ಪು.ಸಂ. ೨೨೬
೮. ಸಿದ್ದಣ್ಣಾ ಉತ್ನಾಳ : ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ : ಪು.ಸಂ. ೩೧

ಅಧ್ಯಾಯ : ೨

ಅಣ್ಣಾರಾಯರು ಮತ್ತು ಜೈನ ಪರಿಸರ

ಅಧ್ಯಾಯ – ೨
ಅಣ್ಣಾರಾಯರು ಮತ್ತು ಜೈನ ಪರಿಸರ

೨.೧ ಅಣ್ಣಾರಾಯರು ಮತ್ತು ನವೋದಯ ಸಾಹಿತ್ಯ :

ನವೋದಯ ಸಂದರ್ಭದ ಬಹುದೊಡ್ಡ ಕಾದಂಬರಿಕಾರರು ಮಿರ್ಜಿ ಅಣ್ಣಾರಾಯರು. ೧೯೨೧ ರಲ್ಲಿ ಬಿ.ಎಂ.ಶ್ರೀ.ಯವರ 'ಇಂಗ್ಲೀಷ ಗೀತೆಗಳು' ಅನುವಾದದಿಂದ ನವೋದಯ ಪ್ರಾರಂಭವಾಯಿತು. ಬೇಂದ್ರೆ ಮತ್ತು ಅವರ ಗೆಳೆಯರ ಗುಂಪು ಧಾರವಾಡ ಭಾಗದಲ್ಲಿ ನವೋದಯ ಯುಗಕ್ಕೆ ನಾಂದಿಯಾಯಿತು. ನಾಡಹಬ್ಬ, ವಿದ್ಯಾರಣ್ಯರ ಉತ್ಸವ, ವಿಜಯನಗರದ ಉತ್ಸವ, ಬಸವೇಶ್ವರ ಜಯಂತಿ, ನಿಜಗುಣ ಶಿವಯೋಗಿಗಳ ಉತ್ಸವ, ಪಂಪೋತ್ಸವ, ರನ್ನೋತ್ಸವ ಮುಂತಾದ ಸಾಂಸ್ಕೃತಿಕ ಉತ್ಸವಗಳ ಆಚರಣೆಯಿಂದಾಗಿ ನವೋದಯದ ಗಾಳಿ ಉತ್ತರ ಕರ್ನಾಟಕದತ್ತ ಹರಿಯಲಾರಂಭಿಸಿತು. ಬೇಂದ್ರೆಯವರು ತಮ್ಮ ಸಾಹಿತ್ಯದೊಂದಿಗೆ ಹೊಸ ಹೊಸ ಸಾಹಿತಿಗಳನ್ನು ನಿರ್ಮಾಣ ಮಾಡಿದರು. ಅಣ್ಣಾರಾಯರು ನವೋದಯದ ಕೊನೆಯಲ್ಲಿ ಬರುವ ಲೇಖಕರು. ಅದೇ ಸಮಯಕ್ಕೆ ಪ್ರಗತಿಶೀಲ ಸಾಹಿತ್ಯ ಆರಂಭದ ಹಂತದಲ್ಲಿತ್ತು. ಆದರೂ ಅಣ್ಣಾರಾಯರ ಒಟ್ಟು ಸಾಹಿತ್ಯದ ಮೇಲೆ ನವೋದಯದ ದಟ್ಟ ಪ್ರಭಾವವಿದೆ. ಅಣ್ಣಾರಾಯರ ಮೊದಲ ಕಾದಂಬರಿ 'ನಿಸರ್ಗ' ಪ್ರಕಟವಾದದ್ದು ೧೯೪೫ ರಲ್ಲಿ. ಅದು ನವೋದಯದ ಕೊನೆಯ ಅಂಚಿನಲ್ಲಿ ಮೂಡಿಬಂದ ಕಾದಂಬರಿ. ೧೯೪೫ರ ಸಂದರ್ಭದಲ್ಲಿಯೂ ನವೋದಯದ ಕಾವು ಇನ್ನೂ ಆರಿರಲಿಲ್ಲ ಎನ್ನುವುದಕ್ಕೆ ಅಣ್ಣಾರಾಯರ ನಿಸರ್ಗವೇ ಸಾಕ್ಷಿ. ಇದೇ ಸಮಯಕ್ಕೆ ಬಸವರಾಜ ಕಟ್ಟೀಮನಿಯವರು ಪ್ರಗತಿಶೀಲ ಚಳುವಳಿಯಲ್ಲಿ ಧುಮುಕಿದರು. ಪ್ರಗತಿಶೀಲತೆಯನ್ನು ಪ್ರತಿಬಿಂಬಿಸುವ 'ಮಾಡಿ ಮಡಿದವರು' ಕಾದಂಬರಿಯನ್ನು ಕಟ್ಟೀಮನಿಯವರು ರಚಿಸಿದರು. ಅದೇ ಸಮಯದಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವ 'ಪ್ರತಿಸರಕಾರ' ಕಾದಂಬರಿ ಅಣ್ಣಾರಾಯರಿಂದ ಸೃಷ್ಟಿಯಾಯಿತು.

ನವೋದಯ ಸಾಹಿತ್ಯದ ಕೇಂದ್ರಬಿಂದು ಮುಖ್ಯವಾಗಿ ಮಾನವ. ಪ್ರಕೃತಿ ಮತ್ತು ಮಾನವನ ಸಂಬಂಧದ ಗಾಢತೆಯನ್ನು ನವೋದಯ ಪ್ರತಿಬಿಂಬಿಸುತ್ತದೆ. ನಾಡಿನ ನೆಲ ಜಲದ ಬಗ್ಗೆ ನವೋದಯ ಸಾಹಿತಿಗಳಿಗೆ ಅಪಾರ ಅಭಿಮಾನ. ಭಾರತದ ಸ್ವಾತಂತ್ರ್ಯ ಚಳುವಳಿ ನವೋದಯ ಕಾವ್ಯದ ಮುಖ್ಯವಸ್ತು. ದೇಶಭಕ್ತಿ, ಪ್ರಕೃತಿ ವರ್ಣನೆ, ಆತ್ಮೋದ್ಧಾರ,

ನೀತಿ, ಆಧ್ಯಾತ್ಮ, ಪ್ರೀತಿ, ಪ್ರೇಮ, ನಾಡು–ನುಡಿಯ ಅಭಿಮಾನ, ಸಾಮಾಜಿಕ ಚಿಂತನೆ ಮುಂತಾದವುಗಳೆಲ್ಲ ನವೋದಯ ಸಾಹಿತ್ಯದ ಮೂಲ ನೆಲೆಗಳು. ದೇವರ ಪ್ರಾರ್ಥನೆಯ ಜೊತೆಗೆ ಜೀವನ ಶುದ್ಧಿಗೂ ನವೋದಯ ಪ್ರಾಮುಖ್ಯತೆ ನೀಡಿದೆ. ನವೋದಯದ ಈ ಪ್ರಭಾವ ಮಿರ್ಜಿ ಅಣ್ಣಾರಾಯರ ಮೇಲೆ ಗಾಢವಾಗಿ ಬೀರಿದ್ದು, ಈ ಪ್ರಭಾವಲಯದಲ್ಲಿಯೇ ಅವರ ಸಾಹಿತ್ಯ ಮೂಡಿ ಬಂದಿದೆ.

೨.೨ ಅಣ್ಣಾರಾಯರ ಸಾಹಿತ್ಯ :

ನವೋದಯ ಸಂದರ್ಭದ ಅದ್ವಿತೀಯ ಸಾಹಿತಿಯಾಗಿ, ಕಥೆ, ಕಾದಂಬರಿ, ಅನುವಾದ, ವ್ಯಕ್ತಿಚಿತ್ರಣ, ಕವಿತೆ, ಮಕ್ಕಳ ಸಾಹಿತ್ಯ, ವಿಮರ್ಶೆ, ಗ್ರಂಥ ಸಂಪಾದನೆ, ಧಾರ್ಮಿಕ, ಶಿಕ್ಷಣ ಮುಂತಾದ ಕ್ಷೇತ್ರಗಳಿಗೆ ಅಪೂರ್ವ ಕೊಡುಗೆ ಸಲ್ಲಿಸಿದ್ದಾರೆ. ಅಣ್ಣಾರಾಯರು ಡಾ. ಆ. ನೆ. ಉಪಾಧ್ಯೆ, ಬೆಟಗೇರಿ ಕೃಷ್ಣಶರ್ಮ ಮತ್ತು ರಂ. ಶ್ರೀ. ಮುಗಳಿಯವರಿಂದ ಪ್ರಭಾವಿತರಾಗಿದ್ದಾರೆ. ಅಣ್ಣಾರಾಯರು 'ಇಂದುತನಯ' ಕಾವ್ಯನಾಮದಿಂದ ಕನ್ನಡ ಸಾರಸ್ವತ ಲೋಕವನ್ನು ಪ್ರವೇಶಿಸಿದರು. ಅವರ ಪ್ರಥಮ ಕವನ 'ಬೆಳ್ಳಿಚುಕ್ಕಿ', ಆದರೆ ಅಣ್ಣಾರಾಯರು ನಮ್ಮ ಗಮನಸೆಳೆದದ್ದು ಕಾದಂಬರಿಕಾರರಾಗಿ.

'ಅಣ್ಣಾರಾಯರು ೧೨ ಕಾದಂಬರಿ, ೩ ಸಣ್ಣ ಕಥಾ ಸಂಕಲನ, ೮ ವ್ಯಕ್ತಿಚಿತ್ರಣ, ೫ ಮಕ್ಕಳ ಕೃತಿ, ೯ ಸಂಪಾದನೆ, ೩ ಶೈಕ್ಷಣಿಕ ಕೃತಿ, ೪ ಧಾರ್ಮಿಕ ಪ್ರೌಢ ಪ್ರಬಂಧ, ೪ ಅನುವಾದ, ೪ ಸಂಕೀರ್ಣ ಕೃತಿಗಳನ್ನಲ್ಲದೇ ೧೩೮ ಲೇಖನಗಳನ್ನು ಪ್ರಕಟಿಸಿರುವರು. ಅವರ 'ಜೈನ ಧರ್ಮ' ಮೇರು ಕೃತಿ, 'ನಿಸರ್ಗ' ಕನ್ನಡದ ಅತ್ಯುತ್ತಮ ಕಾದಂಬರಿಗಳಲ್ಲೊಂದು. ಮುಂಬೈ ಸರಕಾರದ ಬಹುಮಾನ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡ 'ನಿಸರ್ಗ'ಕ್ಕೆ ಹಲವು ವಿಶ್ವವಿದ್ಯಾಲಯಗಳಲ್ಲಿ ಪಠ್ಯ ಗೌರವ, ಗಡಿಭಾಷೆ, ಬದುಕು ಸಂಸ್ಕೃತಿಯ ಸೊಗಡಿನಿಂದ ತುಂಬಿಕೊಂಡ 'ನಿಸರ್ಗ' ಅಣ್ಣಾರಾಯರ ಮೊದಲ ಕೃತಿಯೂ ಹೌದು. ಉತ್ಕೃಷ್ಟ ಕೃತಿಯೂ ಹೌದು. ಅಶೋಕ ಚಕ್ರ, ರಾಮಣ್ಣ ಮಾಸ್ತರು, ರಾಷ್ಟ್ರ ಪ್ರತಿಸರಕಾರ ಇತರ ಪ್ರಮುಖ ಕಾದಂಬರಿಗಳು. ಮಿರ್ಜಿಯವರು ೧೯ ಕಥೆಗಳನ್ನು ರಚಿಸಿದ್ದು ಪ್ರಣಯ ಸಮಾಧಿ, ವಿಜಯಶ್ರೀ, ಅಮರ ಕಥೆಗಳು ಅವರ ಕಥಾ ಸಂಕಲನಗಳು'.[೧]

ಅಣ್ಣಾರಾಯರಿಗೆ ಸಾಹಿತ್ಯ ಪರಿಷತ್ತಿನ ಪುರಸ್ಕಾರ, ಆದರ್ಶ ಶಿಕ್ಷಕ ಪ್ರಶಸ್ತಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಬಹುಮಾನ, ದೇವರಾಜ್ ರಾವ್ ಬಹಾದ್ದೂರ್ ಪಾರಿತೋಷಕಗಳೊಂದಿಗೆ ಅನೇಕ ಸಂಘ–ಸಂಸ್ಥೆಗಳಿಂದ ಗೌರವ, ಸನ್ಮಾನ, ಸತ್ಕಾರ ನಡೆದವು. ಶಿವರಾಮ ಕಾರಂತರು "'ನಿಸರ್ಗ' ಕಾದಂಬರಿ ಅಮೂಲ್ಯವಾದ ಮುತ್ತು', 'ಇಂತಹ ಹತ್ತು ಕಾದಂಬರಿಗಳು ಬಂದರೆ ಸಾಕು, ಕನ್ನಡದ ದಾರಿದ್ರ್ಯ ದೂರಾಗುವುದು' ಎಂದು ಪ್ರಶಂಸಿದ್ದಾರೆ.

ಅಣ್ಣಾರಾಯರ ಹೆಚ್ಚಿನ ಲೇಖನಗಳು ಮಾಸ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಅವರ ಲೇಖನಗಳು ಜಯಂತಿ, ಜಯಕರ್ನಾಟಕ, ಜೀವನ, ಆದರ್ಶ, ಪುಸ್ತಕ ಪ್ರಪಂಚ, ಸನ್ಮತಿ, ಗುರುದೇವ, ವಿವೇಕಾಭ್ಯುದಯ, ಜಿನವಜಯ, ಉಷಾ, ಪ್ರಕಾಶ, ಸುಬೋಧ, ಪ್ರದೀಪ, ಜನತಾ, ಪ್ರಬುದ್ಧ ಕರ್ನಾಟಕ, ಸಮಾಜ, ದೇಶಬಂಧು ಮತ್ತು ಯುಗಪುರುಷ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು.

೨.೩ ಅಣ್ಣಾರಾಯರ ಜೀವನ ಮತ್ತು ಸಾಧನೆ :

'ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದ ಒಬ್ಬ ಸಾಮಾನ್ಯ ವ್ಯಕ್ತಿ ಉದಾತ್ತ ಆದರ್ಶಗಳನ್ನು ಇಟ್ಟುಕೊಂಡರೆ ಎಷ್ಟೊಂದು ಎತ್ತರಕ್ಕೆ ಏರಬಲ್ಲನು ಎಂಬುದಕ್ಕೆ ಅಣ್ಣಾರಾಯರ ವ್ಯಕ್ತಿತ್ವ ಒಂದು ಜೀವಂತ ಸಾಕ್ಷಿಯಾಗಿದೆ. ಭುಜೇಂದ್ರ ಮಹೇಶವಾಡಗಿಯವರ ಈ ಮಾತು ಅಣ್ಣಾರಾಯರ ಬದುಕಿನ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತದೆ. ಅಣ್ಣಾರಾಯರು ಶ್ರೇಷ್ಠ ಕತೆಗಾರರು, ಕಾದಂಬರಿಕಾರರು, ಪ್ರಬಂಧಕಾರರು, ಸಂಶೋಧಕರು, ಚಿಂತಕರು, ಆದರ್ಶ ಶಿಕ್ಷಕರು ಹಾಗೂ ಆದರ್ಶ ಜೀವಿಯಾಗಿ ನಮ್ಮ ಗಮನ ಸೆಳೆಯುತ್ತಾರೆ. ಸೇಡಬಾಳ ಎಂಬ ಚಿಕ್ಕ ಹಳ್ಳಿಯು ಕನ್ನಡ ಸಾಹಿತ್ಯ ಲೋಕದಲ್ಲಿ ಅಣ್ಣಾರಾಯರಿಂದ ಚಿರಸ್ಥಾಯಿಯಾಗಿ ಉಳಿದಿದೆ'.[೨]

ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಪ್ರದೇಶವಾದ ಸೇಡಬಾಳವು ಕೃಷ್ಣಾ ತೀರದ ಒಂದು ಚಿಕ್ಕ ಹಳ್ಳಿಯಾಗಿದೆ. ಸೇಡಬಾಳದಲ್ಲಿ ಪ್ರತಿಶತ ಎಪ್ಪತ್ತೈದರಷ್ಟು ಜೈನ ಜನವಸತಿಗಳಿವೆ. ಅಣ್ಣಾರಾಯರು ತಮ್ಮ ಜೀವಿತದ ಅವಧಿಯನ್ನು ಈ ಪರಿಸರದಲ್ಲಿಯೇ ಕಳೆದರು. ಈ ಹಳ್ಳಿಯ ಜೈನ ಧರ್ಮದ ಒಂದು ಒಕ್ಕಲಿಗ ಕುಟುಂಬದಲ್ಲಿ ೧೯೧೮ ರ ಆಗಸ್ಟ ೨೫ ರಂದು ಅಣ್ಣಾರಾಯರು ಜನಿಸಿದರು. ಅವರ ತಂದೆ ಅಪ್ಪಣ್ಣ, ತಾಯಿ ಚಂದ್ರಾಬಾಯಿ. ಅಣ್ಣಾರಾಯರು ತಂದೆ-ತಾಯಿಗಳ ಏಕೈಕ ಪುತ್ರ. ತಂದೆ-ತಾಯಿಗಳಿಬ್ಬರೂ ಅನಕ್ಷರಸ್ಥರು. ಆದರೂ ಒಳ್ಳೆಯ ಸಂಸ್ಕಾರಸ್ಥರು. ಸತ್ಯ, ಅಹಿಂಸೆ, ಪ್ರೇಮ ಮುಂತಾದ ತತ್ವಗಳನ್ನು ಅಳವಡಿಸಿಕೊಂಡು ಬೆಳೆದವರು. ಅವರಲ್ಲಿ ಜೈನ ಧರ್ಮದ ಸಂಸ್ಕಾರ ಅಪಾರ. ಕೃಷಿ ಚಟುವಟಿಕೆಯಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಏಕೆಂದರೆ ಅವರ ಮನೆತನದ ಉದ್ಯೋಗ ಕೃಷಿಯಾಗಿತ್ತು. ಚಿಕ್ಕವರಿರುವಾಗಲೇ ರಾಮಾಯಣ, ಮಹಾಭಾರತ, ಜೈನ ಪುರಾಣಗಳ ಕಥೆಗಳಿಂದ ಹೃದಯದ ಹೊಲವನ್ನು ಚೆನ್ನಾಗಿ ಕೃಷಿಗೈದಿದ್ದರು. ಇಂತಹ ಉತ್ತಮ ಪರಿಸರದ ಮಡಿಲಲ್ಲಿ ಅಣ್ಣಾರಾಯರು ಪರಿಸರದ ಶಿಶುವಾಗಿಯೇ ಬೆಳದರು.

ಸೇಡಬಾಳದಲ್ಲಿಯೇ ಅವರು ತಮ್ಮ ಬಾಲ್ಯವನ್ನು ಕಳೆದರು. ಅಲ್ಲಿಯೇ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆದರು. ಅಣ್ಣಾರಾಯರು ಪ್ರತಿಭಾವಂತ ವಿದ್ಯಾರ್ಥಿ. ಕುಟುಂಬದ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಆದ್ದರಿಂದ ಇಂಗ್ಲೀಷ ಶಿಕ್ಷಣದಿಂದ

ವಂಚಿತರಾಗಬೇಕಾಯಿತು. ಮುಲ್ಕಿವರೆಗೆ ಮಾತ್ರ ಶಿಕ್ಷಣ ಪಡೆದರು. ಬಡತನದಿಂದಾಗಿ ಮುಂದಿನ ಉನ್ನತ ಶಿಕ್ಷಣದಿಂದ ವಂಚಿತರಾದರು. ಇನ್ನೂ ಹೆಚ್ಚಿಗೆ ಓದಬೇಕೆಂಬ ಅವರ ಓದಿನ ದಾಹ ಅವರನ್ನು ಸತತಾಭ್ಯಾಸದಲ್ಲಿ ತೊಡಗಿಸಿತು. ಮನೆಯಲ್ಲಿ ಕುಳಿತು ಸ್ವ-ಅಧ್ಯಯನದಲ್ಲಿ ನಿರತರಾದರು. ಕನ್ನಡ ಸಾಹಿತ್ಯ ಪರಿಷತ್ತಿನ 'ಕಾವ' ಮತ್ತು 'ಜಾನ' ಪರೀಕ್ಷೆಗಳಲ್ಲಿ ಉತ್ತೀರ್ಣರಾದರು. ಹಾಗೆಯೇ ಹಿಂದಿ, ಮರಾಠಿ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಅಧ್ಯಯನವನ್ನು ಮಾಡಿದರು. ಸ್ವಯಂ ಪ್ರೇರಣೆಯಿಂದ ಸ್ವಲ್ಪಮಟ್ಟಿಗೆ ಇಂಗ್ಲೀಷ ಮತ್ತು ಗುಜರಾತಿ ಭಾಷೆಗಳನ್ನು ಅರಿತರು. ೧೯೭೫ ರಲ್ಲಿ ವರ್ನಾಕ್ಯುಲರ್ ಪಾಯಿನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

೧೯೭೬ ರಲ್ಲಿ ಕನ್ನಡ ಶಾಲೆಯ ಮಾಸ್ತರರಾಗಿ ಉಗಾರದಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ಅಣ್ಣಾರಾಯರ ಮನೆತನದ ಹಿರಿಯರು ಮೊದಲು ಮಿರ್ಜಿಯಲ್ಲಿ ವಾಸಿಸುತ್ತಿದ್ದರು. ಮಿರ್ಜಿಯಿಂದ ಮೂರು ಮೈಲು ದೂರವಿರುವ ಧಾಮಣಿ ಇವರ ಮೂಲಗ್ರಾಮ. ಇವರ ಅಜ್ಜ ಅಣ್ಣಪ್ಪನವರು ಮಿರ್ಜಿಯನ್ನು ತೊರೆದು ಸೇಡಬಾಳದಲ್ಲಿ ಬಂದು ನೆಲೆಸಿದರು. ಆದ್ದರಿಂದ ಇವರ ಅಜ್ಜನನ್ನು ಸೇಡಬಾಳದ ಜನರು 'ಮಿರ್ಜಿ ಅಣ್ಣಪ್ಪ' ಎಂದು ಕರೆಯಲಾರಂಭಿಸಿದರು.

ಮಿರ್ಜಿಯವರು ಬಾಲ್ಯವಿವಾಹವಾಗಿದ್ದರು. ಏಳನೇ ತರಗತಿಯಲ್ಲಿ ಕಲಿಯುತ್ತಿದ್ದಾಗ ಅವರ ತಾಯಿಯ ಅಣ್ಣನ ಮಗಳೊಂದಿಗೆ ವಿವಾಹವಾಗಿತ್ತು. ಅಣ್ಣಾರಾಯರು ನೌಕರಿಗೆ ಸೇರಿ ಕೆಲ ವರ್ಷಗಳಾದರೂ ಅವರಿಗೆ ಮಕ್ಕಳಾಗಲಿಲ್ಲ. ಆಗ ಆಕೆಯ ಮತ್ತು ಹಿರಿಯರ ಇಚ್ಛೆಯಂತೆ ಪಕ್ಕದ ಮನೆಯ ಚಂಪಾಬಾಯಿಯವರನ್ನು ೧೯೪೧ರಲ್ಲಿ ಎರಡನೇ ಮದುವೆಯಾದರು. ಆರು ಮಕ್ಕಳಿಂದ ಕೂಡಿದ ತುಂಬು ಕುಟುಂಬ ಅಣ್ಣಾರಾಯರದು. ಉಗಾರದಲ್ಲಿ ವೃತ್ತಿ ಜೀವನ ಪ್ರಾರಂಭಿಸಿದ ಇವರು ಮಾಂಜರಿ, ಕಾಗವಾಡ ಮತ್ತು ಸೇಡಬಾಳಗಳಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸಿದರು. ಅಣ್ಣಾರಾಯರಲ್ಲಿ ವಾಚನಾಭಿರುಚಿ ಮತ್ತು ಸೃಜನಶೀಲತೆಯನ್ನು ಬೆಳೆಸಿದವರು ಗುರುಗಳಾದ ಅಚ್ಯುತರಾವ ಪದಕಿ ಮಾಸ್ತರರು. ಇದೇ ಮುಂದೆ ಜೈನಧರ್ಮದ ಗ್ರಂಥಗಳ ಅಧ್ಯಯನಕ್ಕೆ ನಾಂದಿಯಾಯಿತು.

ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನ ಪ್ರಾಚಾರ್ಯರಾದ ವಿ. ಕೃ. ಗೋಕಾಕ, ರಂ. ಶ್ರೀ. ಮುಗಳಿಯವರು ಅಣ್ಣಾರಾಯರಿಗೆ ಆತ್ಮೀಯರಾಗಿದ್ದರು ಮತ್ತು ಸ್ಫೂರ್ತಿ ಮತ್ತು ಪ್ರೇರಕ ವ್ಯಕ್ತಿಗಳಾಗಿದ್ದರು. ಅವರ ಸ್ಫೂರ್ತಿ ಮತ್ತು ಪ್ರೇರಣೆಗಳಿಂದ ಸೃಜನಶೀಲ ಸಾಹಿತ್ಯದಲ್ಲಿ ತೊಡಗಿದರು. ಕೊಲ್ಹಾಪುರದ ಡಾ. ಆ. ನೆ. ಉಪಾಧ್ಯೆಯವರು ಅಣ್ಣಾರಾಯರಿಗೆ ಉತ್ಸಾಹದ ಶಕ್ತಿಯಾಗಿದ್ದರು. ಜೈನ ಧರ್ಮದ ಸಮಗ್ರ ಅಧ್ಯಯನ ಅವರ ಜೀವನದ ಮಹತ್ವದ ಗುರಿಯಾಗಿತ್ತು.

ಮಿರ್ಜಿ ಅಣ್ಣಾರಾಯರು ಖಾದಿ, ಜುಬ್ಬ, ಶುಭ್ರ ಖಾಧಿ ಧೋತರ ಹಾಗೂ ಖಾದಿ ಟೊಪ್ಪಿಗೆಯನ್ನು ಧರಿಸುತ್ತಿದ್ದರು. ಮಿತವ್ಯಯಿಗಳಾದ ಅಣ್ಣಾರಾಯರು ಸರಳ ಜೀವಿ. ಹಿತ ಮಿತವಾದ ಭಾಷೆ ಅವರದಾಗಿತ್ತು. ಎ. ಎನ್. ಕುಲಕರ್ಣಿಯವರು ಮಿರ್ಜಿ ಅಣ್ಣಾರಾಯರ ವ್ಯಕ್ತಿಚಿತ್ರವನ್ನು ಬಿಡಿಸಿದ್ದು ಹೀಗೆ 'ಮಿರ್ಜಿ ಅಣ್ಣಾರಾಯರೊಬ್ಬರು ಸರಳಜೀವಿ, ಮಿತಭಾಷಿ, ಸತತಾಭ್ಯಾಸಿ. ತಮ್ಮ ಜೀವಿತದ ಅವಧಿಯಲ್ಲಿ ಯಾವಾಗಲೂ ಸರಳತೆಗೆ ಹೆಸರಾದವರು. ಖಾದಿ ಧೋತರ, ನೆಹರು ಶರ್ಟ, ತಲೆಯ ಮೇಲೊಂದು ಗಾಂಧಿ ಟೋಪಿ, ಸ್ವಲ್ಪ ದಪ್ಪ ಎನ್ನಬಹುದಾದ, ಅಷ್ಟೊಂದು ಎತ್ತರವಿಲ್ಲದ ದೇಹ, ದುಂಡಗಿನ ಮುಖ, ಹೊಳಪಿನ ಆದರ್ಶವಾದೀ ಕಣ್ಣುಗಳು, ನೀಳಮೂಗು, ಸಾತ್ವಿಕ ಕಳೆ, ಸವಿಮಾತು ಯಾರನ್ನೂ ವಿರೋಧಿಸದ ಮಟ್ಟಿಗೆ ಅಹಿಂಸೆಯ ಪಾಲನೆ'.[೩]

ಅಣ್ಣಾರಾಯರು ಕಷ್ಟಪಟ್ಟು ದುಡಿದು ಸಂಪಾದಿಸಿದ ಹಣವನ್ನೆಲ್ಲ 'ಶಾಂತಿ ಸೇವಾಸದನ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಬೆಳವಣಿಗೆಗಾಗಿ ವಿನಿಯೋಗಿಸಿದರು. ಇದರ ಮುಖ್ಯ ಗುರಿಯೆಂದರೆ ಹಳ್ಳಿಯ ಜನರಲ್ಲಿ ಶಿಕ್ಷಣ, ಸಾಹಿತ್ಯ, ಸಂಸ್ಕೃತಿ ಮತ್ತು ಜೈನ ಧರ್ಮ ಪ್ರಚಾರ ಮಾಡುವುದಾಗಿತ್ತು. ಇದೇ ಸಂದರ್ಭದಲ್ಲಿ 'ಜಿನವಿಜಯ' ಪತ್ರಿಕೆ ಹೊರಡಿಸಿದರು. ಶಿಕ್ಷಣ ಪ್ರೇಮಿಗಳಾಗಿದ್ದ ಅವರು 'ಸನ್ಮತಿ ವಿದ್ಯಾಲಯ'ದ ಸ್ಥಾಪನೆ ಮಾಡಿ ಅದರ ಅಭಿವೃದ್ಧಿಗಾಗಿ ಪ್ರಯತ್ನಪಟ್ಟರು. ಸಮಾಜ, ಧರ್ಮ, ಸಾಹಿತ್ಯ ಕ್ಷೇತ್ರಗಳಲ್ಲಿ ಸದಾ ತೊಡಗಿಸಿಕೊಂಡು ತಮ್ಮ ವ್ಯಕ್ತಿತ್ವಕ್ಕೆ ಒಂದು ಹೊಸ ಆಯಾಮ ಕಂಡುಕೊಂಡರು. ೧೯೫೩ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ತಾವು ಬೆಳಗುವುದರ ಜೊತೆಗೆ 'ಶಾಂತಿ ಸೇವಾ ಸದನದ ಮುಖಾಂತರ ನಲವತ್ತೈದು ಹೊಸ ಲೇಖಕರನ್ನು ಪರಿಚಯಿಸಿದರು.

ಸ್ವಾತಂತ್ರ್ಯ ಆಂದೋಲನದ ಚಳುವಳಿಯಲ್ಲಿ ತಿಲಕ, ಗೋಖಲೆ, ಗಾಂಧೀಜಿ, ಲಜಪತರಾಯ, ನೆಹರೂ ಮುಂತಾದ ವ್ಯಕ್ತಿಗಳೂ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಆಲೂರ ವೆಂಕಟರಾಯರು, ಕಡಪಾ ರಾಘವೇಂದ್ರರಾಯರು, ಗು. ಹಾ. ಹೊನ್ನಾಪುರಮಠ, ವೀರನಗೌಡ ಪಾಟೀಲ, ಗುದ್ಲೆಪ್ಪ ಹಳ್ಳಿಕೇರಿ, ರಂಗನಾಥ ದಿವಾಕರ ಮುಂತಾದ ಆದರ್ಶ ವ್ಯಕ್ತಿಗಳು ಮಿರ್ಜಿಯವರಲ್ಲಿ ಭಾರತೀಯತ್ವ, ಕರ್ನಾಟಕತ್ವಗಳನ್ನು ಬೆಳೆಸಿದರು. ಚಲೇಜಾವ ಚಳುವಳಿಯ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಬುಲೆಟನ್ ಹೊರಡಿಸುತ್ತಿದ್ದರು. ೧೯೪೦ರ ಚಳುವಳಿಯಲ್ಲಿ ಭಾಗವಹಿಸಿ ಚಳುವಳಿಗಾರರ ಅನುಭವಗಳನ್ನು ಆಧರಿಸಿ ಸ್ವಾತಂತ್ರ್ಯ ಚಳುವಳಿಯ, ರಾಷ್ಟ್ರಪ್ರಜ್ಞೆಯ ವಸ್ತುಗಳನ್ನುಳ್ಳ ಕಾದಂಬರಿಗಳನ್ನು ರಚಿಸಲು ಮುಂದಾದರು.

ತಮ್ಮ ಮೂವತ್ತೈದು ವರ್ಷಗಳ ಸುದೀರ್ಘ ಶಿಕ್ಷಕ ವೃತ್ತಿಯನ್ನು ನಿರ್ವಹಿಸಿ ೧೯೭೫ ಮೇ ೩೧ ರಂದು ನಿವೃತ್ತಿ ಹೊಂದಿದರು. ನಿವೃತ್ತಿಯ ನಂತರವೂ ಅದೇ

ಶಾಲೆಯಲ್ಲಿ ಸೇವೆಯನ್ನು ಮುಂದುವರೆಸಿದರು. ಕನ್ನಡ ನವೋದಯದ ಶ್ರೇಷ್ಠ ಚೇತನ ಅಣ್ಣಾರಾಯರು ೧೯೭೫ ಡಿಸೆಂಬರ್ ೨೩ ರಂದು ಕನ್ನಡ ಸಾರಸ್ವತ ಲೋಕವನ್ನು ಅಗಲಿದರು.

ಮಿರ್ಜಿ ಅಣ್ಣಾರಾಯರು ಕನ್ನಡ ಶಾಲಾ ಮಾಸ್ತರರೇ ಆಗಿದ್ದುದನ್ನು ನೆನೆದರೆ ಆಧುನಿಕ ಕನ್ನಡ ಸಾಹಿತ್ಯಕ್ಕೆ ಶಾಲಾ ಶಿಕ್ಷಕರ ಕೊಡುಗೆ ಅಪಾರ ಎಂದು ಒಪ್ಪಿಕೊಳ್ಳಬಹುದು. ಶಾಲಾ ಶಿಕ್ಷಕರು, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ನೀಡಿದ ಕೊಡುಗೆ ಅಪಾರ. ಕನ್ನಡ ವಾಙ್ಮಯ ತಪಸ್ಸನ್ನು ಸಾಧಿಸುವ ಅನುಕೂಲತೆ, ಅವಕಾಶಗಳು ಪ್ರಾಪ್ತವಾಗುವುದು ಶಾಲಾ, ಕಾಲೇಜು ಶಿಕ್ಷಕರಿಗೆ ಮಾತ್ರ ಹೆಚ್ಚು.

ಅಣ್ಣಾರಾಯರು ಬಯಸಿ ಶಿಕ್ಷಕರಾದವರು. ಅವರು ಶಿಕ್ಷಣ ಪ್ರೇಮಿ, ಶಿಷ್ಯವತ್ಸಲರು, ಶಿಕ್ಷಕ ಮಿತ್ರರೂ ಆಗಿದ್ದರು. ಶಿಕ್ಷಕ ವೃತ್ತಿಯ ಬಗ್ಗೆ ಅಪಾರ ಪ್ರೇಮ ಮತ್ತು ಗೌರವ ಗಾಂಧೀಜಿಯವರ ಜೀವನ ಶಿಕ್ಷಣ ಅವರಿಗೆ ಜೀವಾಳ. ಒಬ್ಬ ಶ್ರೇಷ್ಠ ಶೈಕ್ಷಣಿಕ ಚಿಂತನಕಾರರಾಗಿದ್ದರು. ಹಳ್ಳಿಯ ಮುಗ್ಧ ಸಮಾಜದ ಪರಿವರ್ತನೆಗೆ ಸಾಕ್ಷರತೆಯೇ ಬೀಜಮಂತ್ರವೆಂಬ ವಿಚಾರ ಅಣ್ಣಾರಾಯರದು. ಶಿಕ್ಷಣವೆಂದರೆ ಬರಿ ಸಾಕ್ಷರತೆಯಲ್ಲ. ಪುಸ್ತಕದ ಬದನೆಕಾಯಿಯೂ ಅಲ್ಲ. ಶಿಕ್ಷಣವೆಂದರೆ ಸರ್ವತೋಮುಖವಾದ ವ್ಯಕ್ತಿತ್ವ ವಿಕಾಸ ಎಂದು ನಂಬಿದ್ದರು. ಒಬ್ಬ ಉತ್ತಮ ಶಿಕ್ಷಕ ಉತ್ತಮ ಮನೋಶಾಸ್ತ್ರಜ್ಞನಾಗಿರಬೇಕೆಂಬ ಪಾಶ್ಚಾತ್ಯ ಶಿಕ್ಷಣ ತಜ್ಞ ರಾಸ್‌ನ ಶೈಕ್ಷಣಿಕ ವಿಚಾರಗಳನ್ನು ನಂಬಿದ್ದರು. ಶಿಕ್ಷಣವು ಅಕ್ಷರಾಭ್ಯಾಸದೊಂದಿಗೆ ಮಾನವೀಯ ಮೌಲ್ಯಗಳನ್ನು ತಿಳಿಸಿ ಕೊಡಬೇಕೆಂದು ಸಾಹಿತ್ಯ ನಿರ್ಮಾಣದಲ್ಲಿ ತೊಡಗಿದರು.

ಅಣ್ಣಾರಾಯರು ತಮ್ಮ ಬದುಕು, ಬರಹವನ್ನು ಕುರಿತು ಆಕಾಶವಾಣಿ ಸಂದರ್ಶನವೊಂದರಲ್ಲಿ ಹೇಳಿದ ಮಾತುಗಳು ವೈಶಿಷ್ಟ್ಯಪೂರ್ಣವಾಗಿವೆ.

ಜೀವನದೊಳಗಿನ ರಸ–ವಿಷ ನಿಮಿಷಗಳನ್ನು ಸಣ್ಣ ಕತೆಗಳಲ್ಲಿ ಚಿತ್ರಿಸಲಿಕ್ಕೆ ಸಾಧ್ಯ. ಇದನ್ನು ಮಾಡುತ್ತಿರುವಾಗ ಸುತ್ತಲಿನ ಜೀವನವನ್ನು ನೋಡುವ ಒಂದು ದೃಷ್ಟಿಯು ನನ್ನಲ್ಲಿ ಉತ್ಪನ್ನವಾಯಿತು. ಅದರೊಡನೆ ನನ್ನ ಹೃದಯವು ಜೀನವದಲ್ಲಿಯ ವಿವಿಧ ತೆರೆಗಳಿಂದ ಅಲ್ಲೋಲ ಕಲ್ಲೋಲವಾಗತೊಡಗಿತು. ಅದರಿಂದಾಗಿ ನನ್ನಿಂದ ಸುತ್ತಲಿನ ಸಮಾಜದ ಮೇಲೆ ಕಾಯಿಕ, ವಾಚಿಕ ಮತ್ತು ಮಾನಸಿಕ ಪ್ರತಿಕ್ರಿಯೆಗಳು ನಡೆಯಹತ್ತಿದವು. ಅದಕ್ಕೆ ಉತ್ತರ ರೂಪದಲ್ಲಿ ಸಮಾಜದಿಂದ ಉಂಟಾಗುವ ಪ್ರತಿಕ್ರಿಯೆಗಳು ನನ್ನನ್ನು ಕೆರಳಿಸ ಹತ್ತಿದವು. ಇದರಿಂದ ನನ್ನ ಅನುಭವ ವಿಶಾಲವಾಗುವುದರೊಡನೆ, ಸಾಮಾಜಿಕ ಸಮಸ್ಯೆಗಳೆಲ್ಲ ತಮ್ಮಷ್ಟಕ್ಕೆ ತಾವು ಸ್ವತಂತ್ರವಾಗಿರದೆ, ಒಂದಕ್ಕೆ ಇನ್ನೊಂದು

ಕಾರಣೀಭೂತವಾಗಿರುತ್ತವೆ; ಜೀವನವನ್ನು ಸಮಗ್ರ ದೃಷ್ಟಿಯಿಂದಲೇ ಕಾಣಬೇಕೆಂಬ ಅರಿವು ಉಂಟಾಯಿತು. ಈ ಅರಿವು ನನ್ನನ್ನು ಸಣ್ಣ ಕತೆಗಾರಿಕೆಯಿಂದ ಕಾದಂಬರೀ ಕ್ಷೇತ್ರಕ್ಕೆ ತಂದು ಬಿಟ್ಟಿತು.

'ನಮ್ಮಲ್ಲಿ ವೈಯಕ್ತಿಕ ಹಿತವು ಸಾರ್ವಜನಿಕ ಹಿತದೊಡನೆ ಸಾಧ್ಯವಾಗುತ್ತದೆಂಬ ಕಲ್ಪನೆ ಉಂಟಾಗಬೇಕು. ಸಾರ್ವತ್ರಿಕವಾಗಿ ಹಿತಕ್ಕಾಗಿ ಆಗುವ ವಿಲಂಬ, ಸ್ವಾರ್ಥದಲ್ಲಿಯ 'ತಾನು' ತ್ಯಾಗ, ಇವುಗಳಿಗಾಗಿ ಸಂಯಮದ ಅವಶ್ಯಕತೆ ಇದೆ. ಇಂಥ ಸಂಯಮ ಜೀವನದ ಕಲ್ಪನೆಯನ್ನು ಜನರಿಗೆ ತಂದುಕೊಡುವುದರಲ್ಲಿಯೇ ಭಾರತೀಯತೆಯ ಭಾವನೆಯು ಬೆಳೆದು ಬರುತ್ತದೆ, ಇಂಥ ಸಂಯಮಯುತ ಜೀವನವನ್ನು ರೂಪಿಸಿಕೊಳ್ಳಲಿಕ್ಕೆ ನನ್ನ ವಾಚನಾಭಿರುಚಿ, ಒಳ್ಳೆಯದನ್ನು ಪ್ರೀತಿಸುವುದು, ಫಲಾಪೇಕ್ಷೆಯಿಲ್ಲದೆ ಕರ್ತವ್ಯನಿರತನಾಗಿರುವುದು ಇವೇ ಮೊದಲಾದ ಗುಣಗಳು ನೆರವಾಗಿವೆ. ಇದರಿಂದ ಬಾಹ್ಯ ಜೀವನದಲ್ಲಿ ಒದಗುವ ಆಘಾತ, ಕೊರತೆ, ಅಪಮಾನ, ಮನಸ್ಸಿನ ವಿರುದ್ಧ ನಡೆಯುವ ಘಟನೆ, ಸೋಲು ದುಃಖಗಳೆಲ್ಲ ಒಂದು ಪ್ರಯೋಗವೆಂದು ನಿರೀಕ್ಷಿಸುವ ಶಕ್ತಿಯುಂಟಾಗುತ್ತದೆ...... ಜೀವನ ಒಂದು ಪ್ರಯೋಗವೆಂದು ಭಾವಿಸಿ ಆಸ್ಥೆಯಿಂದ ಬಾಳಲಿಕ್ಕೆ ಯತ್ನಿಸಬೇಕು'.[೪]

ಈ ಸಂದರ್ಶನದ ಮೂಲಕ ಅಣ್ಣಾರಾಯರ ತಮ್ಮ ಸಾಹಿತ್ಯ ಸೃಷ್ಟಿಯ ಹಿನ್ನೆಲೆ ಮತ್ತು ಪ್ರೇರಣೆಗಳನ್ನು ತಿಳಿಸುತ್ತಾರೆ. ಅವರ ಒಟ್ಟು ಸಾಹಿತ್ಯ ಅನುಭವದಿಂದ ಸೃಷ್ಟಿಯಾದುದು. ಅವರ ಬದುಕಿನ ಸನ್ನಿವೇಶಗಳ ಸಂವೇದನೆಗಳ ಅಭಿವ್ಯಕ್ತಿಯಾಗಿ ಅವರ ಸಾಹಿತ್ಯ ರಚನೆಯಾಗಿದೆ. ಅಂದರೆ ವಸ್ತುನಿಷ್ಠತೆ, ವಾಸ್ತವಿಕತೆ ಅವರ ಸಾಹಿತ್ಯದ ಜೀವಾಳ.

ಆಧುನಿಕ ಸಾಹಿತ್ಯದ ಹಿರಿಯ ಲೇಖಕರಲ್ಲಿ ಅಣ್ಣಾರಾಯರೂ ಒಬ್ಬರಾಗಿದ್ದಾರೆ. ಬರವಣಿಗೆಯ ಗುಣ ಹಾಗೂ ಗಾತ್ರದ ದೃಷ್ಟಿಯಿಂದ ಅವರೊಬ್ಬ ಹಿರಿಯ ಸಾಹಿತಿಗಳು ಹಿಂದುಳಿದ ಪ್ರದೇಶದ ಹಳ್ಳಿಯಲ್ಲಿದ್ದು ಪ್ರತಿಕೂಲ ಪರಿಸ್ಥಿತಿಯೊಂದಿಗೆ ಹೋರಾಡಿ, ತಾನು ಸ್ವತಃ ಸುಟ್ಟುಕೊಂಡು ಇತರರಿಗೆ ಬೆಳಕು ನೀಡುವ ಮೇಣಬತ್ತಿಯಂತೆ ಸಾಹಿತ್ಯ, ಸಮಾಜ, ಶಿಕ್ಷಣ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡುವಲ್ಲಿ ಮಿರ್ಜಿಯವರ ತ್ಯಾಗ ನಿಷ್ಠೆಗಳು ಅನುಪಮವಾಗಿದೆ. ಅವು ಆದರ್ಶಗಳೂ ಹೌದು, ಅನುಕರಣೆಯೋಗ್ಯವೂ ಹೌದು.[೫]

೨.೪ ಅಣ್ಣಾರಾಯರು ಮತ್ತು ಜೈನ ಪರಿಸರ :

ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಪ್ರದೇಶ ಸೇಡಬಾಳದ ಮೇಲೆ ಜೈನ ಧರ್ಮದ ಪ್ರಾಬಲ್ಯವಿದೆ. ಒಂದು ಕಡೆಗೆ ಮಹಾರಾಷ್ಟ್ರದ ಸಾಂಗ್ಲಿ ಇನ್ನೊಂದು ಕಡೆಗೆ

ಕೊಲ್ಹಾಪುರದ ಪ್ರಭಾವದಿಂದಾಗಿ ಮರಾಠಿ ಭಾಷೆಯ ಪ್ರಭಾವವೂ ಹೆಚ್ಚಾಗಿದೆ. ಸುಮಾರು ೧೨ನೇ ಶತಮಾನಕ್ಕಿಂತ ಹಿಂದಿನಿಂದಲೂ ಜೈನ ಧರ್ಮದ ದಟ್ಟ ಪ್ರಭಾವಕ್ಕೆ ಒಳಗಾದ ಪ್ರದೇಶವಿದು. ಇಲ್ಲಿ ಜೈನಮತ ಪ್ರಾಬಲ್ಯ ಸಾಧಿಸಲು ಹಲವಾರು ಐತಿಹಾಸಿಕ ಕಾರಣಗಳು ಇವೆ. ಕೊಲ್ಹಾಪುರವನ್ನು ಆಳಿದಂತಹ ಅರಸರು 'ಶಿಲಾಹಾರ' ಮನೆತನದವರು. ಅವರು ಸಹ ಜೈನರು. ಜೈನ ಧರ್ಮಕ್ಕೆ ಅವರ ಕೊಡುಗೆ ಅಪಾರ. ಅಣ್ಣಾರಾಯರ ಬದುಕು ಈ ಗಡಿಪ್ರದೇಶದಲ್ಲಿ ರೂಪುಗೊಂಡಿದ್ದರಿಂದ ಅದು ಪರೋಕ್ಷವಾಗಿ ಅವರ ಒಟ್ಟು ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ.

ಜೈನ ಮನೆತನದಲ್ಲಿ ಜನಿಸಿ ಬೆಳೆದಿದ್ದರಿಂದ ಜೈನ ಸಂಪ್ರದಾಯ, ರೀತಿ-ನೀತಿ, ಆಚಾರ-ವಿಚಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದರು. ಡಾ. ಆ. ನೇ. ಉಪಾಧ್ಯೆಯವರ ಧಾರ್ಮಿಕ ವಿವೇಚನೆಯಿಂದ ಪ್ರಭಾವಿತರಾಗಿದ್ದರು. ಅವುಗಳನ್ನು ಎಳೆ-ಎಳೆಯಾಗಿ ತೆರೆದಿಡುವ ಪ್ರಯತ್ನ ಮಾಡಿದ್ದಾರೆ. ಅವರ ಪ್ರಸಿದ್ಧ ಕಾದಂಬರಿಯಾದ 'ನಿಸರ್ಗ'ದ ಕಥಾವಸ್ತು ಅವರ ಮನಸ್ಸಿನಲ್ಲಿ ಮೂಡಿರುವುದೇ ಅಚ್ಚರಿಯ ವಿಷಯ.

'ನಿಸರ್ಗ' ಕಾದಂಬರಿಗೆ ಮುನ್ನುಡಿ ಬರೆಯುತ್ತ ರಂ. ಶ್ರೀ. ಮುಗಳಿಯವರು 'ಬೆಳಗಾವಿ ಜಿಲ್ಲೆಯ ಉತ್ತರ ತುದಿಯ ಹಳ್ಳಿಗಳಲ್ಲಿಯ ಜನಜೀವನ ಅದರಲ್ಲಿಯೂ ಜೈನ ಸಮಾಜದ ಚಿತ್ರ ಈ ಕಾದಂಬರಿಯಲ್ಲಿ ಮೊದಲ ಸಲ ಬಂದದ್ದು ಅದರ ಹೆಚ್ಚಿನ ವೈಶಿಷ್ಟ್ಯವಾಗಿದೆ'[೬] ಎಂದಿದ್ದಾರೆ.

ಲೇಖಕ ಎಂದರೆ ಕೇವಲ ಕಲ್ಪನೆ ಮಾಡಿ ಬರೆಯುವವನಲ್ಲ. ಒಂದು ಕೃತಿಯಲ್ಲಿ ಕಲ್ಪನೆ ಮತ್ತು ಊಹೆಗಳಿರಬಹುದು. ಆದರೆ ಅದರ ಒಳಹೊಕ್ಕು ನೋಡಿದಾಗ ಸತ್ಯದ ಹೊಳಹು ಗೋಚರಿಸುವುದು. ಆ ಸತ್ಯವನ್ನು ಕುವೆಂಪು 'ಸತ್ಯದ ಸತ್ಯ' ಎಂದು ಕರೆದಿದ್ದಾರೆ.

ಅಣ್ಣಾರಾಯರು ಒಡನಾಡಿದ್ದು ಉಗಾರ, ಸೇಡಬಾಳ, ಮಾಂಜರಿ, ಕಾಗವಾಡ ಮತ್ತು ಐನಾಪುರ ಮುಂತಾದ ಗ್ರಾಮಗಳಲ್ಲಿ ಅಣ್ಣಾರಾಯರು ಬದುಕಿದ್ದ ಜೈನ ಪರಿಸರ ಅವರ ಕೃತಿಗಳ ಮೇಲೆ ಅಪಾರ ಪ್ರಭಾವ ಬೀರಿತ್ತು. ಅಣ್ಣಾರಾಯರು ಅಪ್ಪಟ ಪ್ರಾದೇಶಿಕ ಕಾದಂಬರಿಕಾರರು. ಏಕೆಂದರೆ ಅವರು ತಮ್ಮ ಜೀವನವನ್ನು ಕಳೆದದ್ದು ಈ ಪರಿಸರದಲ್ಲಿಯೇ. ಅವರ ಸಾಹಿತ್ಯಿಕ ಕೃತಿಗಳಲ್ಲಿ ಅನುಭವದ ಗಟ್ಟಿತನವಿರುವುದರಿಂದ ಅವರ ಬರಹಕ್ಕೂ ಮತ್ತು ಬದುಕಿಗೂ ಅಂತರವಿಲ್ಲ. ಅಣ್ಣಾರಾಯರಿಗೆ ಜೈನ ಧರ್ಮದಲ್ಲಿ ಅಪಾರ ಗೌರವವಿತ್ತು. ಸಾಕಷ್ಟು ಜೈನ ಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ಸಮಂತ ಭದ್ರಾಚಾರ್ಯರ 'ರತ್ನಕರಂಡಕ ಶ್ರಾವಕಾಚಾರ', ಡಾ. ಹೀರಾಲಾಲ್ ಅವರ 'ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ' ಎಂಬ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಜೈನ ಧರ್ಮದಲ್ಲಿಯ ಅವರ ಅನನ್ಯ ಪಾಂಡಿತ್ಯಕ್ಕೆ ಅವರ 'ಜೈನ ಧರ್ಮ' ಬೃಹತ್ ಕೃತಿಯೇ

ಸಾಕ್ಷಿ. ಜೈನ ಪುರಾಣಗಳಲ್ಲಿ ಬರುವ ವಸ್ತುವನ್ನೇ ತಮ್ಮ ಸಾಹಿತ್ಯದ ವಸ್ತುವಾಗಿಸಿಕೊಂಡರು. ಅವರ ಪ್ರಮುಖ ಕಾದಂಬರಿಗಳಲ್ಲಿ ಜೈನ ಧರ್ಮದ ವಸ್ತು ಹಾಗೂ ಜೈನ ಕುಟುಂಬಗಳೇ ಪ್ರಧಾನ. ಕಾದಂಬರಿಗಳಲ್ಲಿ ಉಲ್ಲೇಖಗೊಂಡಿರುವ ಊರುಗಳು ಕಾಲ್ಪನಿಕವಾಗಿಲ್ಲ. ಜೈನ ಧರ್ಮಕ್ಕೆ ಸಂಬಂಧಿಸಿದ ಪಾತ್ರಗಳ ಹೆಸರುಗಳು ಅವರ ಕಾದಂಬರಿಗಳಲ್ಲಿ ಕಂಡು ಬರುತ್ತವೆ.

೨.೫ ಅಣ್ಣಾರಾಯರ ಸಾಹಿತ್ಯೇತರ ಕೊಡುಗೆಗಳು :

ಅಣ್ಣಾರಾಯರು ಸೃಜನಶೀಲ ಹಾಗೂ ಧಾರ್ಮಿಕ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರದೇ, ಸಾಹಿತ್ಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಉತ್ತಮ ಸಮಾಜ ಸೇವಕರಾಗಿಯೂ ಸೇವೆಯನ್ನು ಸಲ್ಲಿಸಿದ್ದಾರೆ.

೧) ಸಾಹಿತ್ಯ ಪರಿಚಾರಕರಾಗಿ :

'ಗ್ರಂಥ ಪ್ರಕಾಶನ'ದ ಮೂಲಕ ಎಳೆಯ ಸಾಹಿತಿಗಳಿಗೆ ಸಾಹಿತ್ಯ ರಚನೆಯ ಮಾರ್ಗದರ್ಶನ ನೀಡುತ್ತಿದ್ದರು. ಸಾಹಿತ್ಯ ಪರಿಷತ್ತು ಮೊದಲಾದ ಸಂಸ್ಥೆಗಳ ಕಾರ್ಯಸಮಿತಿ ಸದಸ್ಯತ್ವ ಪಡೆದುಕೊಂಡಿದ್ದರು. ಜಿಲ್ಲಾ ಸಾಹಿತ್ಯ ಸಮ್ಮೇಳನ ಸಂಘಟನೆ, ಬೀಚಿ, ಮುಗಳಿ ಮೊದಲಾದ ಲೇಖಕರ ಸನ್ಮಾನ ಹಾಗೂ ಗೌರವಗ್ರಂಥ ಸಮರ್ಪಣೆ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ತಮ್ಮೂರಿಗೆ ಗೋಕಾಕ, ಬೇಟಗೇರಿಯವರಂಥ ಖ್ಯಾತ ಸಾಹಿತಿಗಳನ್ನು ಕರೆಯಿಸಿ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಪುಸ್ತಕಗಳ ಗಂಟನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗಿ ಮಾರಾಟ ಮಾಡುವುದರ ಮೂಲಕ ಜನರಲ್ಲಿ ವಾಚನಾಭಿರುಚಿ ಬೆಳೆಸುತ್ತಿದ್ದರು.

೨) ಸ್ವಾತಂತ್ರ್ಯ ಹೋರಾಟಗಾರರಾಗಿ :

ಅಣ್ಣಾರಾಯರು ಕೇವಲ ಖಾದಿ ಮಾತ್ರ ಧರಿಸುತ್ತಿದ್ದರಲ್ಲದೇ ಖಾದಿ ಪ್ರಚಾರದಲ್ಲಿ ತೊಡಗಿದ್ದವರು. ದಿವಾಕರ ರಂಗನಾಥರ ಪ್ರೇರಣೆಯಂತೆ ಭೂಗತವಾಗಿ ಮುಳವಾಡ ಎಂಬಲ್ಲಿ ವಾಸಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಕವಾಗುವಂತಹ ಕರಪತ್ರಗಳನ್ನು ತಯಾರಿಸಿ ೧೯೪೨ರ ಸಂದರ್ಭದಲ್ಲಿ ಹಂಚುತ್ತಿದ್ದರು.

೩) ಆಡಳಿತಗಾರರಾಗಿ :

ಶಾಲಾ ಮುಖ್ಯೋಪಾಧ್ಯಾಯರಾಗಿ ಎಲ್ಲ ಶಿಕ್ಷಕರೊಂದಿಗೆ ಸ್ನೇಹದಿಂದ ವರ್ತಿಸುತ್ತಿದ್ದರು. ತಮ್ಮೂರಿನ ಸಹಕಾರ ಸಂಘದ ನಿರ್ದೇಶಕರಾಗಿ ಹಾಗೂ ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಅವರು ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

❖❖❖❖❖

ಅಡಿಟಿಪ್ಪಣಿಗಳು :

೧. ವ್ಹಿ. ಎಸ್. ಮಾಳಿ : ಸಾಹಿತ್ಯ ಸಿರಿ : ಪು.ಸಂ. ೪೮
೨. ಎ. ಎಸ್. ಕುಲಕರ್ಣಿ : ಮಿರ್ಜಿ ಅಣ್ಣಾರಾಯ : ಪು.ಸಂ. ೮
೩. ಎ. ಎಸ್. ಕುಲಕರ್ಣಿ : ಮಿರ್ಜಿ ಅಣ್ಣಾರಾಯ : ಪು.ಸಂ. ೧೫
೪. ಆಕಾಶವಾಣಿ ಸಂದರ್ಶನ : ೧೬–೦೬–೧೯೫೬ : ಮುಂಬೈ ಆಕಾಶವಾಣಿ ಕೇಂದ್ರ
೫. ಶಿವಾನಂದ ಗಾಳಿ – ಮಿರ್ಜಿ ಅಣ್ಣಾರಾಯರು – ಒಂದು ಅಧ್ಯಯನ : ಪು.ಸಂ. ೨೦
೬. ಮಿರ್ಜಿ ಅಣ್ಣಾರಾಯ : ನಿಸರ್ಗ – ಮುನ್ನುಡಿ : ಪು.ಸಂ. ೫

ಅಧ್ಯಾಯ : ೩

ನಿಸರ್ಗ ಕಾದಂಬರಿಯ ವಸ್ತು ಮತ್ತು ತಾತ್ವಿಕತೆ

ಅಧ್ಯಾಯ – ೩
ನಿಸರ್ಗ ಕಾದಂಬರಿಯ ವಸ್ತು ಮತ್ತು ತಾತ್ವಿಕತೆ

೩.೧ ನಿಸರ್ಗದ ಕಥಾವಸ್ತು :

ಅಣ್ಣಾರಾಯರ 'ನಿಸರ್ಗ' ನವೋದಯದ ಸಂದರ್ಭದಲ್ಲಿ ಮೂಡಿಬಂದ ವಿಶಿಷ್ಟ ಕಾದಂಬರಿ. ನಿಸರ್ಗದ ಕಥಾವಸ್ತು ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗಡಿಪ್ರದೇಶಕ್ಕೆ ಸಂಬಂಧಿಸಿದ್ದು. ಬೆಳಗಾವಿ ಜಿಲ್ಲೆಯ ಉತ್ತರದ ತುದಿಯಲ್ಲಿರುವ ಸೇಡಬಾಳ ಗ್ರಾಮದ ಸುತ್ತಮುತ್ತಲಿನ ಜನಜೀವನ, ಭಾಷೆ, ಸಂಸ್ಕೃತಿ ಮುಂತಾದವುಗಳನ್ನು ಅಣ್ಣಾರಾಯರು ತದ್ವಾತ್ತಾಗಿ ಚಿತ್ರಿಸಿದ್ದಾರೆ. ಮಧ್ಯಮ ವರ್ಗದ ಜೈನ ಕುಟುಂಬವೊಂದರ ರೀತಿ-ನೀತಿ, ಆಚಾರ-ವಿಚಾರ ಹಾಗೂ ಕಟ್ಟುಪಾಡುಗಳನ್ನು 'ನಿಸರ್ಗ' ಜೀವಂತವಾಗಿ ಚಿತ್ರಿಸುತ್ತದೆ. ನಿಸರ್ಗವು ಸಮಕಾಲೀನ ಸಾಮಾಜಿಕ ರೂಢಿ ಕಂದಾಚಾರಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

ನಿಸರ್ಗದ ಕಥಾವಸ್ತುವನ್ನು ಆಯ್ಕೆ ಮಾಡಿಕೊಳ್ಳುವಾಗ ಅಣ್ಣಾರಾಯರು ಸಮಾಜ ಅದನ್ನು ಸ್ವೀಕರಿಸುವುದೋ ಅಥವಾ ನಿರಾಕರಿಸುವುದೋ ಎಂಬುದನ್ನು ಯೋಚಿಸಲಿಲ್ಲ. ಜೈನ ಧರ್ಮದ ಒಳಿತು-ಕೆಡಕುಗಳನ್ನು ಎಳೆ-ಎಳೆಯಾಗಿ ಚಿತ್ರಿಸುತ್ತಾರೆ. ನಿಸರ್ಗ ಧರ್ಮದ ಚೌಕಟ್ಟಿನಲ್ಲಿ ಸಿಲುಕಿದ ಮುಗ್ಧ ಜೀವಗಳು ಹೇಗೆ ಪರ್ಯವಸಾನಗೊಳ್ಳುವವು ಎಂಬುದನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಪ್ರಕೃತಿ ದತ್ತವಾದ ಗಂಡು-ಹೆಣ್ಣಿನ ಸೆಳೆತಗಳನ್ನು ಒಂದು ಜೈನ ಕುಟುಂಬದಲ್ಲಿಟ್ಟು ನಿಸರ್ಗ ಸಹಜವಾದ ಆ ಸೆಳೆತಗಳನ್ನು ನೋಡುವ ಕ್ರಿಯೆಯೇ ನಿಸರ್ಗದ ವಸ್ತು.

ಮದುವೆಯ ಮನೆಯಿಂದ ಪ್ರಾರಂಭವಾಗಿ ಮಸಣದಲ್ಲಿ ಪರ್ಯವಸಾನವಾಗುವ ಕಾದಂಬರಿ 'ನಿಸರ್ಗ'. ನಿಸರ್ಗದ ಕಥಾವಸ್ತು ಅನಂತ ತಾರೆಯರ ದುರಂತ ಪ್ರೇಮ. ಈ ಕಥಾವಸ್ತು ಅವರಿಬ್ಬರಿಗೆ ಮಾತ್ರ ಸೀಮಿತವಾಗಿರದೇ ಅದು ಸಾರ್ವತ್ರಿಕವಾದುದ್ದು. ಈ ಕಥೆಯ ನಾಯಕ-ನಾಯಕಿಯರಾದ ಅನಂತ ತಾರೆಯರ ಪ್ರೇಮಪಥ ಮುಳ್ಳಿನ ಹಾಸುಗೆಯಾಗಿದೆ. ಹೃದಯದಾಳದಲ್ಲಿ ಅಂಕುರಗೊಂಡ ಪ್ರೇಮವನ್ನು ವ್ಯಕ್ತಪಡಿಸಲು

ಸಾಧ್ಯವಾಗದೇ ಮರೆಯಲೂ ಸಾಧ್ಯವಾಗದೇ ಒಳಗೊಳಗೇ ಮೂಕವೇದನೆಯನ್ನು ಅವರಿಬ್ಬರು ಅನುಭವಿಸುವರು. ಇವರಿಬ್ಬರು ಮದುವೆಯಾಗಿ ದಾಂಪತ್ಯ ಸುಖವನ್ನು ಅನುಭವಿಸಲಿಲ್ಲ. ಆದರೆ ಆಂತರಿಕವಾಗಿ ಆ ಜೀವಗಳು ಸಂಲಗ್ನವಾಗಿದ್ದವು.

ಅನಂತ ತಾರೆಯರ ಪ್ರೀತಿ ಹೊಳೆಸಾಲ ಬಳ್ಳಿಯಂತೆ ಬೆಳೆದು ಬಂದಿತ್ತು. ಇದನ್ನು ತಳ್ಳಿ ಹಾಕುವುದು ಅಸಾಧ್ಯ. ತಮ್ಮ ಸುತ್ತಮುತ್ತಲಿನ ಸಮಾಜದ ಕಟ್ಟುಪಾಡುಗಳು, ಬಂಧನ ಮತ್ತು ವ್ಯಕ್ತಿ ದೌರ್ಬಲ್ಯಗಳಿಂದಾಗಿ ಅವರಿಬ್ಬರು ಪಟ್ಟ ಪಾಡುಗಳನ್ನು ಕಾದಂಬರಿಯಲ್ಲಿ ಹೃದಯ ಸ್ಪರ್ಶಿಯಾಗಿ ಚಿತ್ರಿಸುತ್ತಾರೆ. ಅನಂತ ತಾರೆಯರ ಪ್ರೇಮ ನಿಸರ್ಗದತ್ತವಾಗಿ ಬೆಳೆದು ಬರಲು ಕಾರಣ ಅವರು ಬೆಳೆದು ಬಂದ ಆ ಪರಿಸರ. ಹೀಗಿರುವಾಗ ತಾರೆಯ ವಿವಾಹ ಬಾಲ್ಯದಲ್ಲಿಯೇ ಸೋದರತ್ತೆಯ ಮಗನಾದ ಭರಮನೊಂದಿಗೆ ಜರುಗುವುದು. ಇದೇ ಮುಂಬರುವ ಎಲ್ಲ ದುರಂತಗಳಿಗೆ ಬುನಾದಿ. ತಾರೆ ಅನಂತನಲ್ಲಿ ನಟ್ಟುಹೋದ ಪ್ರೇಮವನ್ನು ಎಂದೂ ಮರೆಯಲಾರಳು. ತಾರೆ ಗ್ರಹಸ್ಥ ಜೀವನಕ್ಕೆ ಕಾಲಿಟ್ಟರೂ ಅನಂತ ಮತ್ತು ಆಕೆಯ ಪ್ರೇಮ ಬೆಳೆಯುತ್ತ ಸಾಗುವುದು. ಭರಮ ಮತ್ತು ತಾರೆ ಪ್ರಾಯ ತುಂಬಿದ ಹದಿಹರೆಯ ದಂಪತಿಗಳು. ಭರಮನ ಮನಸ್ಸು ತಾರೆಯತ್ತ, ತಾರೆಯ ಮನಸ್ಸು ಭರಮನತ್ತ ಹರಿಯಲು ಪ್ರಾರಂಭಿಸುತ್ತವೆ. ಆದರೆ ಅತ್ತೆ ಚಿಮ್ಮವ್ವ ಇವರಿಬ್ಬರ ಮಧ್ಯದ ಭದ್ರ ಕೋಟೆಯಾಗಿ ನಿಲ್ಲುತ್ತಾಳೆ. ಈ ಕೋಟೆಯನ್ನು ಸೀಳಿ ಇಬ್ಬರೂ ಸೇರುವದು ಕನಸಿನ ಮಾತು. ಗಂಡನಿಂದ ದೊರಕಬೇಕಾದ ದಾಂಪತ್ಯ ಸುಖ ತಾರೆಗೆ ದೊರೆತಿದ್ದರೆ ಅದನ್ನು ಅನಂತನಿಂದ ಪಡೆದುಕೊಳ್ಳುವ ಪರಿಸ್ಥಿತಿಯೇ ಎದುರಾಗುತ್ತಿರಲಿಲ್ಲ. ಅರಿಯದೇ ನಡೆದ ಹೋದ ತಪ್ಪಿಗಾಗಿ ಅನಂತ ಜೀವನವಿಡೀ ವ್ಯಥೆ ಪಡುತ್ತಾನೆ. ತನ್ನಿಂದಾದ ತಪ್ಪು ಇನ್ನೊಮ್ಮೆ ನಡೆಯದಂತೆ ಪ್ರಯತ್ನಪಟ್ಟರೂ ನೈಸರ್ಗಿಕ ಸೆಳೆತ ಅವರಿಬ್ಬರನ್ನು ಅಗಲಿಸುವುದಿಲ್ಲ.

ತಾರೆಯನ್ನು ಮರೆಯಲಿಕ್ಕಾಗದ ಅನಂತನ ಸ್ಥಿತಿ ತ್ರಿಶಂಕು ಸ್ಥಿತಿ. ಅನಂತನ ಹೆಂಡತಿ ಇಂದಿರೆ ಯಾವ ತಪ್ಪನ್ನು ಮಾಡದ ನಿರಪರಾಧಿ. ಇಂದಿರೆ ತನ್ನದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವ ದುರ್ದೈವಿ. ಅನಂತ ಯಾರಿಗೂ ನ್ಯಾಯ ಒದಗಿಸಿಕೊಡಲಾಗಲಿಲ್ಲ ಎಂಬುದನ್ನು ಅಣ್ಣಾರಾಯರು ಚಿತ್ರಿಸಿದ್ದಾರೆ. ಬಯಸಿದ ಪ್ರೀತಿ ದೊರಕದ ಕಾರಣ ಅನಂತ ದಾರಿ ತಪ್ಪಿ ಹಾಳಾಗುವನು. ತಾರೆಯ ಮುಖವನ್ನು ಭಂಗಾರಿ ಎಂಬ ವೈಶ್ಯೆಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಜನರ ನಿಂದನೆಗೆ ಬಲಿಯಾಗುತ್ತಾನೆ. ಅನಂತನ ದುರವಸ್ಥೆಗೆ ತಾರೆ ತಾನೇ ಕಾರಣ ಎಂದು ದುಃಖಿಸುವಳು. ಆದರೆ ಅವರ ಈ ಪ್ರೀತಿ ಯಾರಿಗೂ ಅರ್ಥವಾಗದು. ತಾರೆ ಮತ್ತು ಅನಂತರು ತಮ್ಮ ಸಂಬಂಧವನ್ನು ಸಮಾಜದ ಮುಂದೆ ಇಡುವ ಪ್ರಯತ್ನ ಮಾಡುವುದಿಲ್ಲ. ಏಕೆಂದರೆ ಸಮಾಜ ಅವರ ಸಂಬಂಧವನ್ನು ಒಪ್ಪುತ್ತಿರಲಿಲ್ಲ.

ತಾರೆಯ ಅತ್ತೆ ಚಿಮ್ಮವ್ವ ಕಾದಂಬರಿಯಲ್ಲಿ ಜರುಗುವ ಎಲ್ಲ ಕೆಡಕುಗಳಿಗೆ ಕಾರಣ. ರತ್ನವ್ವನ ಮೇಲಿನ ಸೇಡಿಗಾಗಿ ಮಗ ಭರಮನ ಸಂಸಾರವನ್ನೇ ಹಾಳು ಮಾಡುವಳು ಗುಜರಾತಿ ಕಾದಂಬರಿ 'ಜನುಮದ ಜೋಡಿ'ಯ ಅತ್ತೆ ಮತ್ತು ಚಿಮ್ಮವ್ವ ಕ್ರೂರತೆಯಲ್ಲಿ ಇಬ್ಬರೂ ಒಂದೇ. ಚಿಮ್ಮವ್ವನ ಗಂಡ ಹೂವಣ್ಣ ತಾರೆಯಲ್ಲಿ ಅನುಕಂಪ ತೋರುತ್ತಿದ್ದ. ಮಗ ಸೊಸೆಯರನ್ನು ಒಂದುಗೂಡಿಸಬೇಕು. ಚಿಮ್ಮವ್ವನ ಮನಸ್ಸನ್ನು ಪರಿವರ್ತಿಸಬೇಕು. ಬೇಗ ಮೊಮ್ಮಕ್ಕಳನ್ನು ಪಡೆದು, ತಾರೆಯ ಜೀವನವನ್ನು ಪರಿಪೂರ್ಣ ಮಾಡಬೇಕೆಂದು ಸದಾ ಪ್ರಯತ್ನಿಸುತ್ತಿದ್ದನು. ಆದರೆ ಮಧ್ಯದಲ್ಲಿಯೇ ಹೂವಣ್ಣನ ಆಕಸ್ಮಿಕ ಸಾವು ತಾರೆಗೆ ತುಂಬಲಾರದ ದುಃಖವನ್ನು ಕೊಡುತ್ತದೆ ಹಾಗೂ ತಾರೆಯನ್ನು ಒಂಟಿಯನ್ನಾಗಿಸುತ್ತದೆ.

ಅನಂತ ರತ್ನವ್ವನ ಹೊಲಮನೆಗಾಗಿ ಎಂದೂ ಆಸಿಸುತ್ತಿರಲಿಲ್ಲ. ತಾರಾ ಮತ್ತು ಆಕೆಯ ಕುಟುಂಬವೆಂದರೆ ಆತನಿಗೆ ಪ್ರಾಣ. ತಾರಾನನ್ನು ಯಾವ ಆಸೆ-ಆಮಿಶಕ್ಕೆ ಒಳಗಾಗಿ ಪ್ರೀತಿಸುತ್ತಿರಲಿಲ್ಲ. ಆತನೊಬ್ಬ ನಿಸ್ವಾರ್ಥ ಪ್ರೇಮಿಯಾಗಿದ್ದನೆಂಬುದನ್ನು ಅಣ್ಣಾರಾಯರು ಚಿತ್ರಿಸುತ್ತಾರೆ. ಶಿಕ್ಷಣದ ಪ್ರಭಾವದಿಂದಾಗಿ ಆತನಲ್ಲಿ ವೈಚಾರಿಕತೆಯೊಂದಿಗೆ ಮಾನವೀಯ ಮೌಲ್ಯಗಳು ಬೆಳೆದುಕೊಂಡಿದ್ದವು ಎಂಬುದಕ್ಕೆ ಅಣ್ಣಾರಾಯರು ಒಂದು ಚಿಕ್ಕ ನಿದರ್ಶನ ನೀಡುತ್ತಾರೆ. ರತ್ನವ್ವನಿಗೆ ಹುಷಾರಿಲ್ಲದ ಸಂದರ್ಭದಲಿ ಒಬ್ಬ ಮಗನಾಗಿ ನಿಂತು ರತ್ನವ್ವನ ಸೇವೆ ಮಾಡುತ್ತಾನೆ. ಆಕೆಗೆ ಸರಿಯಾದ ಸಮಯಕ್ಕೆ ಆಹಾರ, ಮಾತ್ರೆ ನೀಡುತ್ತ ಮಾನಸಿಕ ಧೈರ್ಯ ನೀಡುತ್ತಿದ್ದುದನ್ನು ಮೆಚ್ಚಲೇ ಬೇಕು. ಹೀಗಾಗಿ ಅನಂತ ಅವರೆಲ್ಲರ ಹೃದಯದಲ್ಲಿ ಮನೆ ಮಾಡಿದನು.

ಅನಂತ ಮೇಲಿಂದ ಮೇಲೆ ರತ್ನವ್ವನ ಮನೆಗೆ ಬರುವುದು, ಅವರೊಂದಿಗೆ ಇರುವುದನ್ನು ಕಂಡು ಚಿಮ್ಮವ್ವ ಬೇರೆ ತೆರನಾಗಿ ಯೋಚಿಸುವಳು. ಅನಂತನನ್ನು ಮಲ್ಲ ದತ್ತಕ ತೆಗೆದುಕೊಂಡರೆ ಆಸ್ತಿ ನಮಗೆ ದೊರೆಯದೆಂದು ತಾರಕ್ಕನನ್ನು ಮತ್ತಷ್ಟು ಕಾಡುವಳು. ಮಾತಿನ ಜಿದ್ದಿಗಾಗಿ ತನ್ನ ಮಗನಿಗೆ ಇನ್ನೊಂದು ಮದುವೆ ಮಾಡಿ ಹಟ ತೀರಿಸಿಕೊಳ್ಳುವಳು. ಆದರೆ ಇದೆಲ್ಲದರ ಪರಿಣಾಮವನ್ನು ಚಿಮ್ಮವ್ವ ಕೊನೆಯಲ್ಲಿ ಅನುಭವಿಸುವಳು.

ತಾರೆ ಭರಮನಿಂದ ದೂರಾಗಿ ಮಾನಸಿಕವಾಗಿ ನೊಂದಿದ್ದಳು. ತನ್ನ ಮಾನಸಿಕ ವ್ಯಥೆಯನ್ನು ಮರೆಯಲೆಂದು ಮಾವ ರಾಮಪ್ಪ ಐನಾಪೂರಕ್ಕೆ ಕರೆದುಕೊಂಡು ಬಂದಾಗ ತನ್ನ ಭಾವಿ ಜೀವನದ ಕನಸು ಕಾಣಲು ಪ್ರಾರಂಭಿಸುವಳು. ತಾನು ಗಂಡನ ಮನೆಯಲ್ಲಿ ಇದ್ದಿರುವುದಾಗಿ ಗ್ರಹಿಸಿದ್ದಳು. ತನ್ನನ್ನು ಅನಂತನಿಂದ ಬೇರೆ ಮಾಡಲು ಯಾರಿಂದಲೂ ಸಾಧ್ಯವಿಲ್ಲವೆಂಬ ಬಲವಾದ ನಂಬಿಕೆ ಆಕೆಯದು. ಈ ಕಾರಣದಿಂದಾಗಿ ತಾರೆ ಮತ್ತಷ್ಟು ಅನಂತನ ಸಮೀಪಕ್ಕೆ ಬರುತ್ತಿದ್ದಳು. ಆದರೆ ಅನಂತ ಮಾತ್ರ ತನ್ನಿಂದ ತಪ್ಪಾಗದಂತೆ ವರ್ತಿಸುತ್ತ ತಾರೆಯಿಂದ ದೂರವೇ ಸಾಗುತ್ತಿದ್ದನು.

ಗಂಡನಿಂದ ದೂರಾದ ತಾರಾ ಅನಂತನೊಂದಿಗೆ ವೈವಾಹಿಕ ಸುಖ ಕಾಣಬೇಕೆಂದು ಆಸೆ ಪಡುತ್ತಾಳೆ. ಆದರೆ ವಿಧಿ ಆಟವೇ ಬೇರೆಯಾಗಿತ್ತು. ನಲವತ್ತು ವಯಸ್ಸಿನ ಅಪ್ಪಣ್ಣನೊಂದಿಗೆ ತಾರಾನ ಉಡುಕಿಯಾಗುತ್ತದೆ. ತಾರೆಯನ್ನು ಅನಂತ ಮರೆಯಲು ಯತ್ನಿಸಿದಷ್ಟು ತಾರೆ ಮತ್ತಷ್ಟು ಆತನನ್ನು ಆಕ್ರಮಿಸಿಕೊಳ್ಳುವಳು. ಸಾಮಾಜಿಕ ಬಂಧನಕ್ಕೆ ಒಳಗಾದ ತಾರೆ ಇಷ್ಟವಿರದ ಅಪ್ಪಣ್ಣನೊಂದಿಗೆ ಶಾಂತವಾಗಿಯೇ ಸಂಸಾರ ಸಾಗಿಸುವಳು.

ಅನಂತ ತಾರೆಯ ಪ್ರೀತಿಯನ್ನು ಭಂಗಾರಿಯಲ್ಲಿ ಕಂಡು ಇಸ್ಪೀಟು ಆಡುತ್ತ ಮೋಜಿನ ಜೀವನ ಸಾಗಿಸುವನು. ಅನಂತ ಭಂಗಾರಿಯ ಸಂಬಂಧವು ಶರಶ್ಚಂದ್ರ ಚಟರ್ಜಿಯವರ ದೇವದಾಸ ಪಾರ್ವತಿಯರಿಗೆ ತೀರ ಸಮೀಪವಾಗುವಂಥದ್ದು. ಅನಂತನೇ ತನ್ನ ಜೀವವೆಂದುಕೊಂಡು ತಾರಾನಿಗೆ ಗಂಡ ಅಪ್ಪಣ್ಣ ಅನಂತನಿಂದ ದೂರವಿರುವಂತೆ ಹೇಳುವುದು ತಾರೆಯಿಂದ ಸಹಿಸಲಾಗದು. ಕದ್ದುಮುಚ್ಚಿ ಅನಂತನನ್ನು ಭೇಟಿಯಾಗುತ್ತಾಳೆ. ಆದರೆ ವಿಧಿ ಅವರಿಗೆ ವಿರುದ್ಧವಾಗಿ ವರ್ತಿಸುತ್ತಿತ್ತು.

ಅನೇಕ ವರ್ಷಗಳ ನಂತರ ತಾರಕ್ಕ ಗರ್ಭಿಣಿಯಾಗುತ್ತಾಳೆ. ಅನಂತನ ವಿಷಯಕ್ಕಾಗಿ ತಾರಕ್ಕನ ಗರ್ಭಪಾತವಾಗಿ ಸಮಾಜದ ದೃಷ್ಟಿಯಲ್ಲಿ, ಗಂಡನ ಮನೆಯವರ ದೃಷ್ಟಿಯಲ್ಲಿ ತಾರಾ ದೋಷಿಯಾಗುತ್ತಾಳೆ. ಇಲ್ಲಿಂದ ಅವಳ ಜೀವನ ಮಸಣದ ಕಡೆಗೆ ಸಾಗುವುದು. ತಾರಾ ಕೊನೆಯ ಉಸಿರೆಳೆಯುವ ಸಂದರ್ಭದವರೆಗೂ ಅನಂತನನ್ನು ಕಂಡು ಮನಬಿಚ್ಚಿ ಮಾತನಾಡಬೇಕೆಂಬ ಕೊನೆಯ ಆಸೆ ಫಲಿಸುವುದೇ ಇಲ್ಲ. ಅನಂತನನ್ನೇ ನೆನಪಿಸಿಕೊಳ್ಳುತ್ತ ಆಕೆ ಕಣ್ಣು ಮುಚ್ಚುವಳು. ವಿಷಯ ತಿಳಿದ ಅನಂತ ಉರಿಯುತ್ತಿರುವ ಅದೇ ಚಿತೆಯಲ್ಲಿ ಹಾರಿ ಸಾವಿನಲ್ಲಿ ಒಂದಾಗುವನು.

ಚಿತೆಯ ಬಳಿ ಇದ್ದವರೆಲ್ಲಾ ಹಿಂಗ್ಯಾಕ? ಹಿಂಗ್ಯಾಕ? ಎಂದು ಕೇಳುವ ಸಮಕಾಲೀನ ಪ್ರಶ್ನೆಗೆ ಉತ್ತರ ಕೊಡುವವರು ಯಾರು? ಈ ಕಗ್ಗಟ್ಟಿನ ಪ್ರಶ್ನೆಯನ್ನು ಲೋಕದ ಮುಂದಿಟ್ಟು ಕಾದಂಬರಿ ಮುಕ್ತಾಯವಾಗುವುದು.

ಆಸ್ತಿ ಕೈಬಿಟ್ಟು ಹೋದರೆ ಕೊನೆ ಗಳಿಗೆಯಲ್ಲಿ ತಮ್ಮನ್ನು ನೋಡುವವರು ಯಾರು? ಎಂಬ ಆತಂಕ ಹೆಣ್ಣಿನ ತಂದೆ-ತಾಯಿಗಳ ಮನಸ್ಸಿನಲ್ಲಿರುತ್ತದೆ. ಆದ್ದರಿಂದ ಆಸ್ತಿ ತಮ್ಮೊಂದಿಗೆ ಇದ್ದಾಗ ವೃದ್ಧಾಪ್ಯದ ಚಿಂತೆ ಇರುವುದಿಲ್ಲ. 'ಸಕ್ಕರೆ ಇದ್ದಲ್ಲೇ ಇರುವೆ ಮುಕರೋವ'[೧] ಆಸ್ತಿ ನೋಡಿ ನಮ್ಮನ್ನು ಯಾರಾದರೂ ನೋಡಿಕೊಳ್ಳುತ್ತಾರೆ' ಎಂದು ತಾರೆಯ ತಂದೆ-ತಾಯಿ ಅಭಿಪ್ರಾಯ ಪಡುವುದು ಸಹಜ.

ಗಂಡನಾದವನು ಏನೇ ತಪ್ಪು ಮಾಡಿದರೂ ಅದನ್ನು ಪ್ರಶ್ನಿಸುವ ಅಧಿಕಾರವನ್ನು ಸಮಾಜ ಹೆಣ್ಣು ಮಕ್ಕಳಿಗೆ ನೀಡಿಲ್ಲ. ಕಷ್ಟ ಸುಖ ಏನೇ ಇರಲಿ ಆ ಚೌಕಟ್ಟಿನಲ್ಲಿಯೇ ಆಕೆ ಬಾಳಬೇಕಾದ ಅನಿವಾರ್ಯತೆ. ತಲೆ ಮೇಲೆತ್ತಿ ನಡೆದಾಡುವ ಅವಕಾಶ ಹೆಣ್ಣು ಮಕ್ಕಳಿಗೆ ಇಲ್ಲ. ಹೆಣ್ಣನ್ನು ನೋಡುವ ದಮನಿತ ದೃಷ್ಟಿಕೋನವನ್ನು ಅಣ್ಣಾರಾಯರು ಹೇಳುತ್ತಾರೆ. ಆಕೆಯ ಭಾವನೆಗಳಿಗೆ ಸ್ಪಂಧಿಸುವಂತಹ ಹೃದಯಗಳ ಕೊರತೆ ಗೋಚರವಾಗುತ್ತದೆ.

ಅನಂತ ಗ್ರಾಮದಲ್ಲಿ ವಾಸಿಸುತ್ತಿದ್ದುದರಿಂದ ತಕ್ಕಮಟ್ಟಿಗೆ ಶಿಕ್ಷಣ ದೊರೆಯುವುದು. ಇಂಗ್ಲೀಷ ಶಿಕ್ಷಣದ ಪ್ರಭಾವದಿಂದಾಗಿ ಅನಂತನ ವ್ಯಕ್ತಿತ್ವ ನಿಸರ್ಗದಲ್ಲಿ ಭಿನ್ನ. ಆತ ವೈಚಾರಿಕವಾಗಿ ಯೋಚಿಸುತ್ತಿದ್ದ. ತಾರೆಯ ಆಸ್ತಿಯ ಬಗ್ಗೆ ಆತನಲ್ಲಿ ಯಾವ ಆಸೆ ಇರಲಿಲ್ಲ. ಸರಿ ತಪ್ಪುಗಳ ಬಗ್ಗೆ ಯೋಚಿಸುವ ತಾರ್ಕಿಕವಾದ ಬುದ್ಧಿ ಆತನಲ್ಲಿತ್ತು. ಧರ್ಮದ ವಿರುದ್ಧವಾಗಿ ವರ್ತಿಸುವುದು ತಪ್ಪು ಎಂದು ಗೊತ್ತಿದ್ದರೂ ನೈಸರ್ಗಿಕ ಸೆಳೆತಗಳಿಂದಾಗಿ ಆತ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಾಗಲೇ ಇಲ್ಲ. ದಿನ ಕಳೆದಂತೆ ಆತನ ಉನ್ನತ ವಿಚಾರಗಳು ಕುಸಿಯಲು ಪ್ರಾರಂಭಿಸುತ್ತವೆ. ತಮ್ಮ ಈ ಅನೈತಿಕ ಸಂಬಂಧವನ್ನು ತಮ್ಮ ಧರ್ಮ ಒಪ್ಪುವುದೇ? ಜನರನ್ನು ಎದುರು ಹಾಕಿಕೊಂಡು ಬದುಕುವುದು ಅಸಾಧ್ಯ ಎಂದು ತಿಳಿದುಕೊಳ್ಳುತ್ತಾನೆ. ಇಂತಹ ಸಂದರ್ಭದಲ್ಲಿ ಕೈ ಹಿಡಿದ ಹೆಂಡತಿಗೂ, ಮನಸಾರೆ ಮೆಚ್ಚಿದ ಪ್ರೇಯಸಿಗೂ ನ್ಯಾಯ ದೊರೆಕಿಸಿ ಕೊಡುವಲ್ಲಿ ವಿಫಲನಾಗುತ್ತಾನೆ.

ಅನಂತ ತಾರೆಯ ಪ್ರೀತಿಯನ್ನು ಮರೆಯುವ ಸಲುವಾಗಿ ಭಂಗಾರಿಯ ಸ್ನೇಹ ಬಯಸುತ್ತಾನೆ. ಭಂಗಾರಿಗಾರಿ ತನ್ನ ಆಸ್ತಿ–ಪಾಸ್ತಿ, ವ್ಯಕ್ತಿತ್ವ ಕಳೆದುಕೊಂಡು ಕುಟುಂಬ ಮತ್ತು ಸಮಾಜದ ದೃಷ್ಟಿಯಲ್ಲಿ ಕುಬ್ಜನಾಗುತ್ತಾನೆ. ಆದರೆ ಜೈನ ಧರ್ಮದ ಚೌಕಟ್ಟಿನಲ್ಲಿಯೇ ಆತ ಬದುಕಿದ್ದರಿಂದ ಭಂಗಾರಿಯನ್ನು ಹೆಂಡತಿಯೆಂದು ಮನೆಗೆ ಕರೆದುಕೊಂಡು ಬರುವದು ಸಾಧ್ಯವಿಲ್ಲ. ಆಕೆಯನ್ನು ಹೊರಗಿಡುವ ಅನಿವಾರ್ಯತೆ ಇರುತ್ತದೆ. ಅದೇ ತೆರನಾಗಿ ಅಪ್ಪಣ್ಣ ಸೂಳೆ ಸೋನಾನೊಂದಿಗೆ ಅಕ್ರಮ ಸಂಬಂಧವನ್ನಿಟ್ಟುಕೊಂಡಿದ್ದನು. ಆಕೆ ಕೆಳ ಜಾತಿಯವಳಾಗಿದ್ದರಿಂದ ಆಕೆಯನ್ನು ಅಪ್ಪಣ್ಣ ಮನೆಗೆ ಕರೆದುಕೊಂಡು ಬರುವುದು ಅಸಾಧ್ಯ. ಈ ಧೈರ್ಯವನ್ನು ಆತ ಎಂದೂ ಮಾಡಲಾರನು. ಇದು ಜೈನ ಧರ್ಮಕ್ಕೆ ವಿರುದ್ಧವಾದದ್ದು. ಆದರೂ ಮನುಷ್ಯನಲ್ಲಿ ಹುಟ್ಟುವ ಈ ಸಹಜವಾದ ಕಾಮಕ್ಕೆ ಆ ಜಾತಿ ಈ ಜಾತಿ ಎಂಬ ಬೇಧಭಾವವೇ ಇಲ್ಲ ಎಂಬುದನ್ನು ಅಣ್ಣಾರಾಯರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಗಂಡು–ಹೆಣ್ಣನ್ನು ಪ್ರೀತಿಸುವುದು ಅವರ ನಡುವಿರುವ ಸೆಳೆತದಿಂದ. ತಾರಾ ಮತ್ತು ಅನಂತರ ನಡುವೆಯಿದ್ದ ಆ ಸೆಳೆತ ತಾರಾ ಮತ್ತು ಭರಮರ ನಡುವೆಯೂ

ಇತ್ತು. ಆದರೆ ಆ ಸೆಳೆತಕ್ಕೆ ಆಸ್ತಿಯ ಸಲುವಾಗಿ ಒಂದು ದೊಡ್ಡ ಗೋಡೆಯೇ ನಿರ್ಮಾಣವಾಗುವುದು. ಆ ಗೋಡೆಯನ್ನು ನಾಶ ಮಾಡಿ ಒಂದಾಗುವ ಧೈರ್ಯ ಆ ಎರಡೂ ಹೃದಯಗಳಲ್ಲಿರಲಿಲ್ಲ. ಆ ಎರಡೂ ಹೃದಯಗಳನ್ನು ಒಂದಾಗಿಸಲು ಪ್ರಯತ್ನಿಸುತ್ತಿದ್ದ ಹೂವಣ್ಣ ಮಧ್ಯದಲ್ಲಿಯೇ ಮರಣ ಹೊಂದುವನು. ಸಮಸ್ಯೆ ಮತ್ತಷ್ಟು ಜಟಿಲವಾಗುತ್ತ ಸಾಗುತ್ತದೆ. ಇನ್ನೊಬ್ಬರ ಹೊಲ ಮನೆಗಾಗಿ ಆಸೆ ಪಡುವುದು ಸಭ್ಯತೆಯಲ್ಲ ಎಂದು ಚಿಮ್ಮವ್ವನಿಗೆ ಮೇಲಿಂದ ಮೇಲೆ ತಿಳಿ ಹೇಳುವ ಆದರ್ಶ ಪಾತ್ರ ಮಧ್ಯದಲ್ಲಿ ಕಣ್ಮರೆಯಾಗುವುದು ಒಂದು ದುರಂತ.

ಬಾಲ್ಯದಿಂದ ಪ್ರೇಮಿಸಿದ ಅನಂತ ತಾರೆಯರು ಜೀವನದಲ್ಲಿ ಪಟ್ಟಪಾಡುಗಳು ಮನಕರಗಿಸುವಂತಹವು. ಭರಮನ ಬದಲು ಅನಂತನನ್ನೇ ತಾರೆ ಮದುವೆಯಾಗಿದ್ದರೆ ತಾರೆಯ ಜೀವನದ ನದಿ ಬೇರೆಯತ್ತ ಸಾಗುತ್ತಿತ್ತು. ಸ್ವಚ್ಛಂದವಾಗಿ ಈ ಜೋಡಿ ಹಕ್ಕಿಗಳು ಬಾನಿನಂಗಳದಲ್ಲಿ ಹಾರಾಡುತ್ತಿದ್ದವು. ಆದರೆ ಧರ್ಮದ ಚೌಕಟ್ಟಿನಿಂದಾಗಿ ಸಂತೋಷದಿಂದ ಬಾಳಬೇಕಾದ ಆ ಪ್ರೀತಿಸುವ ಜೀವಗಳು ದುರಂತದಿಂದ ಕೊನೆಗೊಳ್ಳಬೇಕಾಗುತ್ತದೆ.

'ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕಾದಂಬರಿಯಲ್ಲಿಯ ಜಾನಪದ ಭಾಷೆ ಸುಲಿದ ಬಾಳೆಯ ಹಣ್ಣು! ಗ್ರಾಮೀಣ ಬದುಕಿನಲ್ಲಿಯೇ ಬಾಳಿದ ಅಣ್ಣಾರಾಯರ ಬದುಕು-ಬರಹ ಸರಳ-ಸುಂದರ. 'ನಿಸರ್ಗ' ಅವರ ಶ್ರೇಷ್ಠ ಕೃತಿ. ಅದರಲ್ಲಿರುವ ಸುಖ-ಸಂತೋಷ ದುಃಖ ದುಮ್ಮಾನಗಳ ಚಿತ್ರ ಜನತೆಯ ಮನ ಮಿಡಿಯುತ್ತಿವೆ. ಸಾಂಪ್ರದಾಯಿಕ ಮೂಢನಂಬಿಕೆಗಳಿಗೆ ಮುದ್ದಾಗಿರುವ ವಿದವಾ ವಿವಾಹ ಸನ್ನಿವೇಶ ಸಾಮಾಜಿಕ ಪ್ರಗತಿಯ ಶುಭ ಸಂಕೇತ! ಬೆಳಗಾವಿ ಜಿಲ್ಲೆಯ ಗಡಿಯಲ್ಲಿರುವ ಗಾದೆಯ ಮಾತುಗಳು ಮಡಿವಂತರ ಮೂಗು ಮೆಚ್ಚುವಂತೆನಿಸಿದರೂ ರಸಿಕ ಅಭ್ಯಾಸಿಗಳಿಗೆ ಕಳೆದ ಸಿಗುರಿನ ಕಬ್ಬಿನಂತಿವೆ'[೨] ಎಂಬ ಅಭಿಪ್ರಾಯ ಕಾದಂಬರಿಯ ವೈಶಿಷ್ಟ್ಯವನ್ನು ಹೇಳುತ್ತದೆ.

೩.೨ 'ನಿಸರ್ಗ'ದ ತಾತ್ವಿಕ ನೆಲೆಗಟ್ಟು :

'ನಾನು ಬರೆದ ಕಾದಂಬರಿಗಳಲ್ಲಿ 'ನಿಸರ್ಗ' ಮೊದಲನೆಯದು. ಅದರಲ್ಲಿ ಅನಂತ-ತಾರೆಯರೆಂದು ವ್ಯಕ್ತವಾಗಿರುವ ಪಾತ್ರಗಳ ಜೀವನವನ್ನು ನಾನು ಸಣ್ಣವನಿರುವಾಗಿನಿಂದಲೂ ನೋಡಿ ನೊಂದುಕೊಳ್ಳುತ್ತ ಬಂದಿದ್ದೆ. ಆ ಅನುಭವವು ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಮಾಡಿತ್ತು. ಈ ದುರಂತವನ್ನು ಜನರು ಕಾಣಲಿಲ್ಲ ಎಂಬ ಕೊರಗು ಹೃದಯವನ್ನು ಕೊರೆಯುತ್ತಿದ್ದಿತು. ಇದನ್ನೊಮ್ಮೆ ಲೋಕಕ್ಕೆ ಹೇಳಿಬಿಡದೆ ನನಗೆ ಶಾಂತಿಯಿಲ್ಲ, ಸಮಾಧಾನವಿಲ್ಲ ಎಂಬ ಅನಿವಾರ್ಯ ಒತ್ತಡಕ್ಕೊಳಗಾಗಿ ಈ ಕಾದಂಬರಿಯನ್ನು ಬರೆದೆ. ಕಾದಂಬರಿ ರಚನೆಯ ಯಾವ ಯೋಜನೆಯನ್ನೂ ಇಟ್ಟುಕೊಳ್ಳದೆ, ಇದ್ದುದಿದ್ದಂತೆ ನೈಸರ್ಗಿಕ ರೀತಿಯಲ್ಲಿ ಕತೆಯನ್ನು ಬಿತ್ತರಿಸಿದೆ. ಯಾವ ಒಂದು ವಿಚಾರ ಪ್ರಣಾಲಿಯ ಪ್ರಚಾರಕ್ಕಾಗಿ

ಯಾವ ಕಾದಂಬರಿಯನ್ನೂ ನಾನು ರಚಿಸಲಿಕ್ಕೆ ಯತ್ನಿಸಲಿಲ್ಲ. ನಾನು ಕಂಡ ಅನುಭವಿಸಿದ ಜೀವನದ ವಿವಿಧ ಮುಖಗಳನ್ನು ಚಿತ್ರಿಸಲಿಕ್ಕೆ ಯತ್ನಿಸಿದ್ದೇನೆ. ಆ ಜೀವನಾಂಶಗಳಿಂದ ರೂಪುಗೊಂಡ ಪಾತ್ರಗಳಿಗೆ ಬರುವ ಸ್ವಾಭಾವಿಕ ವಿಚಾರಗಳೇ ನನ್ನ ಕಾದಂಬರಿಗಳಲ್ಲಿಯ ವಿಚಾರಗಳು, ಆಯಾ ಪಾತ್ರಗಳ ಸಂಗಡಿಗನಾಗಿ ಮಾತ್ರ ನಾನು ಇರಲಿಕ್ಕೆ ಪ್ರಯತ್ನಿಸಿದ್ದೇನೆ. ಅದರಿಂದ ಮೇಲುನೋಟಕ್ಕೆ ವಿವಿಧ ವಿಚಾರಗಳ ತಾಕಲಾಟ, ಆಭಾಸ, ವಿರೋಧಗಳು ಕಾಣಬಹುದು. ಆದರೂ ಎಲ್ಲಕ್ಕೂ ತಳಹದಿಯಾಗಿ ಸತ್-ಅಸತ್‌ಗಳ ಹೋರಾಟ, ಅಸತ್‌ನ್ನು ಗೆಲ್ಲಲು ಸತ್ ಪ್ರಯತ್ನಿಸುತ್ತಿರುವುದರ ಪ್ರಜ್ಞೆಯೊಂದು ಇದೆ' ಎಂದು ಅಣ್ಣಾರಾಯರು ಆಕಾಶವಾಣಿ ಸಂದರ್ಶನವೊಂದರಲ್ಲಿ ಹೇಳಿದ ಮಾತುಗಳು ನಿಸರ್ಗ ಕಾದಂಬರಿಯ ಹಿನ್ನೆಲೆ ಮತ್ತು ತಾತ್ವಿಕತೆಯನ್ನು ತಿಳಿಸಿಕೊಡುತ್ತವೆ.[೩]

ನಿಸರ್ಗ ಸಹಜವಾದ ಹೆಣ್ಣು-ಗಂಡಿನ ಸೆಳೆತಗಳನ್ನು ಒಂದು ಜೈನ ಧರ್ಮದ ಕುಟುಂಬದಲ್ಲಿಟ್ಟು ನೋಡುವ ದೃಷ್ಟಿಯೇ ಈ ಕಾದಂಬರಿಯ ತಾತ್ವಿಕತೆ. ಗಂಡು-ಹೆಣ್ಣು ಎಂದರೆ ನಿಸರ್ಗದ ಎರಡು ಬಲವಾದ ಶಕ್ತಿಗಳು. ಈ ಬಲವಾದ ಶಕ್ತಿಗಳನ್ನು ಯಾವ ಸಾಮಾಜಿಕ ಬಂಧನದಲ್ಲಿಯೂ ಅಳವಡಿಸುವುದು ಸಾಧ್ಯವಿಲ್ಲ ಎನ್ನುವದು ನಿಸರ್ಗದ ನಿಯಮ. ಈ ನೆಲೆಗಟ್ಟಿನ ಮೇಲೆ ಕಾದಂಬರಿಯ ವಸ್ತು ವಿಕಾಸಗೊಳ್ಳುತ್ತ ಹೋಗುತ್ತದೆ. ನಿಸರ್ಗ ಮತ್ತು ತಾರೆ ಕೊನೆಗೊಮ್ಮೆ ಅನಂತದಲ್ಲಿಯೇ ಲೀನಗೊಳ್ಳುತ್ತವೆ.

ನಿಸರ್ಗ ಕಾದಂಬರಿಯ ಪಾತ್ರಗಳ ಹಿಂದೆ ನಿಸರ್ಗವೇ ಅಡಗಿದೆ. ಅನಂತ ಎಂದರೆ ಆಕಾಶ. ತಾರೆ ಎಂದರೆ ನಕ್ಷತ್ರ. ತಾರೆ ಇರುವುದು ಅನಂತದಲ್ಲಿಯೇ. ಮೇಲ್ನೋಟಕ್ಕೆ ಅವೆರಡು ಕೂಡಿದಂತೆ ಕಂಡರೂ, ವಾಸ್ತವವಾಗಿ ಅವು ಎಂದಿಗೂ ಕೂಡಲಾರವು ಎಂಬುದಕ್ಕೆ ಅನಂತ ತಾರೆಯರೇ ಸಾಕ್ಷಿ. ಅನಂತ ತಾರೆಯರ ಪ್ರೀತಿ ನಿಸರ್ಗ ಸಿದ್ಧ ಆದರೆ ನಿಯಮ ವಿರುದ್ಧ. ಇದನ್ನು ಸಮಾಜ ಎಂದೂ ಒಪ್ಪದು. ಆದರೆ ಅಣ್ಣಾರಾಯರು ಅವುಗಳನ್ನು ಸ್ವತಂತ್ರವಾಗಿ ಬೆಳೆಯಲು ಬಿಡುತ್ತಾರೆ. ನಿಸರ್ಗದ ಮಡಿಲಲ್ಲಿ ಅದೊಂದು ಸಹಜ ಪ್ರವೃತ್ತಿ. ಈ ನಿಸರ್ಗ ಸಹಜ ಪ್ರವೃತ್ತಿಗಳನ್ನು ಯಾವ ಜಾತಿ-ಧರ್ಮಗಳೂ ತಡೆಯಲಿಕ್ಕೆ ಸಾಧ್ಯವಿಲ್ಲ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ.

ಗೃಹಣಿಯಾದ ತಾರೆ ಗಂಡನನ್ನು ಬಿಟ್ಟು ಅನಂತನನ್ನು ಪ್ರೀತಿಸುವುದು ಅನೈತಿಕತೆ. ಆದರೆ ಗಂಡನಿಂದ ದಾಂಪತ್ಯ ಸುಖವನ್ನು ಪಡೆಯದ ತಾರೆ ಅನಂತನಿಂದ ಆ ಸುಖವನ್ನು ಬಯಸುವದು ಸ್ವಾಭಾವಿಕ. ಅಣ್ಣಾರಾಯರು ಈ ಅನೈತಿಕತೆಯನ್ನು ಜೈನ ಧರ್ಮದ ಚೌಕಟ್ಟಿನೊಳಗಿಟ್ಟು ನೋಡದೇ ನಿಸರ್ಗದ ಚೌಕಟ್ಟಿನೊಳಗಿಟ್ಟು ನೋಡಿ ಅದನ್ನು ಸಹಜ ನೈಸರ್ಗಿಕ ಪ್ರವೃತ್ತಿ ಎನ್ನುತ್ತಾರೆ. ಏಕೆಂದರೆ ನಿಸರ್ಗದ ದೃಷ್ಟಿಯಲ್ಲಿ ನೈತಿಕತೆ ಮತ್ತು ಅನೈತಿಕತೆ ಎಂಬ ಮಡಿವಂತಿಕೆ ಇಲ್ಲ. ಇದು ಮಾನವ ಸೃಷ್ಟಿಸಿಕೊಂಡ ಪರಿಕಲ್ಪನೆ.

ಅನಂತ ತಾರೆಯರು ಕೇವಲ ಗಂಡು-ಹೆಣ್ಣು ಮಾತ್ರವಲ್ಲ. ಅವು ನಿಸರ್ಗದ ಪುರುಷತತ್ವ ಮತ್ತು ಸ್ತ್ರೀತತ್ವ. ಅವುಗಳನ್ನು ಕೂಡಿಸುವ ಪ್ರಯತ್ನ ಅಣ್ಣಾರಾಯರದು.

ಮಧ್ಯಮ ವರ್ಗದ ಜನರು ಚಿಕ್ಕ ಚಿಕ್ಕ ಹೊಲಗಳನ್ನು ಹೊಂದಿರುವರು. ಸ್ವಂತ ದುಡಿಮೆ ಮಾಡುವವರು. ಅವರ ಚಿಕ್ಕ ಆಸ್ತಿಯೇ ಅವರ ಜೀವಾಳ. ಆಸ್ತಿಯನ್ನು ಹೆಚ್ಚಿಸುವ ಆಸೆ ಅಪಾರ. ಯಾವುದೇ ಕಾರಣಕ್ಕೆ ಆಸ್ತಿಯನ್ನು ಕಳೆದುಕೊಳ್ಳಲು ಒಪ್ಪುವುದಿಲ್ಲ. ಶಿಕ್ಷಣದಿಂದ ವಂಚಿತರಾದ ಅವರು ತಮ್ಮ ಗಂಡು ಮಕ್ಕಳಿಗೂ ಹಾಗೂ ಹೆಣ್ಣು ಮಕ್ಕಳಿಗೂ ಶಿಕ್ಷಣವನ್ನು ನೀಡುವುದಿಲ್ಲ. ಬಾಲ್ಯದಲ್ಲಿಯೇ ಮದುವೆ ಮಾಡಿ, ಮೈನೆರೆದ ನಂತರ ಗಂಡನ ಮನೆಗೆ ಕಳುಹಿಸಿ ಕೊಡುವರು. ಹೆಣ್ಣು ಮಕ್ಕಳು ಅತ್ತೆಯ ಅಂಕಿತದಲ್ಲಿಯೇ ಇರಬೇಕಾಗುವ ಕಟ್ಟುಪಾಡು ಅವರನ್ನು ಸಂಸಾರ ಸುಖದಿಂದ ವಂಚಿಸುತ್ತದೆ.

ಬಾಲ್ಯದಲ್ಲಿ ಮಕ್ಕಳ ಮದುವೆ ಮಾಡುವಾಗ ತಂದೆ-ತಾಯಿಗಳು ಮಕ್ಕಳ ಅಭಿಪ್ರಾಯವನ್ನೇ ಕೇಳುವುದಿಲ್ಲ. ಮಕ್ಕಳ ಜೀವನದ ಬಹುದೊಡ್ಡ ತಿರ್ಮಾನವನ್ನು ತಂದೆ-ತಾಯಿಗಳೇ ತೆಗೆದುಕೊಳ್ಳುವರು. ಜೀವನ ಸಂಗಾತಿಯ ಆಯ್ಕೆಯ ಸ್ವಾತಂತ್ರ್ಯವನ್ನು ವದು-ವರರಿಗೆ ಕೊಡುವುದಿಲ್ಲ. ತಾರೆ ತಂದೆ-ತಾಯಿಯರ ಏಕೈಕ ಮಗಳಾಗಿದ್ದರಿಂದ ಮದುವೆಯ ನಂತರ ತಮ್ಮ ಆಸ್ತಿ ಹೊರಗೆ ಹೋಗಬಾರದೆಂದು ತಮ್ಮೊಳಗೆ ಉಳಿಯಬೇಕೆಂದು ಒಳಗೊಳಗೆ ಸಂಬಂಧಗಳನ್ನು ಬೆಸೆಯುವರು. ತಾರೆ ಭರಮರ ಒಪ್ಪಿಗೆಯನ್ನೇ ಹೇಳುವುದಿಲ್ಲ. ತಾರೆ ವಯಸ್ಸಿನಲ್ಲಿ ಭರಮನಿಗಿಂತ ತುಸು ದೊಡ್ಡವಳಾಗಿದ್ದರೂ ಚಿಮ್ಮವ್ವ ಆಸ್ತಿ ತಮಗೇ ದೊರಕಬೇಕೆಂಬ ದುರಾಲೋಚನೆಯಿಂದ ತಾರೆಯನ್ನು ತಂದುಕೊಳ್ಳುವದು. 'ತುಪ್ಪ ಬಿದ್ದರೂ ಖಿಚಡ್ಯಾಗs ಬಿದ್ದಾಂಗ ಆಯ್ತು'[೪] ಎಂಬುದು ಅಣ್ಣನ ಆಸ್ತಿ ತಂಗಿ ಚಿಮ್ಮವ್ವನ ಮನೆಯನ್ನೇ ಸೇರಿತು ಎಂಬುದಕ್ಕೆ ಪುಷ್ಟಿಕೊಡುತ್ತದೆ.

ಅತ್ತೆ ಮನೆಯವರಿಗೆ ಆಸ್ತಿಯನ್ನು ಕೊಡಲು ಹೆಣ್ಣಿನ ತಂದೆ-ತಾಯಿಗಳು ನಿರಾಕರಿಸಿದರೆ ಎಲ್ಲ ರಕ್ತ ಸಂಬಂಧಗಳನ್ನು ದೂರ ಮಾಡಿ ಸೊಸೆಯನ್ನು ನಾನಾ ರೀತಿಯಿಂದ ಕಾಡುವ ಅತ್ತೆಯರ ಚಿತ್ರಣ ಕನಿಕರ ಹುಟ್ಟಿಸುವದು. ಆಸ್ತಿ ಆಮೀಶಕ್ಕಾಗಿ ಮಗನ ಜೀವನವನ್ನೇ ಹಾಳು ಮಾಡಿದ ಚಿಮ್ಮವ್ವ ಮುಂದೆ ಘಟಿಸುವ ಎಲ್ಲ ಕೆಡಕುಗಳಿಗೆ ಕಾರಣಳಾಗುತ್ತಾಳೆ. ತಾರಾಳ ಜೀವನವು ಹೊಲಮನಿಯ ತಿಕ್ಕಾಟದಲ್ಲಿ ಸರ್ವನಾಶವೇ ಆಗಿ ಹೋಗುವದು. ಆದರೆ ತಾರೆಯಲ್ಲಿ ಹೊಲಮನಿಯ ಕುರಿತು ಯಾವ ಆಸೆ ಆಕಾಂಕ್ಷೆಗಳಿರಲಿಲ್ಲ. ತಾರೆಯ ತಂದೆ-ತಾಯಿ ಮೊಮ್ಮಕ್ಕಳ ನಿರೀಕ್ಷೆಯಲ್ಲಿದ್ದರು. ಆದರೆ ಚಿಮ್ಮವ್ವ 'ಈಗ ತಾರೀ ಬಸರ ಆದರ, ಆಕಿ ಜನ್ಮ ದಂಡಿಗಿ ಹತ್ತಿತ್ತಂತ, ರತ್ನಾನ ಮೂಗ ಮ್ಯಾಲ ಆಯ್ತ. ಆಂಯ್ದ್ಯಾನ ನಮಗೆ ಸಿಗೂ ಆಶಾ ಇಲ್ಲ, ಆ ಹೊಲ ಮನೀ'[೫] ಎಂಬ ದುರಾಸೆಯಲ್ಲಿದ್ದಳು. ಚಿಮ್ಮವ್ವನ ಇಂತಹ ನೀಚ ವಿಚಾರಗಳು ತನ್ನ ಮಗ ಮತ್ತು

ಸೊಸೆಯನ್ನು ದಾಂಪತ್ಯ ಸುಖದಿಂದ ವಂಚಿಸುತ್ತವೆ. ತನ್ನ ಮಗ ತನ್ನಿಂದ ಎಂದೂ ದೂರಾಗದಂತೆ ಆತನಿಗೆ ಒಳ್ಳೆಯ ಅಡುಗೆ ಮಾಡಿ, ತಾನೇ ಮುಂದೆ ಕುಳಿತು ಆತನಿಗೆ ಬಡಿಸುತ್ತಿದ್ದಳು. ಭರಮ ತಾರೆಯ ತವರು ಮನೆಯ ಕಡೆಗೆ ಎಂದೂ ಹೋಗಬಾರದ ಹಾಗೆ ಜಾಗೃತಿವಹಿಸುತ್ತಿದ್ದಳು. ಒಂದು ವೇಳೆ ತಾರಾಳಿಗೆ ಮಕ್ಕಳಾದರೆ ಆಕೆಯನ್ನು ಬಿಡಲಾಗದು. ಆಕೆ ತವರು ಮನೆಯನ್ನೇ ಶಾಶ್ವತವಾಗಿ ಸೇರಬಹುದು ಎಂಬ ಆತಂಕ ಅತ್ತೆಯದು. ಎಲ್ಲಿಯವರೆಗೆ ತಾರಾನ ಹೊಲಮನಿ ಅವರ ಹೆಸರಿಗೆ ಆಗುವುದಿಲ್ಲವೋ ಅಲ್ಲಿಯವರೆಗೆ ಚಿಮ್ಮವ್ವ ಗಂಡ–ಹೆಂಡಿರನ್ನು ಕೂಡಲು ಬಿಡುವುದಿಲ್ಲ. ಆಸ್ತಿಯ ಸಲುವಾಗಿ ಮಧ್ಯಮ ವರ್ಗದ ಜೈನ ಕುಟುಂಬಗಳು ಹಾಳಾಗುವ ರೀತಿಯನ್ನು ಅಣ್ಣಾರಾಯರು ಚಿತ್ರಿಸುತ್ತಾರೆ.

❖❖❖❖❖

ಅಡಿಟಿಪ್ಪಣಿಗಳು :

೧) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೪೮

೨) ಈಶ್ವರ ಕಾಪಸೆ : ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ (ಮುನ್ನುಡಿ) ಪು.ಸಂ. ೮

೩) ಆಕಾಶವಾಣಿ ಸಂದರ್ಶನ : ೧೬–೦೬–೧೯೫೬ : ಮುಂಬೈ ಆಕಾಶವಾಣಿ ಕೇಂದ್ರ

೪) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೪೮

೫) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೮೬

ಅಧ್ಯಾಯ : ೮

'ನಿಸರ್ಗ'ದಲ್ಲಿ ಜೈನ ಸಂವೇದನೆಗಳ ಒಳನೋಟಗಳು

ಅಧ್ಯಾಯ - ೪
'ನಿಸರ್ಗ'ದಲ್ಲಿ ಜೈನ ಸಂವೇದನೆಗಳ ಒಳನೋಟಗಳು

ಅಣ್ಣಾರಾಯರ ಕಾದಂಬರಿಯ ಪಾತ್ರಗಳು ಸ್ವತಂತ್ರವಾಗಿ ಬೆಳೆಯುತ್ತವೆ. ಈ ಪಾತ್ರಗಳನ್ನು ಧರ್ಮದ ಸಂಕೋಲೆಯಲ್ಲಿ ಬಂದಿಸಲು ಸಾಧ್ಯವೇ ಇಲ್ಲ. ಅವರು ಪಾತ್ರಗಳ ಮನಸ್ಸಿನಲ್ಲಿ ಅಡಗಿರುವ ಭಾವನೆಗಳನ್ನು ಹೆಕ್ಕಿ ಹೆಕ್ಕಿ ತೆಗೆಯುವ ಸಾಹಸ ಮಾಡಿದ್ದಾರೆ. ತಾರಾ ವಿವಾಹಿತಳಾದರೂ ಅನಂತನನ್ನು ಪ್ರೀತಿಸುವದು. ಒಂದು ನೈಸರ್ಗಿಕ ಪ್ರವೃತ್ತಿಯಾಗಿ ಬೆಳೆಯುತ್ತ ಸಾಗುವುದನ್ನು ಅಣ್ಣಾರಾಯರು ನಿರೂಪಿಸುತ್ತಾರೆ.

'ಇನ್ನಾರಿಗೂ ಹೇಳಬಾರದ ತಮ್ಮ ಒಲವಿನ ಬಗೆಯನ್ನು ದುಃಖದ ಕಾರಣವನ್ನು ತಮ್ಮೊಳಗೆ ಒತ್ತಿಕ್ಕಿ ಪ್ರವಾಹಪತಿತರಾಗಿ ಅನಂತ ತಾರೆಯರು ಹೊರಟದ್ದು ನಡು-ನಡುವೆ ತಮ್ಮ ಹಣೆಯ ಬರಹವನ್ನು ತಿದ್ದಿ ಸುಖದ ದಾರಿ ತುಳಿಯಬೇಕೆಂದು ವಿಫಲವಾಗಿ ಹೆಣಗಿದ್ದು ಕಡೆಗೆ ರೋಗದ ಹಸ್ತದಿಂದ ಮೃತ್ಯು ಮುಖದಲ್ಲಿ ಬಿದ್ದದ್ದು, ಬೀಳುವವರೆಗೆ ಗಾಢ ಪ್ರೀತಿಯನ್ನು ತೋರಿದ್ದು ಇವನ್ನೆಲ್ಲ ಇಲ್ಲಿ ಮನ ಮೆಚ್ಚುವಂತೆ ನಿರೂಪಿಸಲಾಗಿದೆ'[೧] ಎಂಬ ಮುನ್ನುಡಿಕಾರರ ಅಭಿಪ್ರಾಯವನ್ನು ಒಪ್ಪುವಂತದ್ದಾಗಿದೆ.

ಪ್ರಸ್ತುತ ಕಾದಂಬರಿಯಲ್ಲಿ ಚಿತ್ರಿತಗೊಂಡ ತಾರೆಯ ಪಾತ್ರ ಇಡೀ ವ್ಯವಸ್ಥೆಯ ಸ್ತ್ರೀ ಸಂವೇದನೆಯನ್ನು ಚಿತ್ರಿಸಿದೆ. ಪ್ರಕೃತಿ ಸಹಜ ಬಯಕೆಗಳನ್ನು ತನ್ನಿಚ್ಛೆಯಂತೆ ಪಡೆಯಲಾಗದ ತಾರೆ ಸಾಮಾಜಿಕ ಬಂಧವಾದ 'ವಿವಾಹ ಧರ್ಮ' ಪ್ರವಾಹಕ್ಕೆ ವಿರುದ್ಧವಾಗಿ ಈಜುತ್ತ ಮತ್ತೆ ಸುಖದ ದಾರಿಯನ್ನು ಹುಡುಕುತ್ತ ಸೋತು, ಸೊರಗಿ ರಕ್ಷಣೆ ಕೊಡುವ ಆಸರೆಯಿಲ್ಲದೇ ರೋಗವನ್ನಾಶ್ರಯಿಸುವಂತಹ ಪ್ರಸಂಗ. ಹೆಣ್ಣು ಹಿರಿಯರ ಇಚ್ಛೆಯಲ್ಲಿಯೇ ತನ್ನ ಬದುಕಿನ ನೂಲನೇಯಬೇಕೆಂಬ ಅಂಶಗಳು ಇಂದಿಗೂ ಮಾಸದೇ ಉಳಿದದ್ದು ಸ್ಪಷ್ಟ. ಏಕೆಂದರೆ ನಿಸರ್ಗ ಕಾದಂಬರಿ ರಚನೆಯಾದ ಸಾಮಾಜಿಕ ವ್ಯವಸ್ಥೆಯಲ್ಲಿ ಇನ್ನೂ ಮಹಿಳೆ ಕುಬ್ಜತೆಯಲ್ಲಿದ್ದಳು. ನೇರವಾಗಿ ತನ್ನ ಮನದಳಲನ್ನು ತೋಡಿಕೊಳ್ಳುವ, ತನ್ನಆಯ್ಕೆಯನ್ನು ಪಡೆದುಕೊಳ್ಳುವ ಅವಕಾಶವಿಲ್ಲದ ಸಂದರ್ಭದಲ್ಲಿ ಕಾದಂಬರಿಯ ನಾಯಕಿ ತಾರೆಯಂತಹ ಹೆಣ್ಣು ಮಕ್ಕಳು ತಮ್ಮ ಒಲವನ್ನು ಪಡೆಯಲು ಹೆಣಗಿದ ಪ್ರಸಂಗದ ಪ್ರತೀಕವೇ ತಾರೆ.

ಇನ್ನೊಂದು ಕಡೆಗೆ ಚಿಮ್ಮವ್ವನಂತಹ ಅತ್ತೆಯರಿಂದ ಎಳೆವಯದ ಬಯಕೆಗಳನ್ನು ಬದಿಗೊತ್ತಿ ಕಟ್ಟಿಕೊಡುವ ಮತ್ತು ದಮನಗೊಳಿಸುವ ಪ್ರಸಂಗಗಳು, ಕ್ರೂರ ಸತ್ಯಗಳು, ದುರಾಸೆ ದುಷ್ಟತನಗಳು ನಮ್ಮ ಸುತ್ತಲೂ ಜೀವಂತವಾಗಿರುವುದನ್ನು ಇಂಥಹ ಪಾತ್ರಗಳ ಮುಖೇನ ಲೇಖಕರು ನಮ್ಮ ಗಮನಕ್ಕೆ ತರುತ್ತಾರೆ.

ಹೆಣ್ಣು ಕೌಮಾರ್ಯ, ಯೌವ್ವನಗಳನ್ನು ದಾಟಿ ಗ್ರಹಸ್ತಾಶ್ರಮದ ಅನುಭವದ ಭೂಮಿಯಲ್ಲಿ ಬೆಂದು ಅತ್ತೆಯಾದಾಗ ಕುಟುಂಬದಲ್ಲಿ ಹಿರಿತನವನ್ನು ಪಡೆಯುತ್ತಾಳೆ. ತಾನು ಸೊಸೆಯಾಗಿದ್ದಾಗ ಅನುಭವಿಸಿದ ನೋವನ್ನು, ಅತ್ತೆಯ ಸ್ಥಾನಕ್ಕೆ ಬಂದಾಗ ಪ್ರತಿಕಾರದ ರೂಪವಾಗಿ ಬಳಸಿಕೊಳ್ಳುತ್ತಾಳೆ. ಪ್ರಸ್ತುತ ಕಾದಂಬರಿಯಲ್ಲಿ ಚಿಮ್ಮವ್ವ ನಂತವರನ್ನು ಚಿತ್ರಿಸುವುದರ ಮೂಲಕ ಲೇಖಕರು ಸ್ತ್ರೀಗಿರುವ ಸ್ಥಾನಗಳನ್ನು ನೆನಪಿಸುತ್ತಾರೆ. ಮಗ ಸೊಸೆಯನ್ನು ಕೂಡದಂತೆ ಮಾಡುವ ದುಷ್ಟತನಗಳು ತಾನೂ ಒಂದೊಮ್ಮೆ ಸೊಸೆಯಾಗಿದ್ದೆ ಎಂಬ ನೆನಪು ಮರೆತು ಹೋಗಿ ತನ್ನ ಸ್ಥಾನವನ್ನು ಬಿಗಿಗೊಳಿಸಿಕೊಳ್ಳಲು ಪ್ರಯತ್ನಿಸುವ ಪ್ರಸಂಗಗಳು ಇಂದಿಗೂ ಜೈನ ಮಧ್ಯಮ ವರ್ಗದ ಸಮುದಾಯದಲ್ಲಿ ಜಾಗೃತವಾಗಿವೆ. ಅತ್ತೆಯ ಕ್ರೌರ್ಯದಿಂದ ತನ್ನ ಗಂಡನ ಪ್ರೀತಿಯನ್ನು ಪಡೆಯದ ತಾರೆ ತನ್ನ ಬಾಲ್ಯದ ಗೆಳೆಯನ ಒಲವಿಗಾಗಿ ಹಂಬಲಿಸುವುದು ಸಹಜ.

ನಾಯಕಿ ತಾರೆಗೆ ಗಂಡನ ಮನೆಯಲ್ಲಿ ಸ್ಥಾನ ಕಳೆದು ಹೋದ ಪ್ರಸಂಗವನ್ನು ಆಧಾರವಾಗಿಟ್ಟುಕೊಂಡ ಅವಳ ತಂದೆ-ತಾಯಿಗಳು ಜೀವನಾಶ್ರಯವಾಗಿ ಮರುವಿವಾಹ ಮಾಡುವ ಸಂದರ್ಭ, ಇನ್ನೂ ಮೌಢ್ಯಾವಸ್ಥೆಯಲ್ಲಿಯೇ ಇರುವ ಸಂದರ್ಭದಲ್ಲಿ ಸ್ತ್ರೀಗೆ ಮರುವಿವಾಹದಂತಹ ಅವಕಾಶ ಕಲ್ಪಿಸಿಕೊಟ್ಟ ಲೇಖಕರ ವಿಚಾರಧಾರೆಗಳು ಪ್ರಶಂಸನೀಯ.

ಅನಂತ ಮತ್ತು ಅಪ್ಪಣ್ಣನಂತಹ ಪಾತ್ರಗಳು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅರಳಿ ಘಮಿಸುವ ಪುಷ್ಪಗಳ ಸುತ್ತ ಸುಳಿವ ಭ್ರಮರಗಳು. ಯಾವ ನೀತಿ ನಿರ್ಬಂಧನೆಗಳು ಇಲ್ಲದೇ ಸ್ವೇಚ್ಛಾಚಾರಿಗಳಾಗಿ ಸ್ವಾರ್ಥದ ಪರಮಾವಧಿಯ ತುತ್ತ ತುದಿಯಲ್ಲಿ ನಿಂತವರು. ಎಂದಿನಿಂದಲೂ ನಮ್ಮ ವ್ಯವಸ್ಥೆಯಲ್ಲಿ ಇಂಥವರೇ ವಿಜೃಂಭಿಸಿ ಹೆಣ್ಣನ್ನು ಸೂತ್ರದ ಬೊಂಬೆಯನ್ನಾಗಿ ಬಳಸಿಕೊಳ್ಳುವುದೇನು ಹೊಸದಲ್ಲ.

ಬಾಲ್ಯದಲ್ಲಿ ಆಟವಾಡುತ್ತಿದ್ದಾಗಿನಿಂದ ತಾರಾ ಅನಂತನ ಸೆಳೆತಕ್ಕೆ ಒಳಗಾದವಳು. ಭರಮನ ವಸ್ತುಗಳನ್ನು ಯಾರಾದರೂ ಮುಟ್ಟಿದರೆ ತಾರೆಯಿಂದ ಸಹಿಸಲು ಅಸಾಧ್ಯ. ಅಂದರೆ ಅನಂತ ತನಗೆ ಮಾತ್ರ ಮೀಸಲು. ಆತ ಕೇವಲ ತನ್ನವನು ಮಾತ್ರ. ಆತನನ್ನು ಬೇರೆ ಯಾರೊಂದಿಗೂ ಹಂಚಿಕೊಳ್ಳಲು ಆಕೆ ಬಯಸುತ್ತಿರಲಿಲ್ಲ. ಅನಂತನಲ್ಲಿ ಬೆರೆತು ಅವನಿಗಾಗಿ ತನ್ನನ್ನು ಮುಡುಪಾಗಿರಿಸಿಕೊಂಡರೂ ಭರಮನ ಮನೆ ಸೇರುವ ಪ್ರಸಂಗ ತಾರೆಯದು. ತಾರಾ ಮತ್ತು ಭರಮರ ಜೋಡು ಇಜ್ಜೋಡು ಆಗಿದ್ದರಿಂದ ಮೆರವಣಿಗೆ

ಮುಗಿಯುವವರೆಗೆ ತಾರಾ ಮುಖ ಮೇಲೆತ್ತದೇ ಇರುವಳು. ಏಕೆಂದರೆ ಭರಮ ತಾರೆಗೆ ಒಲ್ಲದ, ಒಪ್ಪದ ಗಂಡನಾಗಿದ್ದ. ಬಾಲ್ಯದಲ್ಲಿಯೇ ನಿಸರ್ಗ ಸಹಜವಾಗಿ ಅಂಕುರಗೊಂಡ ಪ್ರೀತಿ ಅವರ ಪಾಲಿಗೆ ಬಿಸಿ ತುಪ್ಪವೇ ಸರಿ. ತಾರಕ್ಕನಿಗೆ ಅನಂತನ ಎಂಜಿಲವನ್ನು ತಿನ್ನುವುದರಲ್ಲಿ ಎಲ್ಲಿಲ್ಲದ ಸಂತೋಷ. ರತ್ನವ್ವ ಪ್ರೀತಿಯಿಂದ ಅನಂತನಿಗೆ ಹೆಚ್ಚುಚ್ಚು ಊಟ ಬಡಿಸುತ್ತಿದ್ದಳು. ಅದನ್ನೆಲ್ಲ ತಿನ್ನಲಿಕ್ಕಾಗದೇ ಅನಂತ ಪೇಚಾಡುವಾಗ ತಾರೆ ಆತನ ಹೆಂಡತಿಯಂತೆ ಆತನ ಎಂಜಿಲವನ್ನು ಪ್ರೀತಿಯಿಂದ ತಿನ್ನುತ್ತಿದ್ದಳು. ಆತನೇ ಆಕೆಯ ಗಂಡನೆಂದು ದೃಢವಾಗಿ ನಂಬಿದ್ದಳು. ಗಂಡ ಬಿಟ್ಟಿದ್ದನ್ನು ಹೆಂಡತಿ ತಿನ್ನಲೇ ಬೇಕು ಎಂಬುದು ತಾರೆಯ ವಿಚಾರ. ಆದರೆ ಮಲ್ಲ ಇದನ್ನೆಲ್ಲ ಗಮನಿಸುತ್ತಲೇ ಇರಲಿಲ್ಲ. ಅನಂತನ ತಟ್ಟೆಯಲ್ಲಿ ತುಪ್ಪವು ಹೆಚ್ಚಿರುವುದರಿಂದ ತಾರೆ ಆತನ ತಟ್ಟೆಯಲ್ಲಿ ಉಣ್ಣುತ್ತಾಳೆ ಎಂದು ತಿಳಿದುಕೊಳ್ಳುತ್ತಾರೆ. ಅನಂತನ ಬಗ್ಗೆ ಆಕೆಗಿರುವ ಕುತೂಹಲ, ಆಸಕ್ತಿ, ಪ್ರೇಮದ ಸೂಕ್ಷ್ಮತೆಗಳನ್ನು ಯಾರೂ ಅರ್ಥ ಮಾಡಿಕೊಳ್ಳುವುದಿಲ್ಲ. ಕೂಡಿ ಬೆರೆತ ಮನಸ್ಸುಗಳನ್ನು ದೂರ ಮಾಡಿದ್ದರಿಂದ ಆ ಎರಡೂ ಕುಟುಂಬಗಳು ಹಾಳಾಗುವವು. ಅವರ ಬದುಕೆಲ್ಲಾ ವಿಘಟನೆಗೊಳ್ಳುವುದನ್ನು ಅಣ್ಣಾರಾಯರು ಚಿತ್ರಿಸುತ್ತಾರೆ.

ಅನಂತನ ತಾಯಿ ಸುಂದರಾಗೆ ತಾರೆಯಲ್ಲಿ ಅಪಾರ ಪ್ರೀತಿ. ತಾರಕ್ಕನ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ 'ಎಲ್ಲಿ ಹೋದರೂ ಪೋರಿ, ಮಂದಿನ ಯಾನ ನೂಸಾಕಿ ಅಲ್ಲs..........ಹಳೀ ಹುಣ್ಣಿಗಿ ಕಟ್ಟಿರ ಮಾಯಿಬೇಕ ಅಂಥಾಕಿ ನೋಡವ್ವ.... ಎಲ್ಲರಿಗೂ ಹಚಕೊಂಡ ಹೊಂದಕೊಂಡ ಇರಾಕಿ.............'[೨] ಎನ್ನುವಳು. ಆದರೆ ವಿಧಿ ತಾರೆಯ ಜೀವನವನ್ನು ಮಾಯದಂತಹ ಹುಣ್ಣಾಗಿ ಪರಿವರ್ತಿಸಿದ್ದು ವಿಷಾದದ ಸಂಗತಿ. ತಾರೆಯು ತನ್ನ ಮನಸ್ಸಿನಲ್ಲಿರುವುದನ್ನು ಯಾರೊಬ್ಬರ ಮುಂದೆಯೂ ಹೇಳುವುದಿಲ್ಲ. ಜೊತೆಗೆ ಯಾರೊಬ್ಬರೂ ತಾರೆಯ ಹೃದಯಾಂತರಾಳವನ್ನು ಒಳಹೊಕ್ಕು ನೋಡುವುದೇ ಇಲ್ಲ.

ಮದುವೆಯಾದ ವದು-ವರರಿಗೆ ಹೆಸರನ್ನು ಕೇಳುವುದು ಸಂಪ್ರದಾಯ. 'ಜೋಡೆಳಿ ಮುತ್ತ ಜೋಮಾಲಿ ಸರಾ, ಎಂಟೆಳಿ ಮುತ್ತಾ ಕಂಠಿ ಸರಾ, ಒಂಟಿ ಮ್ಯಾಲ ಕೂತ ಪೋಣಸತಾರ, ಆನಿ ಮ್ಯಾಲ ಕೂತ ದಾನಾ ಮಾಡ್ತಾರ, ಪಲ್ಲಕ್ಕ್ಯಾಗ ಕೂತ ಪಗಡಿ ಆಡ್ತಾರ, ಮಂಚದ ಮ್ಯಾಲ ಕೂತ ಮಗನ ಆಡಸತಾರ, ಅಕ್ಕಿ-ಚೀಲಮ್ಯಾಲ ಕೂತ ಲೆಕ್ಕಾ ಮಾಡತಾರ, ಲೆಕ್ಕ ಬರೂಲ್ಲ ಆಗಾನಾ ಅಕ್ಕನ ಕರದ ಕೇಳತಾರ, ಭ...ರ....ಮ...ಗೊಂಡ...!'[೩] ಎಂದು ತಾರೆ ಗಂಡನ ಹೆಸರನ್ನು ಹೇಳುತ್ತಾಳೆ. ಅನಂತನಿಗೂ ಬಾಲ್ಯದಲ್ಲಿಯೇ ಅವರ ಸೋದರ ಮಾವನ ಮಗಳೊಂದಿಗೆ ಲಗ್ನವಾಗಿತ್ತು. ಅನಂತನನ್ನು ಹೆಂಡತಿಯ ಹೆಸರು ಹೇಳು ಎಂದು ಬಲವಂತ ಮಾಡಿದಾಗ ತನಗೆ ಗೊತ್ತಿಲ್ಲವೆಂದು, 'ಕರಿ ಪೋರಿನಾ.....ನಾ... ಮದಿವೇ ಆಗಿಲ್ಲ ಮೊದಲ'[೪] ಎಂದು ಹೇಳುತ್ತ ಓಡಿ ಹೋಗುತ್ತಾನೆ. ಇಂದಿರೆ ನೋಡಲು ತಾರೆಯಂತೆ ಲಕ್ಷಣವಾಗಿರಲಿಲ್ಲ. ಕಪ್ಪಾಗಿದ್ದುದರಿಂದ ಆಕೆಯನ್ನು ಹೆಂಡತಿಯೆಂದು ಆತ ಒಪ್ಪಿಕೊಳ್ಳುವುದೇ ಇಲ್ಲ. ಈ ಮಾತು ಸುಂದರವ್ವನಿಗೆ ಮುಂಬರುವ ಆತಂಕವನ್ನು

ಸೂಚಿಸಿ ಎದೆ ಮೇಲೆ ಬರೆ ಎಳೆದಂತಾಗುತ್ತದೆ. ಇಂದಿರೆ ಹೊಸದಾಗಿ ಮನೆಗೆ ಬಂದಾಗ ಅನಂತ ಮತ್ತು ಸೊಸೆ ಇಂದಿರೆಯನ್ನು ಸಮೀಪ ತರುವ ಪ್ರಯತ್ನ ಮಾಡುತ್ತಾ ಇರುವಳು. ತಾರೆಯನ್ನು ಪ್ರೀತಿಸುತ್ತೇನೆಂದು ಇಂದಿರೆಗೆ ಹೇಳಲಿಕ್ಕಾಗದೇ ಅನಂತ ವ್ಯಥೆ ಪಡುವನು. ಹೆಂಡತಿಯನ್ನು ಆತ ದೂರವಿಟ್ಟರೂ ಆಕೆ ಆತನ ಸಮೀಪಕ್ಕೆ ಬರುವಳು. ಏಕೆಂದರೆ ಅದೊಂದು ಸಮಾಜದ ನಿರ್ಬಂಧವಾಗಿದೆ. ಅದನ್ನು ದಾಟಿ ಬರಲಿಕ್ಕಾಗದು ಎಂಬುದಕ್ಕೆ ಇಂದಿರೆಯೇ ಸಾಕ್ಷಿ. ಇಂದಿರೆಯ ತಾಯಿ ಮತ್ತು ಸುಂದರವ್ವ ಅನಂತನನ್ನು ಚೆನ್ನಾಗಿ ನೋಡಿಕೊಂಡು ಆತನ ಹತ್ತಿರ ಹೋಗುವಂತೆ ಬುದ್ಧಿ ಹೇಳುತ್ತಾರೆ.

ಮೈನೆರೆದ ನಂತರ ಮದುವೆಯಾದ ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವುದು ಸಂಪ್ರದಾಯ. ಪದ್ಧತಿಯಂತೆ ಹೂವಣ್ಣ ತಾರೆಯನ್ನು ಕರೆಯಲು ಬರುವನು. ಹೆಣ್ಣು ಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ತಾಯಿ ಹಾಗೂ ಅಕ್ಕಪಕ್ಕದವರು ಹೇಳುವ ಬುದ್ಧಿ ಮಾತುಗಳನ್ನು ಅಣ್ಣಾರಾಯರು ಹೀಗೆ ಚಿತ್ರಿಸುತ್ತಾರೆ. ಸೊಸೆಯಾದವಳು ಮನೆಯಲ್ಲಿ ಎಲ್ಲರಿಗಿಂತ ಮೊದಲೆದ್ದು ಜೋಳ ಬೀಸಬೇಕು, ಅಡುಗೆ ಮಾಡಿಕೊಂಡು ಮನೆಗೆಲಸ ಮುಗಿದ ತಕ್ಷಣ ಗಂಡ ಮತ್ತು ಮಾವನಿಗೆ ಬುತ್ತಿ ತೆಗೆದುಕೊಂಡು ಹೊಲಕ್ಕೆ ಹೋಗಬೇಕು. ಅತ್ತೆ-ಮಾವರಿಗೆ ಪ್ರತ್ಯುತ್ತರ ಕೊಡಬಾರದು. ಅತ್ತೆ ಹಿಂಸೆ ಕೊಟ್ಟರೂ ತವರು ಮನೆಯವರಿಗೆ ಅದನ್ನು ಹೇಳಿ ಸಂಬಂಧಗಳನ್ನು ಕೆಡಿಸಬಾರದು. ಅತ್ತೆ-ಮಾವರ ಯೋಗಕ್ಷೇಮದೊಂದಿಗೆ ಅವರ ಇಷ್ಟ-ಕಷ್ಟಗಳನ್ನು ಸೊಸೆ ಅರಿಯಬೇಕು. ಅತ್ತೆ-ಮಾವರ ಅನುಮತಿ ಪಡೆಯಲಾರದೆ ತವರು ಮನೆಗೆ ಬರುವ ಹಾಗಿಲ್ಲ. ಮುಂತಾದ ಮಾತುಗಳನ್ನು ಹೇಳಿ ಆ ಹೆಣ್ಣು ಮಗಳ ತಲೆಯನ್ನು ಕೆಡಿಸುತ್ತಾರೆ. ಆಗ ಆ ಹೆಣ್ಣು ಮಗಳು ಅತ್ತೆಯ ಮನೆಯನ್ನು ದೆವ್ವದ ಮನೆಯೆಂದು ಭಾವಿಸಿಕೊಳ್ಳುತ್ತಾಳೆ ಎಂಬುದನ್ನು ತಾರೆಯ ಪಾತ್ರದ ಮೂಲಕ ಅಣ್ಣಾರಾಯರು ಚಿತ್ರಿಸಿದ್ದಾರೆ. ತಂದೆ-ತಾಯಿಯನ್ನು ಅಗಲಿ ಬದುಕುವುದು ಕಷ್ಟವೆನಿಸಿ ತಾರಕ್ಕ ಅಳುತ್ತಿದ್ದಳು. ಹೂವಣ್ಣ 'ಅಲ್ಲ್ಯಾನ ನಿನ್ನ ಸೂಲಕ ಏರಸೋದಕ ಒಯ್ಯುದಲ್ಲ ಬಾ'[೫] ಎಂದು ಒರಟಾಗಿ ನುಡಿದ. ಹೂವಣ್ಣನ ಈ ನುಡಿಗಳು ಮುಂದಾಗುವ ಅನಾಹುತಗಳನ್ನು ಸೂಚಿಸಿದವು. ಈ ಮಾತುಗಳೇ ಮುಂದೆ ಸತ್ಯವಾಗಿ ಪರಿಣಮಿಸಿ ತಾರೆ ಸೂಲಕ್ಕೇರುವುದಕ್ಕಿಂತ ಹೆಚ್ಚು ದುಃಖ ಪಡುತ್ತಾಳೆ. ಶುಭ ಸಂದರ್ಭದಲ್ಲಿ ಆತ ನುಡಿದ ಮಾತುಗಳು ಅಶುಭವೆನಿಸುವವು. ಸೂಲಕ್ಕೇರುವವರು ಒಮ್ಮೇ ಸಾಯುವರು ಆದರೆ ತಾರೆ ಜೀವನದುದ್ದಕ್ಕೂ ಕೊರಗುತ್ತ ಬದುಕಿನ ಕಹಿ ಉಂಡು ಮರಣ ಹೊಂದುವಳು.

ತಾರಕ್ಕನದು ಆಟವಾಡುವ ವಯಸ್ಸಾದರೂ ಆಕೆ ಬಾಲಗೃಹಿಣಿ. ಅತ್ತೆ ಮನೆಗೆ ಬಂದ ತಾರಕ್ಕನಿಗೆ ಅಕ್ಕಾತಾಯಿಯ ಆಟದ ಸಾಮಾನುಗಳನ್ನು ನೋಡಿ ಆಟವಾಡವ ಆಸೆಯಾಗುತ್ತದೆ. ಆದರೆ ಚಿಮ್ಮವ್ವ ಅಡುಗೆ ಮಾಡಲು ಆಗ್ರಹಿಸಿದ್ದರಿಂದ ತನ್ನೆಲ್ಲ ಭಾವನೆಗಳನ್ನು ಮರೆಯಬೇಕಾಗುತ್ತದೆ. ಬಾಲ್ಯದ ಆಟೋಟಗಳಿಂದ ತಾರೆ ವಂಚಿತಳಾಗುತ್ತಾಳೆ. ಅತ್ತೆ

ಸೊಸೆಯನ್ನು ನೋಡುವ ದೃಷ್ಟಿಕೋನವೇ ಬೇರೆಯಾಗಿರುತ್ತದೆ. ಸೊಸೆಯನ್ನು ಆಳಿನಂತೆ, ದಾಸಿಯಂತೆ ನಡೆಯಿಸಿಕೊಳ್ಳುವ ಅತ್ತೆಯ ಮನೋಭಾವನೆಯನ್ನು ಅಣ್ಣಾರಾಯರು ವ್ಯಕ್ತಪಡಿಸಿದ್ದಾರೆ. ತಾನು ಆ ಮನೆಯ ಸೊಸೆಯಾಗಿದ್ದರಿಂದ ತನ್ನೆಲ್ಲ ಬಾಲ್ಯದ ಆಸೆಗಳನ್ನು ಮುದುರಿಸಿಕೊಂಡು ಅಡುಗೆ ಮನೆಗೆ ತೆರಳಬೇಕಾಗುವುದು. ಚಿಕ್ಕ ವಯಸ್ಸಿನಲ್ಲಿ ಹೊರಲಾರದ ಜವಾಬ್ದಾರಿಯನ್ನು ಹೊತ್ತು ತಾರಾ ಸಾಗಬೇಕಾಗುತ್ತದೆ.

ಚಿಮ್ಮವ್ವ ವಾಚಾಳಿ. ಒಡಹುಟ್ಟಿದ ತಮ್ಮನ ಮಗಳನ್ನೇ ಸೊಸೆಯಾಗಿ ತಂದುಕೊಂಡು ಆಸ್ತಿಯ ಆಸೆಗಾಗಿ, ಕ್ಷುಲ್ಲಕ ಕಾರಣಗಳಿಗಾಗಿ ತಾರಾಳನ್ನು ಸರಿಯಾಗಿ ನೋಡಿಕೊಳ್ಳದೇ ಅವಳ ಬಾಳನ್ನೇ ಹಾಳು ಮಾಡುತ್ತಾಳೆ. ಮದುವೆಗೆ ಮೊದಲೇ ರತ್ನವ್ವ ಗಂಡನಿಗೆ 'ನನ್ನ ಒಬ್ಬಾಕೆ ಮಗಳ, ನಿನ್ನ ತಂಗಿ ಅಂತ ಸಾಗರಬಿದ್ದ ಕೊಡತ್ಯಾನಂತೀ, ನಾಳಿ ನನ್ನ ಮಗಳಿಗೆ ಸುಖಾ ಆಗದಿರ ನೋಡ..... ಊರಾಗಿನ ಊರಾಗ ನೆರಮನಿ ಇದ್ದಾಂಗ ಏತಿ, ದಿನಾ ಹರೀವತ್ತ ಎದ್ದ ಪೋರಿ ಅಳ್ತ ಬಂದು ನಿಂತಳು ಅಂದ್ರ ನನ್ನ ಕೈಲೆ ಆಗೋದಿಲ್ಲ. ಪೋರಿ ಒಂದ ಚಲ್ಲೀತು, ಉಕ್ಕಸೀತು ಅಂದರ ತಾಳಕೊಂಡ ಹೋಗಾಕಿಬೇಕ... ಮೊದಲs ಚಿಮ್ಮವ್ವ ಹರಕ ಹೆಂಗಸ. ನಿನ್ನ ತಂಗಿ ಅಂತಾ ನಾ ಮುಚ್ಚಿ ಇಡೂದುಲ್ಲ...'[೬] ಎಂದು ಹೇಳಿದರೂ ಹೆಂಡತಿಗೆ ಸಮಜಾಯಿಸಿ ಹೇಳಿ ಮಗಳನ್ನು ಭರಮನಿಗೆ ಧಾರೆಯೆರೆದು ಕೊಡುತ್ತಾನೆ. ಮಕರದ ಮಂಟಪದಲ್ಲಿ ಪ್ರಾರಂಭವಾದ ಚಿಮ್ಮವ್ವನ ದ್ವೇಷ, ಸಿಟ್ಟು, ಅತೃಪ್ತಿ ತಾರಾನನ್ನು ಬದುಕಿನ ಸುಖದಿಂದಲೇ ವಂಚಿಸುತ್ತದೆ. ಸೊಂಪಾಗಿ ಸುಂದರವಾಗಿ ಬೆಳೆದ ತಾರೆಗೆ ತನ್ನ ಮಗ ಇಜ್ಜೋಡು ಎಂದು ಅರಿತು, ಅತ್ತಿಗೆಯ ಕೂಡ ಊಟ ಮಾಡಬಾರದೆಂದು, ಉಂಡರೆ ಕಾಲದೂಳಿಯಾಗಿ ಹೊಟ್ಟೆ ಕೆಡುವುದೆಂದು ಅಕ್ಕತಾಯಿಗೆ ಹೇಳುವಳು.

ತಾರಾ ಸುಖವಾಗಿರಬೇಕಾದರೆ ಮಲ್ಲ ತನ್ನ ಆಸ್ತಿಯನ್ನು ಚಿಮ್ಮವ್ವನ ಹೆಸರಿಗೆ ಮಾಡಬೇಕು. ಮಾನವ ಸಂಬಂಧಗಳ ಬೆಲೆಯನ್ನೇ ಅರಿಯದ ಚಿಮ್ಮವ್ವ ಆಸ್ತಿ ದೊರೆತ ಮೇಲೆ ಮಗಳಾದ ತಾರೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆಂಬ ವಿಶ್ವಾಸ ತಾರೆಯ ತಂದೆ-ತಾಯಿಗಳಿಗೆ ಇರಲಿಲ್ಲ. ಆಸ್ತಿಯ ಕುರಿತಾದ ವಿಷಯಕ್ಕೆ ಮಲ್ಲ ಮತ್ತು ರತ್ನವ್ವ ಎಂದೂ ಒಪ್ಪುವುದಿಲ್ಲ. ಆಸ್ತಿ ಇರದಿದ್ದರೆ ಮುಪ್ಪಿನ ಸಂದರ್ಭದಲ್ಲಿ ಅನಾಥ ಪ್ರಜ್ಞೆ ಕಾಡುತ್ತದೆ. ಬದುಕಿಗೆ ಏನಾದರೂ ಆಧಾರ ಇರಲೇಬೇಕು. ಹೀಗಿದ್ದಾಗ ಮಾತ್ರ ನಮ್ಮ ಜೀವನ ಸರಳವಾಗಿ ಕೊನೆಗೊಳ್ಳುತ್ತದೆ ಎಂದು ಆಸ್ತಿಯನ್ನು ಇಟ್ಟುಕೊಳ್ಳವರು. ಆಸ್ತಿಗೋಸ್ಕರವಾಗಿ ಯಾರಾದರೂ ನೋಡಬಹುದು ಎಂಬ ನಂಬಿಕೆ. ಸಂಬಂಧಗಳು ಮೂಲ ಸ್ವರೂಪದಲ್ಲಿ ಉಳಿದಿಲ್ಲವೆಂಬುದು ಅವರಿಗೆ ಗೊತ್ತು. ತಾರೆ ಸಹಜವಾಗಿ ತಂದೆ-ತಾಯಿಯರನ್ನು ನೋಡಬಹುದಿತ್ತು. ಆದರೆ ಮಗಳು ಇನ್ನೊಬ್ಬರ ಆದೀನದಲ್ಲಿರುವಾಗ ತಾವು ಅದನ್ನು ಆಪೇಕ್ಷಿಸುವದು ತಪ್ಪು. ಮುಪ್ಪಿನಾವಸ್ಥೆಯಲ್ಲಿ ಆಸ್ತಿ ತಮ್ಮ ಹತ್ತಿರವೇ ಇದ್ದರೆ ಯಾರಾದರೂ

ತಮ್ಮ ಉಪಚಾರ ಮಾಡಬಹುದು ಎಂಬ ಅವರ ಒಳತುಡಿತಗಳನ್ನು, ಸಂಬಂಧಗಳ ವಿಸ್ಫೋಟಗಳನ್ನು, ಅದರ ಪರಿಣಾಮಗಳನ್ನು ನಿಸರ್ಗದಲ್ಲಿ ಕಾಣುತ್ತೇವೆ.

ರತ್ನಾನ ಗಂಡ ಮಲ್ಲ ಆಸ್ತಿ ಬಗ್ಗೆ ರತ್ನಾನಷ್ಟು ಎಂದೂ ಯೋಚಿಸಿದವನಲ್ಲ. ಈ ವಿಷಯದಲ್ಲಿ ಮಧ್ಯಸ್ತಿಕೆ ರತ್ನಾನದ್ದೇ. ಚಿಮ್ಮವ್ವ ಮತ್ತು ರತ್ನಾನನ್ನು ಗಮನಿಸಿದರೆ ಪುರುಷ ಕೇಂದ್ರಿತ ಆಲೋಚನೆಗಳಿಗಿಂತ ಸ್ತ್ರೀ ಕೇಂದ್ರಿತ ಆಲೋಚನೆಗಳೇ ಹೆಚ್ಚಾಗಿರುವವು. ಈ ಎರಡೂ ಕುಟುಂಬಗಳಲ್ಲಿ ಹೂವಣ್ಣ ಮತ್ತು ಮಲ್ಲ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ. ಈ ಎರಡೂ ಪಾತ್ರಗಳಿಗೆ ಸ್ವಂತ ಆಲೋಚನಾ ಶಕ್ತಿಯೇ ಇಲ್ಲ. ಮಧ್ಯಮ ವರ್ಗದ ಜೈನ ಕುಟುಂಬಗಳು ಸ್ತ್ರೀ ಪ್ರಧಾನ ಕುಟುಂಬಗಳಂತೆ ತೋರುತ್ತವೆ.

ಚಿಮ್ಮವ್ವ ಮಗಸೊಸೆಯ ಮನಸ್ಸನ್ನೇ ಕೊನೆಯವರೆಗೆ ಅರ್ಥಮಾಡಿಕೊಳ್ಳುವುದಿಲ್ಲ. ಅವರಿಬ್ಬರ ಹಾಸಿಗೆಗಳು ಬೇರೆ ಬೇರೆಯಾಗಿರುವಾಗ ದಾಂಪತ್ಯ ಸುಖ ಅವರ ಪಾಲಿಗೆ ಕನಸಿನ ಮಾತಾಗಿತ್ತು. ಅವರಿಬ್ಬರಿಗೆ ಕಾವಲಾಗಿರುತ್ತಿದ್ದಳು. ತನ್ನ ಪಕ್ಕದಲ್ಲಿಯೇ ಸೊಸೆಯನ್ನು ಮಲಗಿಸಿಕೊಳ್ಳುತ್ತಿದ್ದಳು. ಭರಮನಿಗೆ ತಾಯಿಯ ತಪ್ಪು ಕಂಡು ಬಂದರೂ ಪ್ರಶ್ನಿಸಿದ ಮಂದ ಬುದ್ಧಿಯವನು. ತಾಯಿಯ ಅಂಕಿತದಲ್ಲಿದ್ದರೂ ತಾರೆಯ ಕಡೆಗೆ ಆಗಾಗ ಮನಸ್ಸು ಹರಿದಾಡುತ್ತಲೇ ಇತ್ತು. ಭರಮನ ತೋಟದಲ್ಲಿ ಒಳ್ಳೆಯ ಪೇರಲಬನವೊಂದು ಇತ್ತು. ಸಾಕಷ್ಟು ಹಣ್ಣುಗಳಾಗುತ್ತಿದ್ದರಿಂದ ಚಿಮ್ಮವ್ವ ವಾರಕ್ಕೆ ಒಂದು ಸಾರಿ ಮಾಲಗಾರರಿಗೆ ಹಣ್ಣುಗಳನ್ನು ಮಾರುತ್ತಿದ್ದಳು. ತೋಟದಲ್ಲಿ ಆಳುಗಳು ಸಾಕಷ್ಟು ಪೇರಲಹಣ್ಣುಗಳನ್ನು ತಿಂದು ತೇಲುತ್ತಿದ್ದರೂ ಸೊಸೆಯಾದ ತಾರೆಗೆ ಆ ಹಣ್ಣುಗಳನ್ನು ಕಣ್ಣೆತ್ತಿ ನೋಡುವ ಸ್ವಾತಂತ್ರ್ಯವೂ ಇರಲಿಲ್ಲ. ಆಳುಗಳಿಗೆ ಇದ್ದಷ್ಟು ಬೆಲೆ ತಾರೆಗೆ ಇರಲಿಲ್ಲ. ಅತ್ತೆಗೆ ಮೋಸ ಮಾಡಿ, ಕಣ್ಣು ತಪ್ಪಿಸಿ ಹಣ್ಣು ತಿನ್ನುವವಳಲ್ಲ ತಾರೆ. ಭರಮನಿಗೆ ತಾಯಿಯ ವರ್ತನೆ ನೋಡಿ ಸಿಟ್ಟು ಬಂದರೂ ತಾಯಿಯನ್ನು ನೋಡಿ ಬೆಣ್ಣೆಯಂತೆ ಕರಗಿ ಹೋಗುತ್ತಿದ್ದ. ಹೆಂಡತಿಗಾಗಿ ಪ್ರೀತಿಯಿಂದ ಪೇರಲಕಾಯಿಗಳನ್ನು ಕೊಡಲು ಪ್ರಯತ್ನಿಸಿ ಚಿಮ್ಮವ್ವನ ಕೈಗೆ ಸಿಕ್ಕು ಬಿದ್ದು ಹಿಗ್ಗಾಮುಗ್ಗಾ ಬೈಯಿಸಿಕೊಳ್ಳುತ್ತಾನೆ. ಆದರೆ ಚಿಮ್ಮವ್ವನನ್ನು ಪ್ರತಿಭಟಿಸುವ ಶಕ್ತಿ ಭರಮನಿಗೆ ಇರಲಿಲ್ಲ. ತಾರೆಯೊಂದಿಗೆ ಸುಂದರ ಜೀವನದ ಕನಸು ಕಾಣಲು ಪ್ರಾರಂಭಿಸುತ್ತಾನೆ. ತಾಯಿ ಚಿಮ್ಮವ್ವನ ಜೊತೆಗಿರುವವರೆಗೆ ತಾನು ಹೆಂಡತಿಯೊಂದಿಗೆ ಸುಖವಾಗಿರಲು ಸಾಧ್ಯವಿಲ್ಲ ಎಂದು ಬೇರೆ ಹೋಗಬೇಕೆಂದು ತೀರ್ಮಾನ ಮಾಡುವನು. ತಾಯಿಯೊಂದಿಗೆ ಹೊಂದಿಕೊಂಡು ಹೋದರೆ ಒಳ್ಳೆಯದೆಂಬ ಬುದ್ಧಿವಾದವನ್ನು ರತ್ನವ್ವ ಭರಮನಿಗೆ ಹೇಳುವಳು. ಚಿಮ್ಮವ್ವನಿಂದ ಮಗನನ್ನು ದೂರ ಮಾಡುವದು ಧರ್ಮಕ್ಕೆ ವಿರುದ್ಧವಾದದ್ದು. ಆ ಪಾಪ ತಮಗೆ ತಟ್ಟಕೂಡದೆಂದು ಅಳಿಯನಿಗೆ ಆಶ್ರಯ ಕೊಡುವುದಿಲ್ಲ. ತಾರಕ್ಕ ಭರಮನ ಮಾತು ಕೇಳಿ ಬೇರೆಯಾದರೆ ಇದ್ದೂರಲ್ಲಿ ಅತ್ತೆ ಸಂಸಾರ ಸಾಗಿಸಲು ಬಿಡುವುದಿಲ್ಲ. ಅದಕ್ಕೆ ಬೇರೆ ಊರಿಗೆ ಹೋಗಿ ಸಂಸಾರ ನಡೆಸೋಣ ಎನ್ನುತ್ತಾಳೆ. ಆದರೆ ಬೇರೆ ಊರಿಗೆ ಹೋದರೆ ತಾಯಿ ಹೊಲಮನೆ ಏನನ್ನೂ ಕೊಡಲಾರಳು ಎಂದು

ತಿಳಿದು ಆ ಊರಲ್ಲೇ ಇರುವಂತೆ ತೀರ್ಮಾನಿಸುತ್ತಾನೆ. ಆದರೆ ಚಿಮ್ಮವ್ವ ಭರಮನ ಯೋಜನೆಗಳನ್ನು ಬುಡಮೇಲು ಮಾಡುತ್ತಾಳೆ. ಭರಮನ ಮಾತು ಕೇಳಿದ್ದಕ್ಕಾಗಿ ತಾರೆ ತಂದೆ-ತಾಯಿ ಮತ್ತು ಅತ್ತೆಯಿಂದ ಬೈಗುಳ ತಿಂದು ಅವಮಾನದಿಂದ ತಲೆ ತಗ್ಗಿಸುವಂತಾಗುತ್ತದೆ. ಇದನ್ನೆಲ್ಲ ಅನುಭವಿಸಿದ ತಾರೆ ಬದುಕುವ ಆಸೆಯನ್ನು ಕಳೆದುಕೊಂಡು ಹೊಳೆಗೆ ಹಾರಿ ಪ್ರಾಣ ಕಳೆದುಕೊಳ್ಳಬೇಕೆಂದು ಪ್ರಯತ್ನಿಸಿದಾಗ ಗೆಳತಿ ಸುಮತಿ ತಾರೆಗೆ ಮುಂದೆ ಒಳ್ಳೆಯ ದಿನಗಳು ಬರಬಹುದು ತಾಳ್ಮೆ ಇರಲಿ ಎಂದು ಧೈರ್ಯ ಕೊಡುತ್ತಾಳೆ.

ದ್ವೇಷಕ್ಕೆ ದ್ವೇಷ ಬೆಳೆಸಿ ಮಾತಿನ ಜಿದ್ದಿಗಾಗಿ ಚಿಮ್ಮವ್ವ ಮಗನಿಗೆ ಮತ್ತೊಂದು ಮದುವೆ ಮಾಡಿ ತನ್ನ ಹಟವನ್ನು ತೀರಿಸಿಕೊಳ್ಳುವಳು. ಚಿಮ್ಮವ್ವನ ಎಲ್ಲ ದುಷ್ಕೃತ್ಯಗಳಿಗೆ ಕೈ ಜೋಡಿಸುವವನು ಭರಮನ ಚಿಕ್ಕಪ್ಪ ಭೀಮಪ್ಪ. ಹಳೆಯ ಯಾವುದೋ ಒಂದು ದ್ವೇಷ ಸಾಧನೆಗಾಗಿ ಭರಮ ಮತ್ತು ಚಿಮ್ಮವ್ವನ ತಲೆ ಕೆಡಿಸುತ್ತಾನೆ. ಮಲ್ಲನ ಮೇಲಿನ ದ್ವೇಷಕ್ಕೆ ತಾರೆಯನ್ನು ಬಲಿಪಶು ಮಾಡುತ್ತಾನೆ. ತಾರೆಗಿಂತ ಒಳ್ಳೆಯ ಹುಡುಗಿಯನ್ನು ಹುಡುಕಿ ವರದಕ್ಷಿಣೆ, ಬಂಗಾರ ತೆಗೆದುಕೊಂಡು ಎರಡನೇ ಮದುವೆ ಮಾಡಿಸುತ್ತೇನೆ ಎಂದು ಅವರನ್ನು ಬುದ್ಧಿ ಭ್ರಷ್ಟರನ್ನಾಗಿಸುತ್ತಾನೆ. ಚಿಮ್ಮವ್ವ ಮಾಡುವ ಎಲ್ಲ ಪಾಪಕೃತ್ಯಗಳಲ್ಲಿ ಈ ಸಹಭಾಗಿತ ಸುಂದರವಾದ ಎರಡು ಕುಟುಂಬಗಳಲ್ಲಿ ಹುಳಿ ಹಿಂಡುವ ಕೆಲಸ ಭೀಮನದು. ಕೊನೆಗೆ ತಾನಂದುಕೊಂಡ ಹಾಗೆ ಭರಮನಿಗೆ ಎರಡನೇ ಮದುವೆ ಮಾಡಿಯೇ ಬಿಡುತ್ತಾನೆ. ಇಂಥವರಿಂದ ಅದೆಷ್ಟೋ ಹೆಣ್ಣು ಮಕ್ಕಳ ಜೀವನ ಬೆಂಕಿಗೆ ಆಹುತಿಯಾದುದರ ಚಿತ್ರಣ ಅಣ್ಣಾರಾಯರು ನೀಡುತ್ತಾರೆ. ರತ್ನವ್ವ ತನ್ನ ಮಗಳ ದುರ್ದಶೆಯನ್ನು ಕಂಡು ಹಗಲು ಕಂಡ ಬಾವಿಯಲ್ಲಿ ರಾತ್ರಿ ಬಿದ್ದಂತಾಯಿತು ಎಂದು ಒದ್ದಾಡುವಳು. ಭರಮನಿಂದ ವಿಘಟನೆ ಹೊಂದಿದ ಮೇಲೆ ತಾರಕ್ಕ ಐನಾಪುರದಲ್ಲಿ ನೆಲೆಸಿದ್ದಳು. ಅನಂತನ ಬಗ್ಗೆ ತಾರೆಗೆ ಮತ್ತೆ ಸೆಳೆತ ಹೆಚ್ಚಾದರೂ, ಅನಂತ ತನ್ನಿಂದಾದ ತಪ್ಪನ್ನು ತಿದ್ದಿಕೊಳ್ಳಲು ಪ್ರಯತ್ನಿಸುವನು. ತಾರೆಯಂತೂ ಅನಂತನೇ ತನಗೆ ಗತಿ, ತಾನಿರುವುದು ಗಂಡನ ಮನೆಯಲ್ಲೇ ಎಂದು ಬಲವಾಗಿ ನಂಬುವಳು. ಆದರೆ ಅನಂತ ಸಮಾಜಕ್ಕೆ ಹೆದರುವ ತಾರೆ ಚೆನ್ನಾಗಿರಬೇಕು, ಅದನ್ನು ತಾನು ನೋಡಿ ಸಂತೋಷ ಪಡಬೇಕೆಂದು ಸದಾ ಬಯಸುತ್ತಿದ್ದನು.

ತಾರಾನ ಒಪ್ಪಿಗೆ ಕೇಳದೆಯೇ ಆಕೆಯ ಉಡಿಕೆಯನ್ನು ಗಟ್ಟಿಮಾಡಿಕೊಂಡು ಬಂದಾಗ ಅನಂತ ತಾರೆಯರ ಹೃದಯದ ಬಡಿತ ಸ್ಥಗಿತವಾಯಿತು. ತನ್ನ ಮದುವೆಯಾಗಿರದಿದ್ದರೆ ತಾರೆಯನ್ನೇ ತಾನು ಮದುವೆಯಾಗಬಹುದಿತ್ತಿಲ್ಲವೆ? ಸುಖವಾಗಿರಬಹುದಿತ್ತಲ್ಲವೇ? ಎಂದು ಯೋಚಿಸುತ್ತಾನೆ. ತಾರೆ ಕೊನೆಯ ಗಳಿಗೆಯಲ್ಲಿ ಧೈರ್ಯ ಮಾಡಿ –

'ಈಗ ನನ್ನ ಒಂದ ಮಾತ ಕೇಳತಿಯಾನಾ?'
'ಯಾನ ಮಾಡಲಿ?' ಆತ ಕೇಳುತ್ತಾನೆ
'ಇದೊಂದ ರಾತ್ರಿ ಹೋದರ ತೀರಿತು ನನಗಾ ನಿನಗಾ
ಯಾನೂ ಸಂಬಂಧ ಇಲ್ಲ.
ಈಗs ಯಾನರ ಮಾಡೋಣು'
'ಯಾನ ಮಾಡೋದಾ?'
'ಇಬ್ಬರೂ ಇಲ್ಲಿಂದ ಈಗ ಹೋಗುಣು ನಡಿ'
'ಹೀಂಗ?'
'ಅದಕ್ಯಾನ ಆಗ್ತೇತಿ, ನನ್ನ ಮೈಮ್ಯಾಲ ದ್ಯಾಗೀನಿ ಇದವು ಮುರಿಸಿ ತಿನ್ನೋದಾ'
'ಹಾಂಗಾರ ಹೋಗೂಣು ನಡಿ ! ಏಳ !'[೭]

ಎಂದು ಹೇಳಿದರೂ ಅನಂತ ಹಿಂಜರಿಯುವ. ಆಕೆಯು ಮಾನಸಿಕ ದೌರ್ಬಲ್ಯಕ್ಕೆ ಒಳಗಾಗಿದ್ದಾಳೆ. ಈಗಾಗಲೇ ನಾವು ಮಾಡಿದ ತಪ್ಪನ್ನು ತಿದ್ದಿಕೊಳ್ಳಲು ಇದೊಂದು ಅವಕಾಶವಿದೆ. ಇನ್ನೊಂದು ತಪ್ಪನ್ನು ಮಾಡಬಾರದೆಂದು ನಿರ್ಣಯಿಸುತ್ತಾನೆ. ಆಕೆಯೊಂದಿಗೆ ಓಡಿ ಹೋಗಿ ಜೀವನವನ್ನು ಎದುರಿಸುವ ಧೈರ್ಯ ಆತನಲ್ಲಿಲ್ಲ. ಪುರುಷ ಕೇಂದ್ರಿತ ವಿಚಾರಗಳು ಅನಂತನಲ್ಲಿದ್ದರೂ ಸಮಾಜವನ್ನು ಎದುರಿಸುವ ಧೈರ್ಯ ಆತನಿಗಿಲ್ಲ. ಕೌಟುಂಬಿಕ ಬಂಧನಗಳಿಂದ ಮುಕ್ತನಾಗುವದನ್ನು ಆತ ಇಚ್ಛಿಸುತ್ತಿರಲಿಲ್ಲ. ಸ್ವತಂತ್ರವಾಗಿ ತನ್ನ ಜೀವನವನ್ನು ಕಟ್ಟಿಕೊಳ್ಳುವ ಸಾಮರ್ಥ್ಯ, ಶಕ್ತಿ ಅನಂತನಲ್ಲಿರಲಿಲ್ಲ.

ಮಧ್ಯಮ ವರ್ಗದ ಒಂದು ಜೈನ ಕುಟುಂಬದಲ್ಲಿ ತಂದೆ ತಾಯಿ ಮಕ್ಕಳಿಗೆ ಸ್ವತಂತ್ರವಾಗಿ ಜೀವನ ರೂಪಿಸಿಕೊಳ್ಳುವ ಅವಕಾಶಗಳನ್ನೇ ನೀಡುತ್ತಿರಲಿಲ್ಲ. ಸ್ವತಂತ್ರವಾಗಿ ಆಲೋಚಿಸಿ ತಮ್ಮ ಜೀವನದ ನಿರ್ಧಾರಗಳನ್ನು ತಾವೇ ತೆಗೆದುಕೊಳ್ಳುವುದು ಸಾಧ್ಯವಾಗದ ಪರಿಸ್ಥಿತಿ, ಒತ್ತಡಕ್ಕೆ ಸಿಲುಕಿ ಅದೆಷ್ಟೋ ಮಕ್ಕಳ ಜೀವನ ಹಾಳಾಗುವುದನ್ನು ಅಣ್ಣಾರಾಯರು ಮನೋಜ್ಞವಾಗಿ ಚಿತ್ರಿಸುತ್ತಾರೆ.

ಸೃಷ್ಟಿ ಎಂದರೆ ಹೆಣ್ಣು, ಪುರುಷ ಎಂದರೆ ಗಂಡು ಸೃಷ್ಟಿಯದು ಬಿಚ್ಚು ಮನಸ್ಸು. ಸೃಷ್ಟಿಯನ್ನು ತನ್ನ ಆದೀನದಲ್ಲಿಟ್ಟುಕೊಳ್ಳಬೇಕೆಂದು ಪುರುಷನ ಪ್ರಯತ್ನ. ಆದ್ದರಿಂದ ಸೃಷ್ಟಿಗೆ ನಿಯಮ, ನಿಬಂಧನೆಗಳನ್ನು ಹಾಕುತ್ತ ಹೋಗುತ್ತಾನೆ. ಪುರುಷನ ಆಲೋಚನೆಯೆಂದರೆ ಸೃಷ್ಟಿಯೇ ತನ್ನ ಕಡೆಗೆ ಬರಬೇಕು ಎಂಬ ಈ ಆಲೋಚನೆಗಳು ಅನಂತ ತಾರೆಯರಲ್ಲಿ ಕಂಡು ಬರುತ್ತವೆ. ಅನಂತನನ್ನು ಹುಡುಕಿಕೊಂಡು ತಾರೆಯೇ ಬರಬೇಕಾಗುವದು. ಅನಂತನಿಗೆ ಇದು ಅನೈತಿಕತೆ ಎಂಬ ಭಯ. ತಾರೆಗೆ ಅನೈತಿಕವೆಂಬ ಭಾವನೆ ಕಾಡುವುದಿಲ್ಲ. ಆಕೆಗೆ ಪ್ರೀತಿಯೇ ಮುಖ್ಯ. ತಾರೆ ಒಳಿತು-ಕೆಡಕು, ಸರಿ-ತಪ್ಪು ಇವುಗಳ ಬಗ್ಗೆ ಎಂದೂ ಯೋಚಿಸುತ್ತಿರಲಿಲ್ಲ. ಅನಂತನಿಗೆ ಸಮಾಜ, ಸಂಸ್ಕೃತಿ ಮುಖ್ಯ.

ಆದರೂ ಪ್ರೀತಿಯನ್ನು ನಿರಾಕರಿಸುವುದು ಆತನಿಂದ ಸಾಧ್ಯವಿಲ್ಲ. ಆತ ಎರಡು ದೋಣಿಗಳಲ್ಲಿ ಕಾಲಿಟ್ಟು ನದಿ ಪಾರು ಮಾಡಲು ಬಯಸುತ್ತಾನೆ. ಆದರೆ ಅದು ಅಸಾಧ್ಯ. ಈ ಎರಡೂ ಪಾತ್ರಗಳಲ್ಲಿ ಪ್ರೀತಿ ಮತ್ತು ಸಮಾಜದ ಸಂಘರ್ಷವಿರುವುದು ತೋರುತ್ತದೆ.

ಹೆಂಡತಿಯ ಆಸ್ತಿ ಸಿಗುವುದೆಂದು ಗೊತ್ತಾದ ಗಂಡ ಮೇಲಿಂದ ಮೇಲೆ ಹೆಂಡತಿಯನ್ನು ಕರೆದುಕೊಂಡು ತವರಿಗೆ ಹೋಗುವುದು. ಆಕೆಯ ತಾಯಿಯನ್ನು ಕರೆತರುವುದು, ಆದರಿಂದ ನೋಡಿಕೊಳ್ಳುವುದು, ಸಂದರ್ಭ ಬಂದಾಗ ಮಾವನ ಹೊಲಗದ್ದೆಗಳ ಕೃಷಿ ಕೆಲಸಗಳನ್ನು ಮಾಡುವುದು, ತಮ್ಮೂರಿನಿಂದಲೇ ಕೆಲಸಕ್ಕೆ ಆಳುಗಳನ್ನು ಕಳುಹಿಸಿ ಮಾವನ ಮನ ಒಲಿಸಿಕೊಳ್ಳುವುದು, ತನ್ನ ಮನೆ ಬೇರೆಯಲ್ಲ ಮಾವನಮನೆ ಮನೆ ಬೇರೆಯವಲ್ಲವೆಂದು ತೋರಿಸುವುದು. ಏಕೆಂದರೆ ತನ್ನತ್ತೆಯ ಮನಸ್ಸು ಆಕೆಯ ತವರು ಮನೆ ಕಡೆಗೆ ಹರಿದು ಆಸ್ತಿ ಕೈಜಾರಬಾರದೆಂದೂ ತನಗೇ ಸೇರಬೇಕೆಂಬ ದುರಾಸೆ.

ನಿಸರ್ಗದಲ್ಲಿ ಒಳ್ಳೆಯ ಸಂವೇದನೆಗಳನ್ನು ಕಾಣಬಹುದು. ತಾರಾ ಅಪ್ಪಣ್ಣನನ್ನು ಮದುವೆಯಾಗುವಳು. ಯಾವುದಕ್ಕೂ ಕೊರತೆಯಿರದ ಅಪ್ಪಣ್ಣನ ಮನೆಯಲ್ಲಿ ತಾರಾ ಅಸುಖಿ. ಆದರೆ ಯಾವುದನ್ನು ತೋರಗೊಡುವುದಿಲ್ಲ. ಅಪ್ಪಣ್ಣನ ಅನೈತಿಕ ಸಂಬಂಧವನ್ನು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಳ್ಳುವಳು. ಜೈನ ಧರ್ಮದಲ್ಲಿ ಧರ್ಮದಲ್ಲಿ ಪರಿತ್ಯಕ್ತತೆ ಎನ್ನುವುದು ಇಲ್ಲ. ಸೋನಾ ವೇಶ್ಯೆ, ಹರಿಜನಳಾದ ಈಕೆಯ ಮಗಳನ್ನು ತಾರಾ ವಾತ್ಸಲ್ಯದಿಂದ ಕರೆದುಕೊಳ್ಳುವಳು. ಸಾಮಾನ್ಯವಾಗಿ ಜೈನ ಕುಟುಂಬದಲ್ಲಿ ಕೆಳಜಾತಿಯವರನ್ನು ಮನೆಯೊಳಗೆ ಸೇರಿಸಿಕೊಳ್ಳುವುದಿಲ್ಲ. ಅಪ್ಪಣ್ಣ ಜೈನನಾಗಿದ್ದುದರಿಂದ ಜೈನ ಧರ್ಮದ ಚೌಕಟ್ಟಿನಲ್ಲಿ ನಿಂತು ನೋಡಿ ಸೋನಾನನ್ನು ಮನೆಗೆ ಸೇರಿಸಿಕೊಳ್ಳದೇ ದೂರವಿಟ್ಟು ಅನೈತಿಕ ಚಟುವಟಿಕೆಯಲ್ಲಿ ತೊಡಗಿದ್ದನು. ಆದರೆ ಸೋನಾಗೆ ತನ್ನ ಗಂಡನಿಂದ ಅನ್ಯಾಯವಾಗಿದೆ. ಆಕೆಗೆ ನ್ಯಾಯ ಸಿಗಬೇಕಾದರೆ ಆಕೆಯನ್ನು ಮನೆಗೆ ಕರೆ ತರುವುದು ಒಳ್ಳೆಯದು ಎಂದು ಅಪ್ಪಣ್ಣನಿಗೆ ತಾರೆ ತಿಳಿ ಹೇಳುವಳು. ಆದರೆ ಅಪ್ಪಣ್ಣ ತಾರೆಯ ಮಾತನ್ನು ಒಪ್ಪಿಕೊಳ್ಳಲಾರ. ಒಂದು ವೇಳೆ ಸೋನಾನನ್ನು ಮದುವೆಯಾಗಿದ್ದರೆ ಅದು ನೈತಿಕತೆ ಆಗುತ್ತಿತ್ತು. ಆದರೆ ತಾರಾ ಧರ್ಮದ ವಿರುದ್ಧವಾಗಿ ಕಾಣುತ್ತಾಳೆ. ಒಂದು ಕಡೆಗೆ ಜೈನ ಧರ್ಮದ ಸಂವೇದನೆ ಇನ್ನೊಂದು ಕಡೆಗೆ ತನಗೆ ಮಕ್ಕಳಿಲ್ಲವೆಂಬ ಕೊರಗನ್ನು ಹೋಗಲಾಡಿಸಲು ಸೂಳೆಯ ಮಗಳಾದ ಚಂಪೆಯನ್ನು ತಾಯಿಗಿಂತ ಹೆಚ್ಚಾಗಿ ನೋಡಿಕೊಳ್ಳುವಳು. ಮಾತೃತ್ವದ ಸುಖ ಅನುಭವಿಸುವಳು.

ತಮ್ಮ ವಂಶ ಉದ್ಧಾರವಾಗಬೇಕಾದರೆ ವಂಶೋದ್ಧಾರಕ ಮಗ ಬೇಕೇ ಬೇಕು

ಎಂಬ ತಪ್ಪು ಕಲ್ಪನೆ ಕಂಡು ಬರುವುದು. ತನ್ನ ಹೆಂಡತಿಯಿಂದ ಇದು ಸಾಧ್ಯವಾಗದೇ ಇದ್ದಾಗ ಬೇರೆ ಮದುವೆಯಾಗಬೇಕೆಂಬ ಯೋಚನೆ ಕಾಡುತ್ತದೆ. ಮತ್ತೊಂದು ಮದುವೆಯಾದರೆ ಹೆಂಡತಿಯ ಆಸ್ತಿ ಸಿಗದೆಂದು ಗೊತ್ತಾದಾಗ ಕಷ್ಟವಾದರೂ ಸರಿ ಆಕೆಯೊಂದಿಗೆ ಬಾಳುವ ನಿರ್ಧಾರ ಮಾಡುತ್ತಾನೆ. ಪುರುಷನ ಈ ಸ್ವಾರ್ಥಪರತೆಯನ್ನು ಅಪ್ಪಣ್ಣನ ಪಾತ್ರದ ಮೂಲಕ ಚಿತ್ರಿಸುತ್ತಾರೆ.

ಕೆಟ್ಟ ಚಟಗಳನ್ನು ಕಲಿತು ಆಸ್ತಿಯನ್ನೆಲ್ಲ ಮಾರಿಕೊಂಡ ಪುರುಷರನ್ನು ಮನೆಯವರು ಮತ್ತು ಸಮಾಜದವರು ನಿಂದಿಸುವುದು ನಿಸರ್ಗದಲ್ಲಿ ಕಂಡುಬರುತ್ತದೆ. ಅತ್ತೆಯ ಮನೆಯಲ್ಲಿ ಸೊಸೆಯ ಆರೋಗ್ಯ ಕೆಟ್ಟು ಹೋದರೆ ಆಕೆಯನ್ನು ಚಿಕಿತ್ಸೆಗಾಗಿ ತವರುಮನೆಗೆ ಕರೆದೊಯ್ಯುವ ಸನ್ನಿವೇಶಗಳು, ತವರು ಮನೆಯಲ್ಲಿ ಮಗಳು ಬಹಳಷ್ಟು ದಿನವಿದ್ದರೆ ಅಳಿಯ ಮತ್ತೊಂದು ಮದುವೆಯಾಗಬಹುದೆಂಬ ಭಯ. ಮಗಳ ಸುಖಕ್ಕಾಗಿ ತಮ್ಮ ಆಸ್ತಿಯನ್ನು ಅಳಿಯನ ಹೆಸರಿಗೆ ಮಾಡಿ ತಾವು ಬೀದಿಗಿಳಿಯುವ ಪ್ರಸಂಗಗಳನ್ನೆಲ್ಲ ಕಣ್ಣಿಗೆ ಕಟ್ಟುವಂತೆ ಅಣ್ಣಾರಾಯರು ಚಿತ್ರಿಸುತ್ತಾರೆ.

ರತ್ನವ್ವ ಆಸ್ತಿಯ ವಿಚಾರದಲ್ಲಿ ತನ್ನ ಮನೋಭಾವನೆಯನ್ನು ಬದಲಾಯಿಸಿಕೊಂಡಿದ್ದಳು. ತಮಗೆ ವಯಸ್ಸಾಗಿದೆ. ಮಗಳು ಇನ್ನೂ ಬಾಳಿ ಬದುಕಬೇಕಾದವಳು. ತಮಗಿಂತ ಮಗಳ ಬಾಳು ಮುಖ್ಯವೆಂದು ಅರಿತಳು. ಮಗಳ ಸಂಸಾರಕ್ಕೆ ಪೆಟ್ಟು ಬಿದ್ದಾಗ ತಮ್ಮ ಬದುಕನ್ನು ಗೌನವಾಗಿಡುತ್ತಾಳೆ. ಆಸ್ತಿಯ ಸಲುವಾಗಿ ತಾರಾನ ಮೊದಲನೇ ದಾಂಪತ್ಯವು ಹಾಳಾಗಿತ್ತು. ಅದೇ ಈ ದಾಂಪತ್ಯದಲ್ಲಿ ಮತ್ತೆ ಮರುಕಳಿಸಬಾರದೆಂದು ಆಸ್ತಿಯ ಮೇಲಿನ ವ್ಯಾಮೋಹ ತ್ಯಜಿಸಿದರು. ಆಸ್ತಿಯ ಮೇಲಿನ ವ್ಯಾಮೋಹಕ್ಕಾದರೂ ಅಪ್ಪಣ್ಣ ತಾರೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಎಂಬ ಭಾವನೆ ರತ್ನವ್ವನಲ್ಲಿ ಮೂಡುತ್ತದೆ. ತಾರೆಗೆ ಮಕ್ಕಳಾಗಲಿಲ್ಲವೆಂದು ಅಪ್ಪಣ್ಣ ಇನ್ನೊಂದು ಮದುವೆಯಾದರೆ ತಾರೆಯ ಗತಿಯೇನು? ಎಂದು ಭಯಭೀತಳಾಗುತ್ತಾಳೆ. ಅಪ್ಪಣ್ಣನ ಹೆಸರಿಗೆ ತಮ್ಮೆಲ್ಲ ಆಸ್ತಿಯನ್ನು ಮಾಡುವರು. ಮಧ್ಯಮ ವರ್ಗದ ಒಂದು ಜೈನ ಕುಟುಂಬ ಪ್ರಸಂಗ ಬಂದರೆ ಯಾವ ತ್ಯಾಗಕ್ಕೂ ಹಿಂಜರಿಯುವುದಿಲ್ಲ.

ತಾರಾನಿಗೆ ಮದುವೆಯಾಗಿ ಅನೇಕ ವರ್ಷಗಳು ಕಳೆದರೂ ಮಕ್ಕಳಾಗುವುದಿಲ್ಲ. ತಾರಕ್ಕ ಗಂಡನ ಬಗ್ಗೆ, ಮನೆತನದ ಬಗ್ಗೆ ಚಿಂತಿಸಿ ಮತ್ತೊಂದು ಮದುವೆಯಾಗುವಂತೆ ಅಪ್ಪಣ್ಣನಿಗೆ ತಿಳಿಸುವಳು. ತಾರೆಗೆ ಬದುಕಿನಲ್ಲಿ ಆಸಕ್ತಿಯೇ ಇರಲಿಲ್ಲ. ಜೀವನದಲ್ಲಿ ನಿರುತ್ಸಾಹಗೊಂಡು ಮನುಷ್ಯ ಆಧ್ಯಾತ್ಮದತ್ತ ತನ್ನ ಒಲವನ್ನು ತೋರಿಸುತ್ತಾನೆ. ತಾರೆಯ ಮನಸ್ಸೂ ವಿರಕ್ತಿಯತ್ತ ಸಾಗುವುದು. ತಂದೆ-ತಾಯಿಗಳೊಂದಿಗೆ ಯಾತ್ರಾಸ್ಥಳಗಳಿಗೆ ಹೋಗಿ ತಮ್ಮ ತೋಟದಲ್ಲಿ ಬಂದು ಒಂದು ಚಿಕ್ಕ ಬಸದಿಯನ್ನು ಕಟ್ಟಿಸಿ ಅಲ್ಲಿ ದೇವರ ಮೂರ್ತಿ

ಪ್ರತಿಷ್ಠಾಪಿಸುವಳು. ದಿನಾಲು ಬೆಳಿಗ್ಗೆ-ಸಾಯಂಕಾಲ ಮಂದಿರಕ್ಕೆ ಹೋಗಿ ತನ್ನ ಲೌಕಿಕ ಚಿಂತೆಯನ್ನೆಲ್ಲ ತೊರೆದು ದೇವರ ಧ್ಯಾನದಲ್ಲಿ ಮಗ್ನವಾಗುತ್ತಿದ್ದಳು. ಹಸಿದು ಬಂದ ದಾರಿಹೋಕರಿಗೆ, ಬಡಬಗ್ಗರಿಗೆ, ಮಕ್ಕಳಿಗೆ ಊಟಕ್ಕೆ ನೀಡುತ್ತಿದ್ದಳು. ಅನಂತ ತನ್ನ ಪ್ರೀತಿಯಲ್ಲಿ ಹುಚ್ಚನಾಗಿ ಅಡ್ಡದಾರಿ ಹಿಡಿದು ಕ್ಷಯರೋಗ ಪೀಡಿತನಾಗಿದ್ದಾನೆಂದು ತಿಳಿದು ಆತನನ್ನು ಕೂಡುವುದು ಅಸಾಧ್ಯವೆಂದು ಮನಗೊಂಡಳು. ತಾರೆ ಮದುವೆಯಾಗಿ ಬಹಳಷ್ಟು ವರ್ಷಗಳ ನಂತರ ಗರ್ಭಿಣಿಯಾದಾಗು ಅವರ ಕುಟುಂಬಗಳಲ್ಲಿ ಎಲ್ಲಿಲ್ಲದ ಸಂಭ್ರಮ. ಬುತ್ತಿ ರೊಟ್ಟಿ ಸಜ್ಜಿಕಿನ ಹೋಳಿಗಿ ಮಾಡಿ ಊರೆಲ್ಲಾ ಬೀರುವುದು ಎಂದು ರತ್ನವ್ವ ಚರ್ಚಿಸುವಳು. ಈ ಸಂದರ್ಭದಲ್ಲಿ ಗರ್ಭಿಣಿಯಾಗಿದ್ದಾಗ ಹೇಗೆ ಇರಬೇಕೆಂದು ಮಗಳಿಗೆ ನಾಲ್ಕು ಮಾತುಗಳನ್ನು ಹೇಳುತ್ತಾಳೆ. 'ದೊಡ್ಡ ಕಲ್ಲಲೆ ಬೀಸಬ್ಯಾಡ, ನೀರ ಜಗ್ಗಬ್ಯಾಡ'.[೮] ಅಂದಾಗ ತಾರೆಯ ಅತ್ತೆ ಅಮ್ಮವ್ವನಿಗೆ ಸಿಟ್ಟು ಬಂದು ನನ್ನ ಸೊಸೆಯಿಂದ ಇಂತಹ ಯಾವ ಕೆಲಸಗಳನ್ನು ಮಾಡಿಸಲಾರದೇ ಹೂವಿನ ಹಾಗೆ ನೋಡಿಕೊಳ್ಳುವೆವು ಎಂಬ ಮಾತುಗಳು ಅಮ್ಮವ್ವನ ಹೃದಯ ವೈಶಾಲ್ಯತೆ ಮತ್ತು ಸೊಸೆಯ ಬಗ್ಗೆ ಆಕೆಗಿರುವ ಪ್ರೀತಿ ಮತ್ತು ಕಾಳಜಿಯನ್ನು ವ್ಯಕ್ತಪಡಿಸುತ್ತವೆ. ಆದರೆ ಇವರೆಲ್ಲರ ಸಂತೋಷ ಬಹಳ ದಿನ ಉಳಿಯಲಿಲ್ಲ. ತಾರೆಯ ಉಸಿರು ಬರಿದಾಗುತ್ತದೆ. ಎಲ್ಲರ ಉಲ್ಲಾಸದ ಚಿಲುಮೆ ಬತ್ತಿ ಹೋಗುತ್ತದೆ. ತಾರೆಯ ಗರ್ಭಪಾತಕ್ಕೆ ಅನಂತನೇ ಕಾರಣನಾಗುತ್ತಾನೆ. ಜನರ ಚುಚ್ಚು ಮಾತುಗಳನ್ನು ತಾರೆ ಸಹಿಸಿಕೊಳ್ಳುವಳು. ತಾರೆಗೆ ಬದುಕೇ ಕಗ್ಗತ್ತಲಾಗಿ ಕಾಣುತ್ತದೆ. ಆತ್ಮಹತ್ಯೆಗೆ ಮುಂದಾದಳು. ಆದರೆ 'ಅವ್ವಾ ಅಪ್ಪಾ ಎಂಥಾ ಛಲೂ! ನನ್ನ ಜನ್ಮ ದಂಡಿಗೆ ಹತ್ತಲಿ ಅಂತ ಎಷ್ಟಂತ ಚಿಂತಿ ಮಾಡತಾರು? ಹೊಲಾ ಮನೀ ಸಹಿತ ನನ್ನ ಗಂಡನ ಹೆಸರಲೆ ಮಾಡಿಕೊಟ್ಟರು! ತಮ್ಮದ ಮುಪ್ಪಿನ ಕಾಲಕ ಯಾನ ಗತಿ ಆದೋತ ಅನೋದ ಎಲ್ಲಾ ಮರತರ ನನಗಾಗಿ. ನಾ ಅವರಿಗಿ ಯಾನ ಸುಖಾ ಹಚ್ಚಿದಂಗ ಆಯ್ತು? ನಾ ಇಂದ ಸತ್ತ ಹೋದರ ಅವರಿಗಿ ಯಾರ ಇದಾರು? ಅವರದ ಹ್ಯಾಂಗ ಆಗೋದಾ! ಅವರನಾ ಜೋಕೆ ಮಾಡಕ ಆದರೂ ನಾ ಬದಕರ ಬ್ಯಾಡಾ?'[೯] ಎಂದು ಬದುಕುವ ಹೊಸ ಆಶೆಯನ್ನು ಕಂಡುಕೊಳ್ಳುವಳು. ಆದರೆ ಅದು ತುಂಬ ತಡವಾಗಿತ್ತು.

ತಾರಕ್ಕ ಜೀವನದ ಕೊನೆಯ ಗಳಿಗೆಯವರೆಗೂ ಅನಂತನನ್ನು ನೆನಪಿಸಿಕೊಳ್ಳುತ್ತ ಮರಣ ಹೊಂದುತ್ತಾಳೆ. ತಾರೆಯ ದೇಹ ಚಿತೆಯಲ್ಲಿ ಸುಡುವುದನ್ನು ಕಂಡು ಅನಂತ ಚಿತೆಯಲ್ಲಿ ಹಾರುವನು. ಕೂಡಿ ಬದುಕಲಾಗದೇ, ಒಬ್ಬರನ್ನೊಬ್ಬರು ಮರೆಯಲಾಗದೇ ಕೊನೆಗೆ ಸಾವಿನಲ್ಲಿ ಒಂದಾಗುವ ಭಗ್ನ ಪ್ರೇಮದ ಕಥೆ ಹೃದಯ ಕಲುಕುವಂಥದ್ದು. ಇವರಿಬ್ಬರ ಪ್ರೀತಿ ಕೊನೆಗೂ ನಿಸರ್ಗದಲ್ಲಿಯೇ ಲೀನವಾಯಿತು. ಅಲ್ಲಿದ್ದ ಜನರೆಲ್ಲಾ ಅನಂತನಿಗೆ ತಾರೆಯ ಮೇಲೆ ಎಷ್ಟೊಂದು ಪ್ರೀತಿ ಎಂದು ಮರುಗುವರು. ಆದರೆ ಅವರಿಬ್ಬರ ಸಂಬಂಧಕ್ಕೆ ಅನಂತವೇ ಮೂಕಸಾಕ್ಷಿ. ಅನಂತ ಚಿತೆಯಲ್ಲಿ ಹಾರಿದ್ದನ್ನು ನೋಡಿ 'ಹಂಗ್ಯಾಕ? ಹಂಗ್ಯಾಕ?' ಎಂದು ಜನರು ವ್ಯಥೆಪಡುವರು.

ವಯಸ್ಸಾದವರು ಮತ್ತು ವಿಧವೆಯರು ಸದಾಕಾಲ ಧರ್ಮಧ್ಯಾನದಲ್ಲಿ ತೊಡಗಿರಬೇಕು. ವಿಧವೆಯರಿಗೆ ಮರುಮದುವೆ ಮಾಡುವುದನ್ನು, ಮನೆಬಿಟ್ಟು ಹೊರಗಡೆ ಬರುವುದನ್ನು ಜೈನ ಕುಟುಂಬಗಳು ಒಪ್ಪುತ್ತಿರಲಿಲ್ಲ. ಚಿಕ್ಕ ವಯಸ್ಸಿನಲ್ಲಿ ಗಂಡ ತೀರಿಹೋದರೆ ಜೀವನದುದ್ದಕ್ಕೂ ಆಕೆ ತನ್ನ ಭಾವನೆಗಳನ್ನು ಕೊಂದುಕೊಂಡು ಒಂಟಿಯಾಗಿ ಬಾಳಬೇಕಾಗಿತ್ತು. ಆಕೆಯು ಕೇವಲ ಧರ್ಮಧ್ಯಾನದಲ್ಲಿ ಮಾತ್ರ ತೊಡಗಿರಬೇಕಾದ ಪರಿಸ್ಥಿತಿಯನ್ನು ಅಣ್ಣಾರಾಯರು ಚಾಂಗಲವ್ವನ ಪಾತ್ರದ ಮೂಲಕ ಚಿತ್ರಿಸಿದ್ದಾರೆ.

ಸಂತೆಗೆ ಅಥವಾ ಹೊರಗಡೆ ಹೋಗಿ ಬಂದರೆ ಮೈಲಿಗೆ ಆಗುವದೆಂಬ ಮನೋಭಾವ ಜೈನರದು. ಅಲ್ಲಿ ಎಲ್ಲರನ್ನು ಮುಟ್ಟಿ ಬಂದಿರುತ್ತಾರೆ. ಅದರಲ್ಲೂ ತಮಗಿಂತ ಕೆಳಜಾತಿಯವರನ್ನು ಮುಟ್ಟಿದರೆ ಮೈಲಿಗೆಯಾಗುತ್ತದೆ. ತಾವೇ ಕುಲದಲ್ಲಿ ಶ್ರೇಷ್ಠರು ಎಂಬ ಮನೋಭಾವನೆಯನ್ನು ಜೈನ ಹೆಣ್ಣು ಮಕ್ಕಳು ಬೆಳೆಸಿಕೊಂಡಿರುತ್ತಾರೆ. ರತ್ನವ್ವ, ಸುಂದರವ್ವ ಮತ್ತು ಅನಂತ ಸಂತೆಗೆ ಹೋಗಿ ಬಂದು ತಾರಕ್ಕ ಹತ್ತಿರಕ್ಕೆ ಬರುವುದನ್ನು ಕಂಡು 'ಮುಟ್ಟಿ ದೂರ ನಿಲ್ಲ; ಸಂತಿ ಮೈಲಿಗಿ.........'[೧೦] ಎಂದು ರತ್ನವ್ವ ಹೇಳುವಳು. ತಾರಕ್ಕ ಒಳಗಿನಿಂದ ಮಡಿ ಅರಿವೆಗಳನ್ನು ತಂದು ಕೊಟ್ಟ ನಂತರ ಅವುಗಳನ್ನು ಧರಿಸಿ ಒಳಗಡೆ ಬರುವ ಪ್ರಸಂಗ ಗೋಚರಿಸುತ್ತದೆ. ಜೈನರನ್ನು ಕಂಡರೆ ಮಾದಿಗರು, ಹೊಲೆಯರು, ಕುರುಬರು ಪಕ್ಕಕ್ಕೆ ಸರಿದು ನಿಂತುಕೊಳ್ಳುವ ಪ್ರಸಂಗಗಳನ್ನು ಅಣ್ಣಾರಾಯರು ಚಿತ್ರಿಸುತ್ತಾರೆ.

ಹೆಣ್ಣು ಮಕ್ಕಳು ಋತುಮತಿಯಾಗುವುದು ನೈಸರ್ಗಿಕ ಕ್ರಿಯೆ. ಜೈನ ಕುಟುಂಬದಲ್ಲಿ ಅದನ್ನು ಮಡಿವಂತಿಕೆ ಎನ್ನುತ್ತಾರೆ. ಋತುಮತಿಯರಾದಾಗ ಯಾರನ್ನೂ ಮುಟ್ಟುವ ಹಾಗಿಲ್ಲ, ಅಡಿಗೆ ಮನೆಗೆ, ಜಿನಮಂದಿರಕ್ಕೆ ಹೋಗುವ ಹಾಗಿಲ್ಲ. ನಾಲ್ಕು ದಿನಗಳವರೆಗೆ ಒಂದೆಡೆ ಕುಳಿತು ನೀಡಿದ್ದನ್ನು ತಿನ್ನುತ್ತಿರಬೇಕು. ಬಹುಷಃ ಈ ಒಂದು ಕಾರಣಕ್ಕಾಗಿ ಏನೋ ಸ್ತ್ರೀ ಜಾತಿಗೆ ಮೋಕ್ಷವಿಲ್ಲ ಮತ್ತು ಗರ್ಭಗುಡಿಯಲ್ಲಿ ಸ್ತ್ರೀಯರಿಗೆ ಪ್ರವೇಶಕ್ಕೆ ನಿಷೇದ.

ಮಧ್ಯಮ ವರ್ಗದ ಜೈನ ಕುಟುಂಬಗಳಲ್ಲಿ ವಿಧವೆಯರು ಯಾವ ಮಂಗಳ ಕಾರ್ಯಗಳಲ್ಲಿ ಮುಂದಾಗುವಂತಿಲ್ಲ. ಅದು ಧರ್ಮ ಬಾಹಿರ. ಆದಷ್ಟು ಅವರು ತಮ್ಮ ಹೆಚ್ಚಿನ ಅವಧಿಯನ್ನು ಬಸದಿಯಲ್ಲಿಯೇ ಕಳೆಯಬೇಕು. ಚಂದೂರಿನ ಚಾಂಗಲವ್ವ ಮುದುಕಿ ಚಿಕ್ಕವಳಿರುವಾಗಲೇ ಗಂಡನನ್ನು ಕಳೆದುಕೊಂಡ ವಿಧವೆ. ಉಪವಾಸಗಳನ್ನು ಮಾಡುತ್ತ ದೇಹವನ್ನು ದಂಡಿಸುತ್ತಿದ್ದಳು. ಚಿಮ್ಮವ್ವ ಜಗಳಗಂಟಿ, ಸೊಸೆಯನ್ನು ಕಾಡುವಳೆಂದು ಆಕೆಯನ್ನು ಬಸದಿಗೆ ಬರುವಂತೆ ಹೇಳುವುದು ತಾರೆಯ ಸುಖಗೋಸ್ಕರ. ಸೊಸೆಗೆ ಮನೆ ಜವಾಬ್ದಾರಿಯನ್ನು ನೀಡಿ, ವಯಸ್ಸಾದ ತಾನು ಧಾರ್ಮಿಕ ಕಾರ್ಯಗಳಲ್ಲಿ ತೊಡಗುವದು ಲೇಸು ಎನ್ನುತ್ತಾಳೆ.

ಬಸ್ತಿಗೆ ರೊಟ್ಟಿ ಕಳುಹಿಸದೇ ಮನೆಯಲ್ಲಿ ಊಟ ಮಾಡುವ ಹಾಗಿಲ್ಲ. ಒಂದು ವೇಳೆ ಹೀಗೆನಾದರೂ ಆದರೆ ಅದನ್ನೇ ಬಂಡವಾಳವಾಗಿ ಮಾಡಿಕೊಂಡು ಅತ್ತೆ ದೊಡ್ಡ ರಾಮಾಯಣವನ್ನೇ ಮಾಡುವಳು ಎಂಬುದನ್ನು ಚಿಮ್ಮವ್ವನ ಪಾತ್ರದ ಮೂಲಕ ಸ್ಪಷ್ಟಪಡಿಸಿದ್ದಾರೆ. ಅದು ಕ್ಷಮಿಸಲಾರದ ತಪ್ಪು ಎನ್ನುವಂತೆ ವರ್ತಿಸುವ ಕ್ರೂರ ಅತ್ತೆಯರ ಚಿತ್ರಣ, ಕ್ಷುಲ್ಲಕ ವಿಷಯಗಳನ್ನೆಲ್ಲ ದೊಡ್ಡದಾಗಿ ಮಾಡುವ ಅತ್ತೆಯ ಗುಣಧರ್ಮದಿಂದ ಅನೇಕ ಸೊಸೆಯರು ಕಣ್ಣೀರಿನಲ್ಲಿ ಕೈ ತೊಳೆಯುವ ಪ್ರಸಂಗಗಳನ್ನು, ಹೀಗೆ ಸೊಸೆಯಂದಿರರಿಗೆ ಕಾಟ ಕೊಟ್ಟು ಅವರ ತವರು ಮನೆಯ ಆಸ್ತಿಯನ್ನು ಕಬಳಿಸಬೇಕೆಂಬ ದುರಾಸೆಯ ಫಲವನ್ನು ಚಿತ್ರಿಸುತ್ತಾರೆ.

ಸೊಸೆಯಾದವಳು ಸಾಯಂಕಾಲ ಹೊತ್ತು ಮುಳುಗುವುದರೊಳಗೆ ಅತ್ತೆಯ ಅನುಮತಿ ಪಡೆದುಕೊಂಡು ಅಡುಗೆಯನ್ನು ಮಾಡಿ, ಕಾಲಿಗೆ ಬಿಸಿ ನೀರು ಇಟ್ಟು 'ಹ್ವಾಸಕ' ತಯಾರು ಮಾಡಬೇಕೆಂದು ಅತ್ತೆ ಆಜ್ಞಾಪಿಸುವಳು. ಹ್ವಾಸದ ನೆಪದಲ್ಲಿ ಸೊಸೆಯಂದಿರನ್ನು ಕಾಡುವುದು, ಸೊಸೆಯನ್ನು ಸೇವಕಿಯಾಗಿ ಕಾಣುವ ದೃಷ್ಟಿಕೋನವನ್ನು ಅಣ್ಣಾರಾಯರು ಚಿತ್ರಿಸುತ್ತಾರೆ.

ಮಧ್ಯಮ ವರ್ಗದ ಜೈನ ಕುಟುಂಬಗಳು ಕೃಷಿ ಪ್ರಧಾನವಾಗಿದ್ದರಿಂದ ನೋಪಿಯ ನಿಯಮಗಳನ್ನು ಪಾಲಿಸುವುದು ಕಷ್ಟಸಾಧ್ಯ. ಏಕೆಂದರೆ ಸುಗ್ಗಿಯ ಕಾಲದಲ್ಲಿ ಹೊಲಗದ್ದೆಗಳಿಂದ ಬರಲು ಕತ್ತಲೆಯಾಗುವುದು. ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ ಸಿಕ್ಕಲ್ಲಿಯ ನೀರನ್ನು ಕುಡಿಯಬೇಕಾಗುವುದು. ಆಗ ನೀರು ಸೋಸಿ ಕುಡಿಯುವುದು ಅಸಾಧ್ಯವಾಗುವುದು. ತಂಗಳೋ ಬಿಸಿಯದೋ ಯಾವುದಾದರೂ ಸಿಕ್ಕಿದರೆ ಸಾಕು ತಿಂದು ಕೆಲಸಕ್ಕೆ ಹೋಗಬೇಕಾದ ಸಂದರ್ಭದಲ್ಲಿ ಮಡಿಯಿಂದ ಅಡುಗೆ ಮಾಡುವುದು ಅಸಾಧ್ಯ. ಅದಕ್ಕೆ ಸುಮ್ಮನೆ ಎಲ್ಲರೂ ನೋಪಿಯನ್ನು ಮಾಡುತ್ತಾರೆಂದು ನಾವು ಮಾಡಿದರೆ ಪಾಪದಲ್ಲಿ ಬಿಳುತ್ತೇವೆ ಎಂಬ ಚಿಮ್ಮವ್ವನ ವಿಚಾರಗಳನ್ನು ಅಣ್ಣಾರಾಯರು ವ್ಯಕ್ತಪಡಿಸುತ್ತಾರೆ.

ಹಬ್ಬ ಹರಿದಿನಗಳಲ್ಲಿ ತಪ್ಪದೇ ಬಸದಿಗೆ ಪೂಜಾ ಸಾಮಗ್ರಿಗಳಾದ ಮುಕ್ಕಾಗದ ಅಕ್ಕಿ, ಹಣ್ಣು, ದೀಪ-ಧೂಪ ಮುಂತಾದವುಗಳನ್ನು ತಮ್ಮ ಅಂತಿಸ್ಥಿತಿಕೆಗೆ ತಕ್ಕಂತೆ ತೆಗೆದುಕೊಂಡು ಹೋಗುವರು. ನಂತರ ಗಂಧೋದಕವನ್ನು ತೆಗೆದುಕೊಂಡು ಮನೆಗೆ ಮರಳುವುದು. ಮೈನೆರೆಯುವುದಕ್ಕಿಂತ ಮೊದಲು ಜೈನ ಹೆಣ್ಣು ಮಕ್ಕಳು ಕುಂಕುಮ, ನೋಪಿ, ತೆಗೆದುಕೊಳ್ಳುವುದು ಕಡ್ಡಾಯವಾಗಿದೆ. ಶುದ್ಧ ಮತ್ತು ಸಾತ್ವಿಕ ಆಹಾರವನ್ನು ಸೇವಿಸುವುದು. ಅಷ್ಟಮಿ ಚತುರ್ದಶಿಯೆಂದು ಉಪವಾಸವನ್ನು ಮಾಡುವುದು, ನಮೋಕಾರ ಮಂತ್ರ, ಚೋವಿಸ ತೀರ್ಥಂಕರರ ಹೆಸರು, ಭಕ್ತಾಯರ ಸ್ತೋತ್ರ ಹೇಳುವುದನ್ನು ಕಲಿಯಬೇಕು.

ಅಷ್ಟಮಿ ಚತುರ್ದಶಿಯಂದು ಉಪ್ಪು ತಿನ್ನದೇ ಮಡಿಯಿಂದ ಸರಳ ಆಹಾರವನ್ನು ಸೇವಿಸುವುದು, ಉಪವಾಸ ಮಾಡುವುದು ಮುಂತಾದ ದೇಹ ದಂಡನೆಯ ಪದ್ಧತಿಗಳು ಕಾದಂಬರಿಯಲ್ಲಿ ಅಭಿವ್ಯಕ್ತಗೊಂಡಿವೆ. ಚಾಂಗಲವ್ವ ಮುದುಕಿಯ ಮೂಲಕ ಅಕ್ಷಯ ತೃತೀಯಾ ಆಚರಣೆಯ ಹಿಂದಿನ ಕಥೆಯನ್ನು ಅಣ್ಣಾರಾಯರು ವ್ಯಕ್ತಪಡಿಸುತ್ತಾರೆ. ಅಕ್ಷಯ ತೃತೀಯಾದ ಪೂಜೆಗೆ ಕಬ್ಬಿನ ರಸವೇ ಒಳ್ಳೆಮಾನ. ಏಕೆಂದರೆ ಅಕ್ಷಯ ತೃತೀಯಾ ದಿನದಂದು ಶ್ರೇಯಾಂಸ ರಾಜಾ ಆದಿನಾಥ ಸ್ವಾಮಿಗೆ ಕಬ್ಬಿನ ರಸ ಕುಡಿಯಲಿಕ್ಕೆ ಕೊಟ್ಟಿದ್ದರಿಂದ ಆ ದಿನದಂದು ಕಬ್ಬಿನ ರಸದಿಂದಲೇ ಪೂಜೆ ಮಾಡಬೇಕು. ಹ್ವಾಸಾ ಮಾಡುವುದು, ನೀರುಸೋಸಿ ಕುಡಿಯುವುದು, ಮಡಿಯಿಂದ ಊಟ ಮಾಡುವುದು ಮುಂತಾದ ಜೈನ ಕುಟುಂಬಗಳ ಸಾಮಾನ್ಯ ಲಕ್ಷಣಗಳನ್ನು ಚಿತ್ರಿಸುತ್ತಾರೆ.

ಹೆಣ್ಣು ಮಕ್ಕಳ ಎರಡನೇ ಮದುವೆಗೆ ಜೈನ ಕುಟುಂಬಗಳಲ್ಲಿ ಅವಕಾಶವಿದ್ದುದನ್ನು ಅದರ ವಿಧಿ ವಿಧಾನಗಳನ್ನು ತಾರೆಯ ಪಾತ್ರದ ಮೂಲಕ ತಿಳಿಸುತ್ತಾರೆ. ಉಡಿಕೆಯರಿಗೆ ವಿಧವೆಯರು ನೀರೆರೆಯುವುದು, ಬಿಳಿ ಧೋತರ ಉಡಿಸಿ ದೇವರ ಮನೆಗೆ ಕರೆದೊಯ್ಯುವುದು, ಉಡಿಕೆಯ ಹಣೆಗೆ ವಿಧವೆ ಗೋಮಲದ ಬೊಟ್ಟೊಂದನ್ನು ಹಚ್ಚುವುದು ಮುಂತಾದ ವಿಶಿಷ್ಟ ಪದ್ಧತಿಗಳತ್ತ ಗಮನ ಸೆಳೆಯುವರು. ಉಡಿಕೆಯರು ಯಾವ ಶುಭ ಕಾರ್ಯಗಳಲ್ಲಿ ಮುಂದೆ ಬರುವ ಹಾಗಿಲ್ಲ. ಇಂತಹ ವಿಧಿ-ವಿಧಾನಗಳು ಕೇವಲ ಸ್ತ್ರೀಯರಿಗೆ ಮಾತ್ರ ಅನ್ವಯವಾಗುತ್ತಿದ್ದವು. ಪುರುಷರಿಗೆ ಅವು ಅನ್ವಯವಾಗುತ್ತಿರಲಿಲ್ಲ. ಹೀಗೆ ಸ್ತ್ರೀ ಶೋಷಣೆಯ ವಿವಿಧ ಮಜಲುಗಳನ್ನು ಅಣ್ಣಾರಾಯರು ಕಟ್ಟಿಕೊಡುತ್ತಾರೆ.

ಮದುವೆಯಾದ ಹೆಣ್ಣು ಮಗಳು ಹೊಸದಾಗಿ ಗಂಡನ ಮನೆಗೆ ಹೋಗುವಾಗ ಹೊಸ ಸೀರೆ ಉಟ್ಟು ಐದು ಮನೆಯ ಮುತ್ತೈದೆಯರಿಂದ ಉಡಿಯಕ್ಕಿ ಫಲ ಹಾಕಿಸಿಕೊಂಡು ಬರಬೇಕೆಂಬ ಸಂಪ್ರದಾಯ. ಬಂದವರಿಗೆಲ್ಲ ನಮಸ್ಕಾರ ಮಾಡಿ ನಾಲ್ಕೈದು ಹೆಜ್ಜೆ ಮುಂದೆ ಹೋದೊಡನೆ ನೀರು ತಗೆದುಕೊಂಡು ಬಾಯಿ ಮುಕ್ಕಳಿಸುವ ಪದ್ಧತಿಯಿದೆ.

ಐದು ಜನ ಸುಮಂಗಲೆಯರು ಬಾಳೆಯ ಹಣ್ಣಿನ ದುರುಡಿಗಳನ್ನು ತೆಗೆದುಕೊಂಡು ಅವರೊಂದಿಗೆ ಗಂಡನ ಮನೆಗೆ ಹೋಗುವುದು. ಈ ಕಾರ್ಯದಲ್ಲಿ ವಿಧವೆಯರು ಮುಂದೆ ಸುಳಿಯುವ ಹಾಗಿಲ್ಲ. ಅವರು ಅಪಶಕುನ ಹಾಗೂ ದೂರದಲ್ಲಿಯೇ ನಿಂತುಕೊಳ್ಳಬೇಕು. ತಾರಕ್ಕನನ್ನು ಗಂಡನ ಮನೆಗೆ ಕಳುಹಿಸುವಾಗ ದೂರದಲ್ಲಿ ನಿಂತ ಚಾಂಗಲವ್ವ ಮುದುಕಿ 'ನಗುತ ನಗುತ ಹೋಗಬೇಕವ್ವ ಗಂಡನ ಮನೀಗೆ ಪುರಾಣದಾಗ ಕೇಳಿಲ್ಲಾ? ಗಂಡನ ಬೆನ್ನ ಹತ್ತಿ ಸೀತಾ ಹ್ಯಾಂಗ ಅಡವಿಗೆ ಹೋದಳು..........'[೧೧] ಹೆಣ್ಣು ಈ ರೀತಿ ಶೋಷಣೆಗೆ ಒಳಪಡುತ್ತಾಳೆ. ಸಾಮಾಜಿಕ ಬಂಧನಗಳು ಆಕೆಗೆ ತೊಡಕಾಗಿ ಪರಿಣಮಿಸುತ್ತವೆ ಎಂಬುದನ್ನು ಜೈನ ಹೆಣ್ಣು ಮಕ್ಕಳ ಶೋಷಣೆಯ ಧ್ವನಿಯನ್ನು ಎತ್ತಿ ತೋರಿಸಿದ್ದಾರೆ.

ಹೆಣ್ಣು ಮಕ್ಕಳು ಮೈನೆರೆದ ಸಂದರ್ಭದಲ್ಲಿ ನಾಲ್ಕೈದು ಜನ ಮುತ್ತೈದೆಯರು ನೀರೆರೆಯಲು ಬರುವದು, ಅರಿಸಿಣ ಹಚ್ಚಿ, ಎಣ್ಣೆ ಹೂಸಿ ಮನೆ ಹಾಕಿ ಕೂಡಿಸಿ ಹಾಡು ಹೇಳಿ, ನೀರು ಎರೆಯುವುದು. ಮನೆಯೊಳಗಿನ ಆಹಾರ ಆ ದಿನ ತಿನ್ನಬಾರದೆಂದು ಸುತ್ತಲಿನ ಮನೆಯವರು (ಎಡೆ) ತಂದು ಕೊಡುವುದು. ಹಿಟ್ಟ ಅಕ್ಕಿ ತರುವುದು, ಗಂಡನ ಮನೆಗೆ ಸಕ್ಕರೆಯೊಂದಿಗೆ ಈ ಸಿಹಿಸುದ್ಧಿ ತಿಳಿಸುವುದು. ಹುಡುಗಿ ಮನೆಯವರು ಪರಿಸ್ಥಿತಿ ಚೆನ್ನಾಗಿರದಿದ್ದರೂ ಸಹಿತ ಸಾಲವನ್ನಾದರೂ ಮಾಡಿ ಅತ್ತೆ ಮನೆಯವರಿಗೆ ಉಪಚಾರ ಮಾಡಬೇಕು. ಅಳಿಯನಿಗೆ ಬಂಗಾರ ಹಾಕಲೇಬೇಕು. ಅಳಿಯನಿಗೆ ಕೊಟ್ಟ ಉಡುಗೊರೆಗಳಿಗೆ ಬೆಲೆಕಟ್ಟಿ ನೋಡುವುದು, ಅಳಿಯನನ್ನು ಕುದುರೆ ಮೇಲೆ ಕರೆತರುವುದು, ಮೈನೆರೆದ ಹುಡುಗಿಯನ್ನು ದಂಡೆ ಕಟ್ಟಿ ಮಂಚದ ಮೇಲೆ ಕೂಡ್ರಿಸಿ ಹಾಡು ಹೇಳುವುದು. ಮುತ್ತೈದೆಯರು ಉಡಿಯೊಳಗೆ ಫಲ ಹಾಕುವುದು. ಬಂದವರಿಗೆಲ್ಲ ಆಯಾರ ಮಾಡುವುದು, ಅತ್ತೆ ಮನೆಯವರು ತಮ್ಮ ಮನೆತನಕ್ಕೆ ತಕ್ಕ ಉಡುಗೊರೆ ಬಂದಿಲ್ಲವೆಂದು ಮನಸ್ತಾಪ ಮಾಡಿಕೊಳ್ಳುವುದು ಮುಂತಾದ ವಿಷಯಗಳನ್ನು ಮನೋಜ್ಞವಾಗಿ ಅಣ್ಣಾರಾಯರು ಚಿತ್ರಿಸಿದ್ದಾರೆ.

ಒಬ್ಬ ವ್ಯಕ್ತಿ ಬದುಕುವುದಿಲ್ಲ ಎಂದು ಗೊತ್ತಾದರೆ ಪಂಡಿತರು ಬಂದು ದಾನ ಕೊಡಲು ಹೇಳುತ್ತಾರೆ. ಏಕೆಂದರೆ ವ್ಯಕ್ತಿ ಜೀವತಾವಧಿಯಲ್ಲಿ ಗೊತ್ತಿದ್ದೋ-ಗೊತ್ತಿರಲಾರದೆಯೋ ಏನೋ ಪಾಪದ ಕೆಲಸ ಮಾಡಿದ್ದರೆ ಕೊನೆಯ ಗಳಿಗೆಯಲ್ಲಾದರೂ ಆ ತಪ್ಪಿಗೆ ಪ್ರಾಯಶ್ಚಿತ್ತವಾಗಿ ಸದ್ಗತಿಸಿಗಲೆಂಬ ಭಾವನೆ. ಪಂಡಿತರನ್ನು, ಭಟ್ಟರನ್ನು, ಐಗೋಳರನ್ನು ಕರೆಯಿಸಿ ಶಕ್ತಿಯನುಸಾರ ದುಡ್ಡು, ಧಾನ್ಯದಾನ ಮಾಡುತ್ತಾರೆ. ಕೆಳಜಾತಿಯವರನ್ನು ಕರೆಯಿಸಿ ಜೋಳ, ಗೋಧಿ ಕೊಡಬೇಕು. ಪ್ರಾಣ ಹೋಗುವಂತಹ ಸಂದರ್ಭದಲ್ಲಿ ಕಿವಿಯೊಳಗೆ ನಮೋಕಾರ ಮಂತ್ರ ಹೇಳಬೇಕು. ಮರಣ ಹೊಂದಿದ ವ್ಯಕ್ತಿ ಹಿರಿಯವನಾಗಿದ್ದರೆ ಆತನ ಮಕ್ಕಳು ಮೊಮ್ಮಕ್ಕಳು ಬೆಳ್ಳಿ ಹೂವುಗಳನ್ನು ಹಾರಿಸುವಂತಹ ವಿಶಿಷ್ಟ ಪದ್ಧತಿಗಳನ್ನು ಚಿತ್ರಿಸುತ್ತಾರೆ.

ಗಂಡ ತೀರಿಕೊಂಡ ಸಂದರ್ಭವನ್ನು ಸರಿಯಾಗಿ ಬಳಸಿಕೊಳ್ಳುವ ಅತ್ತೆಯರ ಡಾಂಬಿಕತನವನ್ನು ಅಣ್ಣಾರಾಯರು ಬಯಲಿಗೆಳೆಯುತ್ತಾರೆ. ಗಂಡ ಸತ್ತಾಗ ಹಾಡಾಡಿ ಅಳವು ಪ್ರಸಂಗವನ್ನು ಚಿಮ್ಮವ್ವನ ಪಾತ್ರದ ಮೂಲಕ ಚಿತ್ರಿಸುತ್ತಾರೆ. ಮಗ ಭರಮನನ್ನು ಕಂಡ ಚಿಮ್ಮವ್ವ ಜೋರಾಗಿ ಧ್ವನಿ ಮಾಡಿ 'ಸೂಟ್ಟ ಬೂದಿ ಮಾಡಿ ಬಂದ್ಯಾನಪ್ಪ, ನಿಮ್ಮಪ್ಪನಾ....? ಅಯ್ಯೋ ನನ್ನ ಅರಸ........ ನನ್ನ ಕಂಕುಮ ಧೋರೀ..... ನನ್ನ ಮಂಗಳಾಸೂತ್ರಾ...... ನನ್ನ ಬಂಗಾರ...... ನನ್ನ ಸಡಗರಾ...... ನನ್ನ ಸಿಂಗಾರಾ..... ಎಲ್ಲಿ ಅಡಗಿದ್ಯೋ.... ಭಗವಂತಾ.....ಇಂಥಾ...ರೂಪಾ... ತಂದಿಟ್ಟಿ ನನಗಾsss......ಆ್ಞ! ಆ್ಞ!....... ಅಯ್ಯೋ! ಅಯ್ಯೋ....ಹಯ್ಯೋ.......'[೧೨] ಎಂದು ಬೋರಾಡಿ ಅಳುವುದನ್ನು

ಚಿತ್ರಿಸುತ್ತಾರೆ. ಗಂಡ ಹೋದನಲ್ಲ ಎಂದು ದುಃಖ ಪಡದೇ ಇನ್ನು ಮುಂದೆ ಒಡವೆಗಳನ್ನು ಹಾಕಿಕೊಳ್ಳಲಾಗದು. ತಲೆ ಎತ್ತಿ ತಿರುಗಾಡಲಾಗದು, ಮನೆಯಲ್ಲಿ ತನ್ನ ಅಧಿಕಾರ ಇನ್ನೂ ಮುಂದೆ ಉಳಿಯುವುದಿಲ್ಲವೆಂದು ದುಃಖಿಸುತ್ತ ಮಗನನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ತಾನೇ ಮನೆಯ ಯಜಮಾನಿ ಆಗಬೇಕೆಂಬ ದುರಾಸೆಯ ಚಿತ್ರಣ ಗಮನ ಸೆಳೆಯುತ್ತದೆ. ಮಗ ಸೊಸೆಯನ್ನು ದೂರ ಮಾಡಲು ಸೊಸೆಯ ಬಗ್ಗೆ ಸಂಶಯದ ಸಸಿಯನ್ನು ಮಗನ ತಲೆಯಲ್ಲಿ ಅತ್ತೆಯಾದವಳು ನೆಡುತ್ತಾಳೆ. ಚಿಮ್ಮವ್ವ ಸಂಜೆ ಸೊಸೆಗೆ ದೊಡ್ಡ ಕೊಡದಿಂದ ನೀರು ತರಲು ಹೇಳುವಳು. ಪಕ್ಕದ ಮನೆಯೊವನೊಂದಿಗೆ ಸೊಸೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಾಳೆ. ಬೇಕಾದರೆ ಹೊಳೆಯ ಕಡೆಗೆ ಹೋಗಿ ನೋಡು ಎನ್ನುತ್ತಾಳೆ. ಕೊಡ ಭಾರವಿದ್ದುದಕ್ಕೆ ತಾರೆ ಬೆರೆಯವರಿಂದ ಎತ್ತು ಕೊಳ್ಳುವುದನ್ನು ನೋಡಿ ಭರಮನ ಮನಸ್ಸು ಮಲೀನಗೊಳ್ಳುವುದು. ಹೀಗೆ ಅವರ ಸಂಸಾರವನ್ನೇ ನಾಶಪಡಿಸುತ್ತಾಳೆ. ಮಗನನ್ನು ಕೈಗೊಂಬೆಯನ್ನಾಗಿ ಮಾಡಿಕೊಳ್ಳುವುದು ಜೈನ ಕುಟುಂಬಗಳ ಸಾಮಾನ್ಯ ಲಕ್ಷಣ. ಅವಳು ಕುಣಿಸಿದಂತೆ ಮಕ್ಕಳು ಕುಣಿಯುವರು ಎಂಬುದಕ್ಕೆ ನಿಸರ್ಗ ಕಾದಂಬರಿಯ ಭರಮನೇ ಸಾಕ್ಷಿ.

ಜೈನ ಸಮುದಾಯಗಳಲ್ಲಿ ಅಂತ್ಯ ಸಂಸ್ಕಾರ, ಉತ್ತರ ಕ್ರಿಯೆಗಳು ವಿಭಿನ್ನವಾಗಿವೆ. ದಹನ ಕ್ರಿಯೆಗೆ ಹೋದವರೆಲ್ಲ ಕೈಯಲ್ಲಿ ತಂದ ಹರಳು ಮತ್ತು ಕರಕಿಯನ್ನು ತುಂಬಿಟ್ಟು ತಂಬಿಗೆಯೊಳಗೆ ಹಾಕಿ ತಮ್ಮ ತಮ್ಮ ಮನೆಗಳಿಗೆ ತೆರಳುವರು. ಅವರವರ ಶಕ್ತಿಗನುಸಾರವಾಗಿ ಉತ್ತರ ಕ್ರಿಯೆಯನ್ನು ನಡೆಸುತ್ತಾರೆ. ಸ್ಥಿತಿವಂತರು ಹದಿಮೂರನೆಯ ದಿನದಂದು ಪಲ್ಲಕ್ಕಿ ತೆಗೆದು ದೊಡ್ಡ ಪೂಜೆ ಮಾಡಿಸುತ್ತಾರೆ. ತಮ್ಮ ಘನತೆಯನ್ನು ತೋರಿಸುವ ಸಲುವಾಗಿ ಪಂಡಿತರ ಅಪ್ಪಣೆಯಂತೆ ಸಮ್ಮೇದ ಶಿಖರದ ವಿಧಾನ ಮಾಡುತ್ತಾರೆ. ವಿಧಿ–ವಿಧಾನಗಳ ಹೆಸರಿನಲ್ಲಿ ಪಂಡಿತರು ಮುಗ್ಧ ಜನರನ್ನು ಮೌಢ್ಯರನ್ನಾಗಿಸಿ ಸಾಧ್ಯವಿದ್ದಷ್ಟು ಹಣ ದೋಚುತ್ತಾರೆ. ಹದಿಮೂರನೆಯ ದಿವಸ ಅಡುಗೆ ಮಾಡಿಸಿ, ಆಪ್ತೇಷ್ಟರಿಗೂ, ಹೆಣ ಹೊತ್ತವರ ಹೆಗಲ ಇಳಿಸಲು ಊಟಕ್ಕೆ ಹಾಕಬೇಕು. ಮರುದಿನ ಊರ ಜನರಿಗೆಲ್ಲ ಊಟ ಹಾಕಿಸುವದು. ಪಲ್ಲಕ್ಕಿಯ ಮುಂದೆ ಬಾರಿಸಲು ಪರವೂರಿನ ಮೇಳದವರನ್ನು ಕರೆಯಿಸುವುದು. ಮಗನಾದವನು ತಂದೆ ತೀರಿಕೊಂಡ ಒಂದು ವರ್ಷದವರೆಗೆ ತನಗೆ ಇಷ್ಟವಾದ ಯಾವುದಾದರೊಂದು ತಿಂಡಿಯನ್ನು ತ್ಯಜಿಸಬೇಕು ಎಂಬ ನಿಯಮವಿರುವುದನ್ನು ಭರಮನ ಪಾತ್ರದ ಮೂಲಕ ಬಿಂಬಿಸುತ್ತಾರೆ.

ತಾರಕ್ಕನಿಗೆ ಮಕ್ಕಳಾಗಲಿಲ್ಲ ಎಂದು ರತ್ನವ್ವ ತಾಯಿತ ಕಟ್ಟುವುದು, ಅಮವಾಸ್ಯೆ ದಿವಸ ಕರೆವ್ವ ದೇವಿಗೆ ಮಾಡುವುದನ್ನು ಚಾಂಗಲವ್ವ ಮುದುಕಿ ಅಲ್ಲಗಳೆಯುತ್ತಾಳೆ. ಜೈನ ಧರ್ಮದ ಪುರಾಣಗಳಲ್ಲಿ ಇಂಥ ದೇವರುಗಳನ್ನು ಮಿಥ್ಯಾ ದೇವರು ಎಂದು ಕರೆದಿರುವುದು. ರಾತ್ರಿ ಊಟ ಮಾಡುವುದು ದೆವ್ವಗಳ ಸ್ವಭಾವ. ರಾತ್ರಿ ಊಟದಿಂದ ಹಿಂಸೆ ಹೆಚ್ಚಾಗುತ್ತದೆ.

ಅದಕ್ಕೆ ಹ್ವಾಸಾ ಮಾಡುವುದು ಒಳ್ಳೆಯದು ಹಾಗೂ ಆರೋಗ್ಯಕರವಾದದ್ದು. ಹೀಗೆ ಧರ್ಮದ ಹಿನ್ನಲೆಯಲ್ಲಿ ಅಣ್ಣಾರಾಯರು ವೈಚಾರಿಕ ವಿಚಾರಗಳನ್ನು ಹೇಳುತ್ತಾರೆ.

ಮಾಟ ಮಂತ್ರಗಳೆಂದು ಪಂಡಿತರು ಹೆಣ್ಣು ಮಕ್ಕಳ ದಾರಿ ತಪ್ಪಿಸುವ ಪ್ರಸಂಗಗಳನ್ನು, ಅವರನ್ನು ವಂಚಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ರೀತಿಯನ್ನು ಅಣ್ಣಾರಾಯರು ಚಿತ್ರಿಸುತ್ತಾರೆ. ಒಳ್ಳೆಯ ದಿನ ಕೇಳುವುದು, ಮುಹೂರ್ತ ಕೇಳುವುದು, ಮಾಟ ಮಂತ್ರಗಳಿಗೆ ಪರಿಹಾರವನ್ನು ಕೇಳುವ ಪ್ರಸಂಗಗಳು ನಿಸರ್ಗದಲ್ಲಿ ಮೂಡಿ ಬಂದಿವೆ. ಪಂಡಿತ ಮಾತನ್ನು ನಿಜವೆಂದು ನಂಬುವ ಜೈನ ಮಹಿಳೆಯರ ಅಜ್ಞಾನ, ಮೂಢನಂಬಿಕೆಗಳನ್ನು ಬಯಲಿಗೆಳೆಯುತ್ತಾರೆ. ಪಂಡಿತರ ಮಾತು ಕೇಳಿ ರಕ್ತ ಸಂಬಂಧಗಳನ್ನು ಮರೆತು ಒಬ್ಬರನೊಬ್ಬರು ದ್ವೇಷಿಸುವ ಸಂದರ್ಭಗಳನ್ನು ಚಿತ್ರಿಸುತ್ತಾರೆ. ಹೂವಣ್ಣನ ಸಾವಿಗೆ ತಾರೆಯ ಮನೆಯವರು ಕಾರಣ. ಅವರೇ ಮಾಟ ಮಾಡಿದ್ದು ಎಂದು ನಂಬಿದ ಚಿಮ್ಮವ್ವ ಮುಂದೆ ತಾರೆಯನ್ನು ಹೆಚ್ಚು ಕಾಡಲಾರಂಭಿಸಿ ಆಕೆಯ ಮನೆಯಿಂದ ಬಂದ ತಿಂಡಿತಿನಿಸುಗಳನ್ನು ಅನುಮಾನದಿಂದ ನೋಡಲಾರಂಭಿಸುವಳು. ತನ್ನ ಹರಿತವಾದ ಮಾತುಗಳಿಂದ ತಾರೆಯನ್ನು ಇರಿಯುತ್ತಿದ್ದಳು. ತಾರಾ ಗಂಡನ ಮನೆಗೆ ಹೋಗುವಾಗ ಬಾವಾ ಎದುರು ಬಂದಿದ್ದು ಅಶುಭವೆಂದು ಮುಂದೆ ಮಗಳ ಜೀವನ ಕಷ್ಟವೆಂದು ರತ್ನವ್ವ ಚಿಂತೆಗೀಡಾಗುವುದು, ಮಾತನಾಡುವಾಗ ಹಲ್ಲಿ ಲಚಗೊಡುವುದು, ಬಂಡಿಯ ನೊಗ ಮುರಿಯುವುದು, ಕಟ್ಟಿಗೆಯ ಹೊರೆ ಬರುವುದು, ಕೆಳಜಾತಿಯವರು, ವಿಧವೆಯರು, ಗಂಡನ ಮನೆಗೆ ಹೊರಡುವಾಗ ಎದುರು ಬರುವುದು ಅಪಶಕುನವೆಂದು ಜನಸಾಮಾನ್ಯರ ನಂಬಿಕೆ. ಅಣ್ಣಾರಾಯರು ಜೈನ ಧರ್ಮದ ಹೆಸರಿನಲ್ಲಿ ನಡೆಯುವ ಮೌಢ್ಯತೆ ಹಾಗೂ ಧರ್ಮದ ದೌರ್ಬಲ್ಯಗಳನ್ನು ಎಳೆ-ಎಳೆಯಾಗಿ ಹೊರತೆಗೆಯುತ್ತಾರೆ. ಜೊತೆಗೆ ಜೈನ ಧರ್ಮದ ವಿಶಿಷ್ಟ ರೀತಿ-ರಿವಾಜುಗಳನ್ನು ಅವುಗಳ ಒಳ ನೋಟಗಳನ್ನು ವೈಜ್ಞಾನಿಕ ರೀತಿಯಲ್ಲಿ ಚಿತ್ರಿಸಿದ್ದಾರೆ.

❖❖❖❖❖

ಅಡಿಟಿಪ್ಪಣಿಗಳು :

೧) ಮಿರ್ಜಿ ಅಣ್ಣಾರಾಯರು : ನಿಸರ್ಗ ಮುನ್ನುಡಿ : (ರಂ. ಶ್ರೀ. ಮುಗಳಿ) : ಪು.ಸಂ. ೭
೨) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೩೮
೩) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೨೭
೪) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೩೮
೫) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೩೨
೬) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೨, ೩
೭) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೨೦೬, ೨೦೭
೮) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೩೧೮
೯) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೩೨೩
೧೦) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೨೫
೧೧) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೩೭
೧೨) ಮಿರ್ಜಿ ಅಣ್ಣಾರಾಯರು : ನಿಸರ್ಗ : ಪು.ಸಂ. ೧೧೧

ಅಧ್ಯಾಯ : ೫

ಸಮಾರೋಪ

ಅಧ್ಯಾಯ – ೫
ಸಮಾರೋಪ

'ನಿಸರ್ಗ' ಒಂದು ಪ್ರಾದೇಶಿಕ ಕಾದಂಬರಿಯಾಗಿಯೇ ಅಧ್ಯಯನಕ್ಕೆ ಒಳಪಟ್ಟಿದೆ. ಆದರೆ ಅದರ ಜೈನ ಸಂವೇದನೆಗಳ ಒಳನೋಟಗಳತ್ತ ಯಾರೂ ಗಮನ ಹರಿಸಿಲ್ಲ. ಆ ಸಂವೇದನೆಗಳ ಒಳನೋಟಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕೆಂಬ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮಧ್ಯಮ ವರ್ಗದ ಜೈನ ಕುಟುಂಬದಲ್ಲಿ ಜನಿಸಿ ಬೆಳೆದು ಅಪಾರ ಜೈನ ಧರ್ಮದ ಗ್ರಂಥಗಳನ್ನು ಅಭ್ಯಸಿಸಿ ಅವುಗಳಿಗೆ ಸಾಹಿತ್ಯಿಕ ಮೆರುಗನ್ನು ಕೊಟ್ಟ ಬೆರಳೆಣಿಕೆ ಲೇಖಕರಲ್ಲಿ ಅಣ್ಣಾರಾಯರು ಅಗ್ರಗಣ್ಯರು. ಮಧ್ಯಮ ವರ್ಗದ ಜೈನ ಸಂವೇದನೆಗಳನ್ನು 'ನಿಸರ್ಗ'ದಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಜೈನ ಕುಟುಂಬಗಳ ಜೀವನಾಡಿ ಕೃಷಿ. ಕೃಷಿ ಸಂಬಂಧಿತ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರಿಗೆ ಅವರ ಭೂಮಿಯೇ ಮೂಲ ಆಸ್ತಿ. ಈ ಮೂಲ ಆಸ್ತಿಯೇ ಸಾಮಾಜಿಕ ಸಂಬಂಧಗಳ ಕೇಂದ್ರ ನೆಲೆ. ಈ ಕೇಂದ್ರ ನೆಲೆಯಲ್ಲಿ ನಿಂತುಕೊಂಡು ಸಾಮಾಜಿಕ ಸಂಬಂಧಗಳನ್ನು ಜೈನ ಸಮುದಾಯ ನೋಡುತ್ತದೆ. ಅದು ನಿಸರ್ಗದಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲಾಗಿದ್ದು, ಅದರ ಪ್ರಮುಖ ಫಲಿತಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ಅಣ್ಣಾರಾಯರ ಒಟ್ಟು ಕಾದಂಬರಿಗಳು ಕೃಷ್ಣಾ ತೀರ ಪ್ರದೇಶದ ಚಿತ್ರಣಗಳಾಗಿವೆ. ಅಣ್ಣಾರಾಯರ ಸಾಹಿತ್ಯ ಕೃತಿಗಳಲ್ಲಿ ವೈಚಾರಿಕತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಬಯಲು ಸೀಮೆಯ ಗ್ರಾಮಾಂತರ ಅಣ್ಣಾರಾಯರು ಮತ್ತು ರಾವ್‌ಬಹಾದ್ದೂರವರು ಎತ್ತಿದ ಕೈ. ಕೃತಿಯಲ್ಲಿ ಕಾಣುವ ಹಳ್ಳಿಯ ಮುಗ್ಧ ಅಮಾಯಕ ಸಮಾಜದ ಬಗ್ಗೆ ಅಣ್ಣಾರಾಯರಿಗೆ ಕಳಕಳಿ, ಅನುಕಂಪ, ಸಹಾನುಭೂತಿ ಅಪಾರ. ಅವರು ಸೃಷ್ಟಿಸಿದ ಪಾತ್ರಗಳು ಮಾನವೀಯ

ಮೌಲ್ಯಗಳ ಪ್ರತೀಕಗಳಾಗಿವೆ. ಉತ್ತರ ಕರ್ನಾಟಕದ ಹಳ್ಳಿಯ ಲೋಕಾನುಭವ ಅವರ ಕಾದಂಬರಿಯ ಜೀವಾಳ. ಅವರ ಕಾದಂಬರಿಗಳಲ್ಲಿ ಸಾರ್ವತ್ರಿಕತೆ ಮುಖ್ಯವಾಗಿದೆ.

ಜೈನ ಕುಟುಂಗಳು ಕೃಷಿಯೊಂದಿಗೆ ಪಶುಪಾಲನೆಯನ್ನು ರೂಡಿಸಿಕೊಂಡಿವೆ. ಕೃಷಿ ಮತ್ತು ಪಶುಪಾಲನೆ ಅವರ ಆದಾಯದ ಮೂಲ ನೆಲೆಗಳಾಗಿವೆ. ಮಲ್ಲ, ಹೂವಣ್ಣ, ಅಪ್ಪಣ್ಣ ಮತ್ತು ಭರಮ ಎತ್ತುಗಳನ್ನು ಸಾಕಿಕೊಂಡಿದ್ದರು. ಅವುಗಳನ್ನು ಚೆನ್ನಾಗಿ ಮೇಯಿಸಿ ಬೆಳಗಿನ ಜಾವವೇ ಹೂಡಲು ಒಯ್ಯುತ್ತಿದ್ದರು. ದನಕರುಗಳ ಮೇವು ಮತ್ತು ನೀರಿನ ವ್ಯವಸ್ಥೆಯನ್ನು ಹೆಣ್ಣು ಮಕ್ಕಳು ಮಾಡುತ್ತಿದ್ದರು. ಈ ಮೂಲಕ ಮಧ್ಯಮ ವರ್ಗದ ಜೈನ ಕುಟುಂಬಗಳ ಚರಿತ್ರೆಯನ್ನು ಅಣ್ಣಾರಾಯರು ಕಟ್ಟುತ್ತಾರೆ. ಅವರಲ್ಲಿರುವ ಆಶಯ ಮತ್ತು ಮೂಲ ತುಡಿತಗಳನ್ನು ಕಟ್ಟಿಕೊಡುತ್ತಾರೆ.

ಕೃಷಿ ಪ್ರಧಾನ ಮಧ್ಯಮ ವರ್ಗದ ಜೈನ ಕುಟುಂಬಗಳು ಗಂಡು ಮಕ್ಕಳಿಗೂ ಶಿಕ್ಷಣ ನೀಡುತ್ತಿರಲಿಲ್ಲ. ಶಿಕ್ಷಣ ಪಡೆದುಕೊಂಡು ನೌಕರಿಗಾಗಿ ಬೇರೆ ಕಡೆಗೆ ಗಂಡು ಮಕ್ಕಳು ಹೋದರೆ ಅವರು ತಮ್ಮ ಅಂಕಿತದಲ್ಲಿ ಇರಲಾರರು. ಸ್ವತಂತ್ರವಾಗಿ ಸಂಸಾರ ನಡೆಸಿದರೆ ಮುಂದೆ ತಮ್ಮನ್ನು ಯಾರು ನೋಡುತ್ತಾರೆಂಬ ಆತಂಕ. ಅದಕ್ಕಾಗಿ ಅವರನ್ನು ತಮ್ಮಿಂದ ಅಗಲದಂತೆ ಬೆಳೆಸುವರು. ಅವರನ್ನು ತಮ್ಮ ಕಪಿಹಸ್ತದಲ್ಲಿ ಇಟ್ಟುಕೊಳ್ಳುವರು. ಪ್ರತಿಯೊಂದಕ್ಕೂ ತಂದೆ–ತಾಯಿಗಳನ್ನೇ ಅವರು ಆಶ್ರಯಿಸಬೇಕು. ಸರಿ ತಪ್ಪುಗಳನ್ನು ಪ್ರಶ್ನಿಸುವ ಅಧಿಕಾರವಿಲ್ಲ. ಸ್ವತಂತ್ರವಾಗಿ ಆಲೋಚಿಸುವ ಹಾಗೂ ಜೀವನ ನಡೆಸುವ ಸಾಮರ್ಥ್ಯವೇ ಅವರಲ್ಲಿರದು. ಕೈಹಿಡದ ಹೆಂಡತಿಯನ್ನು ಅಗಲುವರು ಹೊರತಾಗಿ ತಾಯಿ–ತಂದೆಗಳನ್ನು ಎಂದಿಗೂ ಬಿಡಲಾರರು. ಮಕ್ಕಳ ಮೇಲೆ ಅತಿಯಾದ ಹಿಡಿತವಿರುವ ತಂದೆ–ತಾಯಿಗಳನ್ನು ವರ್ತಮಾನದ ಸಂದರ್ಭದಲ್ಲಿಯೂ ನೋಡಬಹುದು. ಇಂಥ ಸನ್ನಿವೇಶಕ್ಕೆ ಸಿಲುಕಿ ಪರದಾಡುವ ಮಕ್ಕಳ ಸ್ಥಿತಿಯನ್ನು ಭರಮನ ಪಾತ್ರದ ಹಿನ್ನಲೆಯಲ್ಲಿ ಅಣ್ಣಾರಾಯರು ಚಿತ್ರಿಸಿರುವುದು ಗಮನಾರ್ಹ.

ನಿಸರ್ಗ ಎರಡು ಕುಟುಂಬಗಳ ನಡುವಿನ ಸಂಘರ್ಷದ ಕಥೆ. ಈ ಎರಡೂ ಕುಟುಂಬಗಳು ಸ್ತ್ರೀ ಪ್ರಧಾನ ಕುಟುಂಬಗಳು. ಒಂದು ಕಡೆಗೆ ಚಿಮ್ಮವ್ವ ಮಲ್ಲನ ಭೂಮಿಯನ್ನು ಪಡೆದುಕೊಳ್ಳಲು ನಾನಾ ಕುತಂತ್ರಗಳನ್ನು ಮಾಡುವುದು. ಇನ್ನೊಂದೆಡೆ ರತ್ನವ್ವ ಯಾವುದೇ ಕಾರಣಕ್ಕೂ ಭೂಮಿ ಬಿಟ್ಟು ಕೊಡದಿರುವುದು. ಪುರುಷ ಪಾತ್ರಗಳಾದ ಮಲ್ಲ, ಹೂವಣ್ಣ ಈ ರೀತಿಯ ಯೋಚನೆಗಳನ್ನು ಮಾಡಲಾರರು. ನಮ್ಮದೇ ಸಾಕಷ್ಟು ಆಸ್ತಿ ಇರುವಾಗ ಇನ್ನೊಬ್ಬರ ಹೊಲಮನೆಗೆ ಆಸೆ ಪಡುವುದು ತಪ್ಪು ಎಂದು ಪುರುಷ ಪಾತ್ರಗಳು ಹೇಳಿದಾಗ ಸ್ತ್ರೀ ಪಾತ್ರಗಳು ಕೇಳುವ ಸ್ಥಿತಿಯಲ್ಲಿ ಇರುವುದಿಲ್ಲ.

'ನಿಸರ್ಗ' ಅಪ್ಪಟ ಪ್ರಾದೇಶಿಕ ಕಾದಂಬರಿಯಾಗಲಿಕ್ಕೆ ಮುಖ್ಯ ಕಾರಣ ಅಣ್ಣಾರಾಯರು ಬಳಕೆಯ ನುಡಿಯ ಮೂಲಕ ಸೃಷ್ಟಿಸಿದ ಜೀವಂತ ಪರಿಸರ. ಗಡಿನಾಡ ಮರಾಠಿ ಮಿಶ್ರಿತ ಭಾಷೆ ಜೈನ ಕುಟುಂಬಗಳಲ್ಲಿ ಬಳಕೆಯಲ್ಲಿದೆ. ದೇಸಿ ಶಬ್ದಗಳ ಮೇಲೆ ಮರಾಠಿ ಪ್ರಭಾವ ಅಪಾರ. ಕುವೆಂಪು, ಕಾರಂತರು ತಮ್ಮ ಕಾದಂಬರಿಗಳಲ್ಲಿ ಪ್ರಾದೇಶಿಕ ಭಾಷೆಯನ್ನು ಉಪಯೋಗಿಸಿಕೊಂಡರೆ ಅಣ್ಣಾರಾಯರು ಕೂಡ ಹ್ಯಾಂತಿ, ಕರೀನ, ಅವರ್ನಾ, ಐತಿ, ಬರತೇತಿ, ಎತಕೋತ್ಯಾನಲಾ, ಬೇಡತೇಬೆ, ಆಗದಿರ, ಬಂಯ್ಯಾನ, ತಿಂಯ್ಯಾವ, ಹಾಕಿಳ, ಅಳತೀಳು, ತೋರಿತೆಕ್ಕಾ, ಸುದ್ದಿಲ್ಲ, ಹೋಂದ, ನಡೀನ, ಧವಳಕ್ಕಿ, ಪರಾದ, ಕಾಸಡೇವ, ಕೇಸಲೇರ, ಹುರೂಪ, ದನೀನ, ಬರತೇವಿ, ಬಂದೋತು, ಯಾನ, ದ್ಯಾವರ, ಹರಿವತ್ತ ಇತ್ಯಾದಿ ಪದಗಳನ್ನು ಧಾರಾಳವಾಗಿ ಬಳಸಿದ್ದಾರೆ. ಕೃಷ್ಣಾ ತೀರದ ಜನರ ಆಡುನುಡಿಯ ಸೊಗಡನ್ನು ಹೆಜ್ಜೆ ಹೆಜ್ಜೆಗೆ ಮೂಡಿಸಿ ವಿಸ್ಮಯತೆಯನ್ನು ಉಂಟು ಮಾಡಿದ್ದಾರೆ.

ಜೈನ ಧರ್ಮದ ವಿಶಿಷ್ಟವಾದ ರೀತಿ ರಿವಾಜುಗಳನ್ನು ಅಣ್ಣಾರಾಯರು ಮದುವೆ ಮಂಟಪದ ಮಕರದಿಂದಲೇ ಪ್ರಾರಂಭಿಸಿದ್ದಾರೆ. ಜೈನ ಸಂಪ್ರದಾಯದ ಪಾರಿಭಾಷಿಕ ಪದಗಳನ್ನು ಬಳಸಿರುವುದೇ ವಿಶೇಷ. ಜೈನ ಕುಟುಂಬಗಳ ಮಡಿವಂತಿಕೆ, ಜಾತಿ ಪ್ರಧಾನ ಮನೋಭಾವವನ್ನು ಅಣ್ಣಾರಾಯರು ನಿಸ್ಸಂಕೋಚವಾಗಿ ತೆರೆದಿಡುತ್ತಾರೆ. ಪ್ರತಿದಿನ ಜಿನಮಂದಿರಕ್ಕೆ ಹೆಣ್ಣು ಮಕ್ಕಳು ಹೋಗಬೇಕು. ಧರ್ಮದಿಂದ ನಡೆದರೆ ಎಲ್ಲ ಸಂಪತ್ತೂ ಸಿಕ್ಕುವುದೆಂಬ ಭಾವನೆ.

ಹೆಣ್ಣು ಮಕ್ಕಳು ಮದುವೆಯಾಗಿ ಬೇರೆ ಮನೆಗೆ ಹೋಗುವುದರಿಂದ ಜೈನ ಕುಟುಂಬಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಪರಪುರುಷರ ಜೊತೆ ಮಾತನಾಡುವುದು ನಿಷೇದ. ಕತ್ತು ಎತ್ತಿ ಅಲೆದಾಡುವಹಾಗಿಲ್ಲ. ಮನೆಯಲ್ಲಿ ಗಂಡಸರು ಊಟ ಮಾಡಿದ ಮೇಲೆ ಹೆಣ್ಣು ಮಕ್ಕಳು ಊಟ ಮಾಡುವುದು, ಮದುವೆಗೆ ಮೊದಲು ತಂದೆ-ತಾಯಿಯ ಆಧೀನದಲ್ಲಿ, ಮದುವೆಯ ನಂತರ ಅತ್ತೆಯ ಆಧೀನದಲ್ಲಿ ಇರಬೇಕಾದ ಸಂಗತಿಗಳನ್ನು ಪ್ರಸ್ತಾಪಿಸುತ್ತಾರೆ.

ಆಸ್ತಿ, ಸಂಪತ್ತುಗಳಿಗೆ ಅತಿಯಾಸೆ ಪಡುವುದರಿಂದ ರಕ್ತ ಸಂಬಂಧಗಳು ಹೇಗೆ ದೂರಾಗುತ್ತವೆ ಎಂಬುದನ್ನು 'ನಿಸರ್ಗ'ದಲ್ಲಿ ಚಿಮ್ಮವ್ವನ ಪಾತ್ರದ ಮೂಲಕ ಕಂಡುಕೊಳ್ಳುತ್ತೇವೆ. ಸೊಸೆಯ ಆಸ್ತಿಗೆ ಆಸೆಪಟ್ಟು ಮಗ, ಸೊಸೆಯನ್ನು ಕೂಡಲಿಕ್ಕೆ ಬಿಡದಿರುವುದು, ಆಸ್ತಿ ಬರುವವರೆಗೆ ಸೊಸೆಗೆ ಚಿತ್ರಹಿಂಸೆ ಕೊಡುವುದು, ಹೊಟ್ಟೆ ತುಂಬ ಒಳ್ಳೆಯ ಆಹಾರ ಕೊಡದಿರುವುದು, ಮನೆಯಲ್ಲಿ ಏನಾದರೂ ಕೇಡು ಸಂಭವಿಸಿದರೆ ಸೊಸೆಯನ್ನೇ ದೂರುವುದು, ಸಿಟ್ಟಿನಿಂದ ಆಕೆಯನ್ನು ಹೊಡೆಯುವುದು, ಮಗನೊಂದಿಗೆ ಮಾತನಾಡುವುದನ್ನು ಸಹಿಸಲಿಕ್ಕಾಗದಿರುವುದು, ಬಂಜೆ ಎಂದು ಅವಹೇಳನ ಮಾಡುವುದು, ಸಂಶಯಾಸ್ಪದವಾಗಿ ಸೊಸೆಯನ್ನು ಕಾಣುವುದು, ಆಕೆಯ ತಂದೆ-ತಾಯಿಯರನ್ನು ದೂರುವುದು, ಅತ್ತೆ

ನೀಡಿದ್ದನ್ನಷ್ಟೇ ತಿಂದುಂಡು ಇರಬೇಕಾದ ಪ್ರಸಂಗಗಳನ್ನು ಅಣ್ಣಾರಾಯರು ಕಲೆ ಹಾಕಿದ್ದಾರೆ. ಆಕಸ್ಮಾತ್ ಮಗ ಏನಾದರೂ ಆಕೆಗೆ ವಿರುದ್ಧವಾಗಿ ನಡೆದುಕೊಂಡರೆ ಸೊಸೆಯನ್ನು, ಆಕೆಯ ತವರು ಮನೆಯವರನ್ನು ದೂರುವ ಪ್ರಸಂಗಗಳನ್ನು ಮನೋಜ್ಞವಾಗಿ ಚಿತ್ರಿಸುತ್ತಾರೆ.

ಅನಾದಿ ಕಾಲದಿಂದಲೂ ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಸ್ತ್ರೀಯು ಅಬಲೆಯಾಗಿ ಗಂಡ, ಅತ್ತೆ, ಮಾವಂದಿರ ಪಡಿನೆರಳಿನಲ್ಲಿ ಬೆಳೆಯುವ ಹೂವಾಗಿದ್ದಾಳೆ. ಚಿಕ್ಕಂದಿನಲ್ಲಿ ತಂದೆ-ತಾಯಿ ಆಶ್ರಯು, ಮದುವೆಯಾದಾಗ ಗಂಡನ ಆಶ್ರಯು, ಮುಪ್ಪಾವಸ್ಥೆಯಲ್ಲಿ ಮಕ್ಕಳ ಆಶ್ರಯವನ್ನು ಪಡೆದು, ಸ್ವತಂತ್ರ ಬದುಕಿನಿಂದ ಒಂದು ಹೆಣ್ಣನ್ನು ದೂರವಿಡುವ ಪದ್ಧತಿಯನ್ನು ನಿಸರ್ಗ ಕಾದಂಬರಿ ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತದೆ. ಜೊತೆಗೆ ಮಹಿಳಾ ಸಬಲೀಕರಣಕ್ಕೆ ಒತ್ತು ಕೊಟ್ಟಿದೆ. ಅತ್ತೆಯಿಂದ ಸೊಸೆಯಂದಿರು ಪಡುವ ಪಾಡನ್ನು ಅಣ್ಣಾರಾಯರು ಬಿಂಬಿಸುತ್ತಾರೆ. ಆಸ್ತಿ ದೊರೆಯದೆಂದು ಗೊತ್ತಾಗಿ ತನ್ನ ಸೋದರ ಸೊಸೆ ಎಂಬುದನ್ನು ಮರೆತು ಮಗನಿಗೆ ಮತ್ತೊಂದು ಮದುವೆ ಮಾಡುವ ವಿಚಾರಗಳನ್ನು ನೋಡಿದಾಗ ಪ್ರಾಚೀನ ಸಮಾಜದಲ್ಲಿನ ಹೆಣ್ಣಿನ ದುರ್ಗತಿಯನ್ನು ಲೇಖಕರು ತಾರೆಯ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಆದರೆ ತಾಯಿಯ ಅವಗುಣಗಳನ್ನೆಲ್ಲ ಅರಿತ ಮಗ ಎರಡನೆಯ ಹೆಂಡತಿ ಬಂದ ಮೇಲೆ ತಾಯಿಯಿಂದ ತನ್ನ ಸಂಸಾರಕ್ಕೆ ತೊಂದರೆಯಾಗುಬಹುದೆಂದು ತಿಳಿದು ಆಕೆಯನ್ನು ಮನೆಯಿಂದ ಹೊರಗೆ ಹಾಕುವ ಪ್ರಸಂಗವನ್ನು ಬಿಂಬಿಸಿರುವ ಅಣ್ಣಾರಾಯರು ವಾಸ್ತವ ಸಮಾಜದಲ್ಲಿ ಕಂಡು ಬರುವ ಆಗುಹೋಗುಗಳನ್ನು ಕಲೆ ಹಾಕುವುದರ ಜೊತೆಗೆ ದುಷ್ಟ ಕೆಲಸ ಮಾಡುವವರಿಗೆ ತಡವಾಗಿಯಾದರೂ ಶಿಕ್ಷೆ ದೊರೆಯುತ್ತದೆ ಎಂಬ ಸಂದೇಶವನ್ನು ಸ್ಪಷ್ಟವಾಗಿ ತೋರ್ಪಡಿಸಿದ್ದಾರೆ.

ಅಣ್ಣಾರಾಯರು ಒಬ್ಬ ಶ್ರೇಷ್ಠ ಮನೋಶಾಸ್ತ್ರಜ್ಞರಾಗಿದ್ದರು. ಶ್ರೀಯುತರ ಒಟ್ಟು ಸಾಹಿತ್ಯವನ್ನು ನೋಡಿದಾಗ ಈ ಮಾತು ದಿಟವೆನಿಸದೇ ಇರದು. ಈ ಬಗ್ಗೆ ಶ್ರೀಯುತರ ಕಾದಂಬರಿಯಲ್ಲಿ ಸಾಕಷ್ಟು ನಿದರ್ಶನಗಳು ಕಂಡು ಬರುತ್ತವೆ. ಅಣ್ಣಾರಾಯರು ಪ್ರತಿಯೊಂದು ಪಾತ್ರಗಳ ಒಳಹೊಕ್ಕು ಅಲ್ಲಿಯ ಸಂವೇದನೆಗಳನ್ನು ಬಯಲಿಗೆಳೆಯುತ್ತಾರೆ. ಅವುಗಳನ್ನು ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಸಿಗ್ಮಂಡ ಪ್ರಾಯ್ಡ್ ಮತ್ತು ಯೂಂಗರ ಸಿದ್ಧಾಂತಗಳನ್ನು ಅಣ್ಣಾರಾಯರಲ್ಲಿ ಕಾಣಬಹುದು. ವ್ಯಕ್ತಿಯಲ್ಲಿ ಅಡಗಿದ ನಿಸರ್ಗ ಸಹಜ ಲೈಂಗಿಕ ಪ್ರವೃತ್ತಿಗಳನ್ನು ತಡೆಯುವುದು ಅಸಾಧ್ಯ ಎಂಬುದನ್ನು ಸಿದ್ಧ ಮಾಡಿಸಿ ತೋರಿಸುತ್ತಾರೆ. ಅನಂತ ತಾರೆಯರು ವಿವಾಹ ಬಂಧನವನ್ನು ಮರೆತು ಅನೈತಿಕವಾಗಿ ಒಂದಾಗುವುದು ನಿಸರ್ಗದ ಮಡಿಲಲ್ಲಿಯೇ ಎಂಬುದನ್ನು ಒತ್ತುಕೊಟ್ಟು ಹೇಳುತ್ತಾರೆ. ವ್ಯಕ್ತಿ ಎಷ್ಟೋ ಸಲ ತನ್ನ ತಪ್ಪುಗಳನ್ನು ತಿದ್ದಿಕೊಳ್ಳಲಿಕ್ಕೆ ಪ್ರಯತ್ನಪಟ್ಟರೂ ಆ ತಪ್ಪುಗಳಿಂದ ಹೊರಬರಲಿಕ್ಕೆ ಸಾಧ್ಯವಾಗದ ಪ್ರಸಂಗಗಳನ್ನು ಚಿತ್ರಿಸುತ್ತಾರೆ.

ತಾರೆ ಮತ್ತು ಅನಂತ ಪ್ರೇಮವನ್ನು ಅರಿಯದ ಈ ಸಮಾಜ ಜೀವನದುದ್ದಕ್ಕೂ ಅವರನ್ನು ಅತೃಪ್ತರನ್ನಾಗಿಸುತ್ತದೆ. ಸಮಾಜದಲ್ಲಿಯೇ ತಾವು ಬದುಕಬೇಕಾದ್ದರಿಂದ ತಮ್ಮ ಹೃದಯದಾಳದಲ್ಲಿ ಅಡಗಿದ ಪ್ರೇಮವನ್ನು ಯಾರಿಗೂ ಪ್ರಸ್ತಾಪಿಸುವುದೇ ಇಲ್ಲ. ಅವರ ಪ್ರೇಮವನ್ನು ಸಮಾಜ ಒಪ್ಪಿಕೊಳ್ಳುತ್ತಲೇ ಇರಲಿಲ್ಲ. ಆದ್ದರಿಂದ ಅವರ ಪ್ರೇಮ ಗುಪ್ತವಾಹಿನಿಯಾಗಿ ಹರಿಯುತ್ತದೆ. ತಮ್ಮ ಪ್ರೇಯವನ್ನು ಮರೆಯಲಿಕ್ಕೂ ಆಗದೇ, ಕೂಡಿ ಬಾಳಲೂ ಸಾಧ್ಯವಾಗದೇ ಆ ಪ್ರೇಮಿಗಳು ಅನುಭವಿಸಿದ ಮೂಕವೇದನೆಯನ್ನು ಅಣ್ಣಾರಾಯರು ಚಿತ್ರಿಸುತ್ತಾರೆ. ಅಣ್ಣಾರಾಯರ ಸಾಹಿತ್ಯ ಕಲ್ಪನೆಯಿಂದ ಮೂಡಿ ಬಂದುದ್ದಲ್ಲ, ಅದು ಅನುಭವದ ರಸಪಾಕ. ಸಾರ್ವತ್ರಿಕವಾದ ಸಮಸ್ಯೆಗಳನ್ನೇ ಕಾದಂಬರಿಯಲ್ಲಿ ಬಿಂಬಿಸಿದ್ದಾರೆ. ಪ್ರೇಮಿಸಿದ ಈ ಎರಡೂ ಜೀವಗಳು ದೂರಾಗುವುದರಿಂದ ಆಗುವ ಅನಾಹುತಗಳನ್ನು ಕಾದಂಬರಿಯುದ್ದಕ್ಕೂ ಕಾಣಬಹುದು.

ತಂದೆ-ತಾಯಿಯು ತಮ್ಮ ಏಕೈಕ ಮಗಳನ್ನು ಇದ್ದೂರಲ್ಲಿ ತಮ್ಮ ಕಣ್ಣ ಮುಂದೆಇರಲೆಂದು ರಕ್ತ ಸಂಬಂಧದಲ್ಲಿ ಕೊಡವರು. ಆದರೆ ರಕ್ತ ಸಂಬಂಧಗಳನ್ನೆಲ್ಲ ಮೀರಿದ್ದು ಆಸ್ತಿ ಎಂಬ ಪಿಶಾಚಿ. ಆಸ್ತಿ ಆಸೆಗಾಗಿ ಕ್ರೂರವಾಗಿ ಮಗಳನ್ನು ನಡೆಯಿಸಿಕೊಳ್ಳುವ ಅತ್ತೆಯನ್ನು ನೋಡಿ ಕಣ್ಣೀರಲ್ಲಿ ಕೈ ತೊಳೆಯುವ ಪ್ರಸಂಗವನ್ನು ಕರುಣಾಜನಕವಾಗಿ ಚಿತ್ರಿಸುತ್ತಾರೆ. ಬಾಲ್ಯದಲ್ಲಿ ಮದುವೆ ಮಾಡಿದ್ದರಿಂದ ಮಗಳಿಗೆ ಬಂದೆರಗಿದ ದುಃಸ್ಥಿತಿಯನ್ನು ಕಂಡು ಮರುಗುತ್ತಾರೆ. ಮಗಳ ಮನಸ್ಸಿನಲ್ಲಿ ಏನಿದೆ? ಆಕೆಯ ಇಷ್ಟನಷ್ಟಗಳು ಏನು? ಎಂಬುದನ್ನು ಯೋಚಿಸಲಾರದೇ ಮಗಳ ಜೀವನ ಚೆನ್ನಾಗಿರಲೆಂದು ಎರಡನೇ ಮದುವೆ (ಉಡಿಕೆ) ಮಾಡಿ ಮತ್ತೆ ಆಕೆಯನ್ನು ಪ್ರಪಾತಕ್ಕೆ ತಳ್ಳುವ ಪ್ರಸಂಗವನ್ನು ಅಭಿವ್ಯಕ್ತಪಡಿಸುತ್ತಾರೆ.

ಅಣ್ಣಾರಾಯರು ನಿಸರ್ಗ ಕಾದಂಬರಿಯಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿರುವ ಅಂಶಗಳಲ್ಲಿ ಜೈನ ಧರ್ಮಿಯರ ಒಳತುಡಿತ ಮತ್ತು ಆಚಾರ-ವಿಚಾರ, ಸಂಸ್ಕೃತಿ-ಸಂಪ್ರದಾಯಗಳನ್ನು ಕಾಣಬಹುದು. ಮದುವೆಯಾಗಿ ಸೊಸೆ ಹೊಸದಾಗಿ ಮನೆಗೆ ಬಂದಾಗ ಉಂಡಿ, ಬಾಳೆಹಣ್ಣುಗಳನ್ನು ಊರಿಗೆಲ್ಲ ಹಂಚುವುದು, ಮಗಳು ಬಸಿರಾದಾಗ ಹನ್ನೆರಡು ತರದ ಪಕ್ವಾನ ಮಾಡಿಸಿ ಬಯಕೆಯೂಟ, ಹಸಿರು ಕುಬುಸ ಮುಂತಾದ ಕಾರ್ಯಗಳನ್ನು ಮಾಡುವ ಜೈನ ಸಂಪ್ರದಾಯಗಳ ಚಿತ್ರಣ ನಿಸರ್ಗಕ್ಕೆ ಮೆರಗನ್ನು ತಂದುಕೊಟ್ಟಿದೆ. ಸ್ಥಿತಿವಂತ ಜೈನರ ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದ ಆಳುಗಳನ್ನು ಆಳುಗಳೆಂದು ತಿಳಿಯದೇ ತಮ್ಮ ಮಕ್ಕಳಂತೆ ಕಾಣುವ ಭಾವನೆಯನ್ನು ತಾರಕ್ಕನ ಪಾತ್ರದಲ್ಲಿ ಅಣ್ಣಾರಾಯರು ಕಟ್ಟಿಕೊಡುತ್ತಾರೆ. ತಮ್ಮ ಮನೆಯಲ್ಲಿ ತಾವು ತಿನ್ನುವ ಆಹಾರವನ್ನೇ ಆಳುಗಳಿಗೆ ಕೊಡುವಳು. ಆಳುಗಳಿಗೆಲ್ಲ ತಾರೆ ಅಕ್ಕರೆಯ ಒಡತಿಯಾಗಿದ್ದಳು.

ಕಾದಂಬರಿಯ ಹೆಸರೇ ಸೂಚಿಸಿದಂತೆ ನಿಸರ್ಗದ ನಿಯಮಗಳ ಮುಂದೆ ಮನುಷ್ಯ ಸಹಜವಾದ ಒಬ್ಬ ಜಾಣನಾಗಿ ಕಂಡರೂ ನಿಸರ್ಗದ ನಿಯಮಗಳನ್ನು ಮೀರುವ ಒಬ್ಬ

ದಡ್ಡನಾಗಿಯೂ ಕಾಣುತ್ತಾನೆ. ಆದರೆ ಇಲ್ಲಿ ಜೈನರ ಆಚಾರ-ವಿಚಾರಗಳ ಸುತ್ತ ಕಾದಂಬರಿ ಲಾಸ್ಯವಾಡಿದೆ. ಸಂತೆಗೆ ಅಥವಾ ಹೊಸ್ತಿಲನ್ನು ದಾಟಿ ಹೊರಗೆ ಹೋಗಿ ಬಂದರೆ ಮೈಲಿಗೆಯಾಗುವದೆಂಬ ಪರಿಕಲ್ಪನೆ, ಒಂದು ಹೆಣ್ಣು ನಿಸರ್ಗವೇ ಇಟ್ಟ ಕ್ರಿಯೆಯಂತೆ ಋತುಮತಿಯಾದಾಗ ಅದು ಮಡಿವಂತಿಕೆ ಎಂಬ ಭಾವ. ಹಾಗೆಯೇ ಹೊಸದಾಗಿ ಮದುವೆಯಾದ ಒಂದು ಹೆಣ್ಣು ತನ್ನ ಗಂಡನ ಮನೆಗೆ ಹೋಗುವ ಸಂದರ್ಭದಲ್ಲಿ ಉಡಿ ತುಂಬುವ ಸಂಪ್ರದಾಯ ಹಾಗೂ ಸೊಸೆಯಾದವಳು ಸೂರ್ಯ ಮುಳುಗುವುದರ ಒಳಗೆ ಅತ್ತೆಯ ಅನುಮತಿ ಪಡೆದು ಅಡುಗೆ ಮಾಡಿ ಶಾಸ್ತ್ರೋಕ್ತವಾಗಿ ಹ್ವಾಸಕ್ಕೆ ತಯಾರು ಮಾಡಬೇಕೆಂಬ ನೀತಿ-ನಿಯಮಗಳನ್ನು ನೋಡಿದಾಗ ಕಾದಂಬರಿಕಾರರು ತಮ್ಮ ಕಾದಂಬರಿಯಲ್ಲಿ ಇವುಗಳ ಸೂಕ್ಷ್ಮ ಮತ್ತು ಸೂಚ್ಯವಾದ ಅಂಶಗಳಿಂದ ಮತ್ತು ಕೆಲವು ಪ್ರಮುಖ ಪಾತ್ರಗಳಿಂದ ಇವುಗಳನ್ನು ತೋರಲು ಇಚ್ಛಿಸಿದ್ದಾರೆ.

ಕಾದಂಬರಿಕಾರರು ಮುಂದುವರೆದು ಜೈನ ಸಂವೇದನೆಗಳ ಒಳತುಡಿತಗಳ ಜೊತೆಗೆ ಅನಿವಾರ್ಯವಾಗಿ ಮತ್ತು ಅಸಹಾಯಕರಾಗಿ ಕೆಲವು ಆಚರಣೆ-ಸಂಪ್ರದಾಯಗಳ ಬೇಲಿಯನ್ನು ದಾಟುವುದನ್ನು ಕೂಡ ವಿಶ್ಲೇಷಿಸುತ್ತ ಸಮಾಜದ ಇನ್ನೊಂದು ಮುಖವನ್ನು ತೋರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಾದಂಬರಿಕಾರರು ನೋಪಿಯ ವ್ರತಾಚರಣೆಯನ್ನು ಪಾಲಿಸುವಲ್ಲಿ ಮಧ್ಯಮ ವರ್ಗದ ಜೈನ ಕುಟುಂಬಗಳು ಯಾವ ರೀತಿಯಾಗಿ ಧಾರ್ಮಿಕ ಚೌಕಟ್ಟನ್ನು ಮೀರಿ ಅಸಹಾಯಕರಾಗಿ ಬದುಕುತ್ತಿರುವುದರ ಜೊತೆಗೆ ಕೆಲವು ಸಂಸ್ಕಾರಗಳನ್ನೇ ಸಹಜವಾಗಿ ಬಿಡುವ ಹಿನ್ನೆಲೆಯನ್ನು ಚಿತ್ರಿಸಿದ್ದಾರೆ. ಹಾಗೆಯೇ ನೀರನ್ನು ಶುದ್ಧೀಕರಿಸಿ ಕುಡಿಯುವುದು, ಮಡಿಯುಟ್ಟು ಆಹಾರವನ್ನು ತಯಾರಿಸುವುದು ಹಾಗೂ ಮಿಥ್ಯಾ ದೇವತಾ ಆರಾಧನೆ ಗೈದು ತನ್ನ ವಂಶವಾಹನಿಯಾಗಿ ಬಂದ ಭಕ್ತಿಯಿಂದ ಮುಕ್ತಿಯ ಕಡೆಗೆ ಕರೆದೊಯ್ಯುವ ಧರ್ಮದ ದೇವತೆಗಳನ್ನು ಮರೆಯುವದು, ಆಚರಣೆಗಳಲ್ಲಿ ಎಡಹುವುದು, ಇವೆಲ್ಲ ಕಾದಂಬರಿಯಲ್ಲಿ ಸಹಜವಾಗಿ ಮೂಡಿ ಬಂದಿವೆ. ಮನುಷ್ಯ ತನ್ನ ವೈಯಕ್ತಿಕ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಜಾತಿ ಹಾಗೂ ಧರ್ಮವು ವಿಧಿಸಿರುವ ಕಟ್ಟಳೆಗಳನ್ನು ಮೀರಲೂ ಕೂಡ ಹಿಂಜರಿಯುವುದಿಲ್ಲ ಎಂಬುದನ್ನು ಅಣ್ಣಾರಾಯರು 'ನಿಸರ್ಗ'ದಲ್ಲಿ ಹೇಳಿದ್ದಾರೆ.

ಕಾದಂಬರಿಕಾರರು ಚಿತ್ರಿಸಿರುವ ಕೆಲವು ಸ್ತ್ರೀ ಪಾತ್ರಗಳಾದ ತಾರೆ, ರತ್ನವ್ವ, ಚಿಮ್ಮವ್ವ, ಸುಂದರಾಬಾಯಿ, ಇಂದಿರೆ, ಅಮ್ಮವ್ವ, ಚಾಂಗಲವ್ವರ ವಿಭಿನ್ನ ವ್ಯಕ್ತಿತ್ವವನ್ನು ಕಟ್ಟಿಕೊಡುವುದರ ಜೊತೆಗೆ ಸಾಂಪ್ರದಾಯಿಕ ಮತ್ತು ಧಾರ್ಮಿಕ ಹಿನ್ನೆಲೆಗಳಲ್ಲಿ ಅವರೊಳಗೆ ಹುದುಗಿದ್ದ ಒಳಿತನ್ನು ಮತ್ತು ಕೆಡಕಿನ ಚಿತ್ರಣಗಳನ್ನು ಜೊತೆ-ಜೊತೆಯಾಗಿ ನೀಡಿದ್ದಾರೆ. ನಾಯಕ ಅನಂತ ಮತ್ತು ನಾಯಕಿ ತಾರೆ ಇವರ ಜೊತೆಗೆ ಪೋಷಕ ಪಾತ್ರಗಳನ್ನು ನಿರ್ಮಿಸಿ

ಪಾತ್ರಗಳ ಮೂಲಕ ಸ್ವತಃ ಕಾದಂಬರಿಕಾರರೇ ಮಾತನಾಡುವುದನ್ನು ಚಿಕಿತ್ಸಕ ದೃಷ್ಟಿಕೋನದಿಂದ ನೋಡಿದಾಗಿ ಸ್ಪಷ್ಟವಾಗಿ ಎದ್ದು ಕಾಣುತ್ತದೆ.

ತಾರೆ ಮತ್ತು ಅನಂತನ ಮಧ್ಯದ ಪ್ರೀತಿಯು ನಿಸರ್ಗದ ನಿಯಮಗಳಿಗೆ ಒಮ್ಮೆ ಪೂರಕವಾಗಿ ಮಗದೊಮ್ಮೆ ನಿಸರ್ಗವನ್ನೇ ಹಿಂಸಿಸುವ ಪರಿಯನ್ನು ನಾವಿಲ್ಲಿ ದ್ವಂದ್ವರೂಪದಲ್ಲಿ ಕಾಣಬಹುದು.

ಒಟ್ಟಿನಲ್ಲಿ ಮಿರ್ಜಿ ಅಣ್ಣಾರಾಯರು ನಿಸರ್ಗದ ಕಾದಂಬರಿಯ ಕೆಲವು ಪಾತ್ರಗಳ ಮೂಲಕ ಮನುಷ್ಯ ವಾಸ್ತವತೆ ಮತ್ತು ವೈಜ್ಞಾನಿಕ, ವೈಚಾರಿಕತೆಗಳ ಮನೋಧರ್ಮಗಳ ಹಿನ್ನೆಲೆಯಲ್ಲಿ ಸಂಪ್ರದಾಯವನ್ನು ಯಾವ ರೀತಿಯಾಗಿ ಸ್ವೀಕರಿಸಿದ್ದಾನೆ ಎಂಬುದನ್ನು ವಿಷದಪಡಿಸಿದ್ದಾರೆ. ಒಬ್ಬ ಜೈನ ಧರ್ಮಿಯವನಾಗಿ ಜೈನ ಧರ್ಮದಲ್ಲಿನ ಒಳಿತನ್ನು ಹೇಳುವುದರ ಜೊತೆಗೆ ಮುಲಾಜಿಲ್ಲದೇ ಧರ್ಮಿಷ್ಠರಂತೆ ವರ್ತಿಸದೇ ಜೈನ ಧರ್ಮದ ಕೆಲವು ಓರೆಕೋರೆಗಳನ್ನು ಅನಿಷ್ಟ ಸಂಪ್ರದಾಯಗಳನ್ನು ಅಮಾನವೀಯ ಮುಖವಾಡಗಳನ್ನು ಬಿಚ್ಚಿಟ್ಟು ಖಂಡಿಸುವ ಅವರ ಎದೆಗಾರಿಕೆ ಮೆಚ್ಚಲೇಬೇಕಾಗುತ್ತದೆ.

❖❖❖❖❖

ಅನುಬಂಧ

ಅನುಬಂಧ – ೧

ಅಣ್ಣಾರಾಯರ ಪ್ರಕಟಿತ ಪುಸ್ತಕಗಳು

ಕ್ರ.ಸಂ	ಕೃತಿ ಹೆಸರು	ಪ್ರಕಾಶಕರು	ಪ್ರ. ವರ್ಷ
	ಕಾದಂಬರಿಗಳು :		
೧	ನಿಸರ್ಗ	ಮನೋಹರ ಗ್ರಂಥಮಾಲೆ, ಧಾರವಾಡ.	೧೯೪೫
		ಗೀತಾ ಬುಕ್ ಹೌಸ್, ಮೈಸೂರು.	೧೯೬೨
		ಪತ್ರ	೧೯೭೨
		ಕರ್ನಾಟಕ ಸರ್ಕಾರ ವಿಶ್ವ ಕನ್ನಡ ಸಮ್ಮೇಳನ ಸಂದರ್ಭ	೧೯೮೨
		ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.	೨೦೧೩
೨	ರಾಷ್ಟ್ರ ಪುರುಷ	ಮನೋಹರ ಗ್ರಂಥಮಾಲೆ, ಧಾರವಾಡ.	೧೯೪೭
೩	ಪ್ರತಿ ಸರಕಾರ	ಲಲಿತ ಸಾಹಿತ್ಯ ಮಾಲೆ, ಧಾರವಾಡ.	೧೯೪೭
೪	ರಾಮಣ್ಣ ಮಾಸ್ತರರು	ಕಲ್ಪನಾ ಪ್ರಕಾಶನ, ಹುಬ್ಬಳ್ಳಿ.	೧೯೪೮
೫	ಅಶೋಕ ಚಕ್ರ	ಉಷಾ ಸಾಹಿತ್ಯ ಮಾಲೆ, ಮೈಸೂರು.	೧೯೪೯
೬	ಭಸ್ಮಾಸೂರ	–	–
೭	ಶ್ರೇಯಾಂಸ ಭಾಗ–೧ ಭಾಗ–೨	ವಾಹಿನಿ ಪ್ರಕಾಶನ, ಬೆಂಗಳೂರು.	೧೯೫೪ ೧೯೫೫
೮	ಸಾಮ್ರಾಟ ಶ್ರೇಣಿಕ	ಶ್ರೀ ಚಂದ್ರಗಂಗಾ ಜ್ಞಾನ ಪೀಠ, ಸೇಡಬಾಳ.	೧೯೫೪
		ಅಜಿತ ಪ್ರಕಾಶನ, ಬೆಳಗಾವಿ	೧೯೮೦
೯	ಎರಡು ಹೆಜ್ಜೆ	ಅಜಿತ ಪ್ರಕಾಶನ, ಬೆಳಗಾವಿ	೧೯೬೦
೧೦	ಹದಗೆಟ್ಟ ಹಳ್ಳಿ	ಪ್ರತಿಭಾ ಗ್ರಂಥಮಾಲೆ, ಧಾರವಾಡ.	೧೯೬೫

ಕ್ರ.ಸಂ	ಕೃತಿ ಹೆಸರು	ಪ್ರಕಾಶಕರು	ಪ್ರ. ವರ್ಷ
೧೧	ಚಾವುಂಡರಾಯ	ಶ್ರೀ ಚಂದ್ರಗಂಗಾ ಜ್ಞಾನಪೀಠ, ಸೇಡಬಾಳ.	೧೯೮೪
೧೨	ಸಿದ್ಧಚಕ್ರ	ಪ್ರತಿಭಾ ಗ್ರಂಥಮಾಲೆ, ಧಾರವಾಡ.	೧೯೮೪
	ಸಣ್ಣಕತೆ :		
೧	ಪ್ರಣಯ ಸಮಾಧಿ	ಪ್ರತಿಭಾ ಗ್ರಂಥಮಾಲೆ, ಧಾರವಾಡ.	೧೯೪೮
೨	ವಿಜಯಶ್ರೀ	ಶಾಂತಿ ಸೇವಾ ಸದನ, ಸೇಡಬಾಳ.	೧೯೫೦
೩	ಅಮರ ಕಥೆಗಳು	ಸನ್ಮತಿ ಪ್ರಕಾಶನ, ಬಾಹುಬಲಿ (ಜಿ. ಕೊಲ್ಹಾಪುರ)	೧೯೫೯
	ಮಕ್ಕಳ ಸಾಹಿತ್ಯ :		
೧	ಭಗವಾನ ಮಹಾವೀರ	ಸಮಾಜ ಶಿಕ್ಷಣ ಪ್ರಸಾರಕ ಗ್ರಂಥಮಾಲೆ, ಬೆಳಗಾವಿ.	೧೯೫೫
		ಭಗವಾನ ಮಹಾವೀರ ೨೫೦೦ನೇ ನಿರ್ವಾಣ ಮಹೋತ್ಸವ ಸಮಿತಿ, ಬೆಂಗಳೂರು.	೧೯೮೬
೨	ಮಹಮ್ಮದ ಪೈಗಂಬರರು	ಬಾಬಾಗೌಡ ಬುಜಗೌಡ ಗ್ರಂಥ ಪ್ರಕಾಶನ, ಸಾಂಗಲಿ.	೧೯೫೬
೩	ಬುದ್ಧನ ಕಥೆ	ಪ್ರತಿಭಾ ಗ್ರಂಥ ಮಾಲೆ, ಧಾರವಾಡ.	೧೯೫೬
೪	ನನ್ನ ಮಗುವಿನ ಶಾಲೆ	ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.	೧೯೬೭
೫	ಶ್ರೀಕ್ಷೇತ್ರ ಧರ್ಮಸ್ಥಳ	ಇಂಡಿಯಾ ಬುಕ್ ಹೌಸ್, ಬೆಂಗಳೂರು.	೧೯೮೨
	ವ್ಯಕ್ತಿ ಚಿತ್ರಗಳು :		
೧	ಶ್ರೀಶಾಂತಿ ಸಾಗರ	ಶಾಂತಿ ಸೇವಾ ಸದನ, ಸೇಡಬಾಳ.	೧೯೫೪
೨	ಭಾರತದ ಬೆಳಕು	ಶಾಂತಿ ಸೇವಾ ಸದನ, ಸೇಡಬಾಳ.	೧೯೫೫
೩	ಖಾರವೇಲ	ಬಾಬಾಗೌಡ ಬುಜಗೌಡ ಗ್ರಂಥ ಪ್ರಕಾಶನ, ಸಾಂಗಲಿ.	೧೯೫೫

ಕ್ರ.ಸಂ	ಕೃತಿ ಹೆಸರು	ಪ್ರಕಾಶಕರು	ಪ್ರ. ವರ್ಷ
೪	ಮಹಾಪುರುಷ	ವಿವೇಕಾಭ್ಯುದಯ ಗ್ರಂಥ ಮಾಲೆ, ಮಂಗಳೂರು.	೧೯೫೬
೫	ಪ್ರಿಯದರ್ಶಿ	ಶಾಂತಿಸೇವಾ ಸದನ, ಸೇಡಬಾಳ.	೧೯೬೦
೬	ತೀರ್ಥಂಕರ ಮಹಾವೀರ	ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ.	೧೯೬೩
೭	ಮಹಾಮುನಿ	ಶ್ರೀ ಚಂದ್ರ-ಗಂಗಾ ಜ್ಞಾನಪೀಠ, ಸೇಡಬಾಳ.	೧೯೭೧
೮	ಆದಿ ತೀರ್ಥಂಕರ ಋಷಭದೇವ	ವಿವೇಕೋದಯ ಗ್ರಂಥಮಾಲೆ, ಗುಡಿಬಂಡೆ	೧೯೭೧
	ವಿಮರ್ಶೆ		
೧	ದತ್ತವಾಣಿ	ಮನೋಹರ ಗ್ರಂಥಮಾಲೆ, ಧಾರವಾಡ.	೧೯೪೬
೨	ಲೇಖನಕಲೆ	ಶಾಂತಿಸೇವಾ ಸದನ, ಸೇಡಬಾಳ.	೧೯೪೭
೩	ಭರತೇಶನ ನಾಲ್ಕು ಚಿತ್ರಗಳು	ಶಾಂತಿಸೇವಾ ಸದನ, ಸೇಡಬಾಳ.	೧೯೫೪
೪	ವಿಮರ್ಶೆಯ ಸ್ವರೂಪ	ಸಾಹಿತ್ಯ ಭಂಡಾರ, ಹುಬ್ಬಳ್ಳಿ.	೧೯೫೯
೫	ಕನ್ನಡ ಸಾಹಿತ್ಯದ ಒಲವುಗಳು	ಶಾಂತಿಸೇವಾ ಸದನ, ಸೇಡಬಾಳ.	೧೯೬೪
	ಗ್ರಂಥ ಸಂಪಾದನೆ :		
೧	ಚಿನ್ಮಯ ಚಿಂತಾಮಣಿ	ಶಾಂತಿಸೇವಾ ಸದನ, ಸೇಡಬಾಳ.	೧೯೪೬
೨	ಧಶಭಕ್ತಿ	ಶಾಂತಿಸೇವಾ ಸದನ, ಸೇಡಬಾಳ.	೧೯೪೭
೩	ಭರತೇಶನ ವೈಭವ ಶೋಭನ ಸಂಧಿಗಳು	ಶಾಂತಿಸೇವಾ ಸದನ, ಸೇಡಬಾಳ.	೧೯೫೧
೪	ಬೆಳಗಾವಿಯ ಬಳುವಳಿ	ಬೆಳಗಾವಿ ಜಿಲ್ಲಾ ಸಾಹಿತ್ಯ ಪರಿಷತ್ ಸಮಿತಿ, ಬೆಳಗಾವಿ.	೧೯೭೧

ಕ್ರ.ಸಂ	ಕೃತಿ ಹೆಸರು	ಪ್ರಕಾಶಕರು	ಪ್ರ. ವರ್ಷ
೫	ರಸಿಕರಂಗ	ಪರಾಗ ಪ್ರಕಾಶನ, ಧಾರವಾಡ.	೧೯೬೩
೬	ಮಧುರಸ್ಮೃತಿ	ಶಾಂತಿ ಸೇವಾ ಸದನ, ಸೇಡಬಾಳ.	೧೯೬೫
೭	ಪುರಂದರ ದಾಸರ ಕೃತಿಗಳಲ್ಲಿ ಸತ್ಸಂಗದ ಮಹಿಮೆ	ಶ್ರೀ ಚಂದ್ರ–ಗಂಗಾ ಜ್ಞಾನಪೀಠ, ಸೇಡಬಾಳ.	೧೯೭೧
೮	ತಿಂಮಾಯಣ	ಬೀಚಿ ಸತ್ಕಾರ ಸಮಿತಿ, ಬೆಳಗಾವಿ.	೧೯೭೨
೯	ಕಾವ್ಯಾನಂದ	ಶ್ರೀ ಚಂದ್ರಗಂಗಾ ಜ್ಞಾನಪೀಠ, ಸೇಡಬಾಳ.	೧೯೭೩
	ಶೈಕ್ಷಣಿಕ :		
೧	ಮೂಲಶಿಕ್ಷಣ ಮೌಲ್ಯಮಾಪನ	ಶಾಂತಿ ಸೇವಾ ಸದನ, ಸೇಡಬಾಳ.	೧೯೫೪
೨	ಭಾಷಾಶಾಸ್ತ್ರ	ಭಾರತ ಬುಕ್ ಡಿಪೋ, ಧಾರವಾಡ, ಶ್ರೀ ಚಂದ್ರ–ಗಂಗಾ ಜ್ಞಾನಪೀಠ, ಸೇಡಬಾಳ.	೧೯೫೭ ೧೯೭೩
	ಧಾರ್ಮಿಕ ಪ್ರಬಂಧ ಗ್ರಂಥಗಳು :		
೧	ಕನ್ನಡ ಸಾಹಿತ್ಯದಲ್ಲಿ ಜೈನಯುಗ	–	–
೨	ಜೈನಧರ್ಮ	ಶಾಂತಿ ಸೇವಾ ಸದನ, ಸೇಡಬಾಳ.	೧೯೫೨
೩	ಮಹಾಪುರಾಣಸಾರ	ಶಾಂತಿ ಸೇವಾ ಸದನ, ಸೇಡಬಾಳ.	೧೯೬೨
೪	ರವಿಷೇಣ ರಾಮಾಯಣ	ಶಾಂತಿ ಸೇವಾ ಸದನ, ಸೇಡಬಾಳ.	೧೯೬೮

ಕ್ರ.ಸಂ	ಕೃತಿ ಹೆಸರು	ಪ್ರಕಾಶಕರು	ಪ್ರ. ವರ್ಷ
	ಅನುವಾದಿತ ಧಾರ್ಮಿಕ ಗ್ರಂಥಗಳು :		
೧	ಸಮಯಸಾರ	ಶಾಂತಿ ಸೇವಾ ಸದನ, ಸೇಡಬಾಳ.	೧೯೫೬
೨	ರತ್ನಕರಂಡಕ ಶ್ರಾವಕಾಚಾರ	ಜೀವಾರಾಜ ಜೈನ ಗ್ರಂಥಮಾಲಾ, ಸೊಲ್ಲಾಪೂರ.	೧೯೬೦
೩	ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ	ಜೀವರಾಜ ಜೈನ ಗ್ರಂಥಮಾಲಾ, ಸೊಲ್ಲಾಪೂರ.	೧೯೬೧
೪	ವಿಶ್ವಧರ್ಮದಲ್ಲಿ ಅನೇಕಾಂತ ಮತ್ತು ಅಹಿಂಸೆ	ಶ್ರೀ ಚಂದ್ರ-ಗಂಗಾ ಜ್ಞಾನಪೀಠ, ಸೇಡಬಾಳ.	೧೯೬೨
	ಇತರ ಕೃತಿಗಳು :		
೧	ತವನಿಧಿ	ಹರಿಹರ ಪ್ರಕಾಶನ, ಹರಿಹರ.	೧೯೫೭
೨	ನಾನು ಕಂಡ ನಾಡು	ಶಾಂತಿ ಸೇವಾ ಸದನ, ಸೇಡಬಾಳ.	೧೯೬೦
೩	ಶೇಡಬಾಳದ ಶತಮಾನ	ಶಾಂತಿ ಸೇವಾ ಸದನ, ಸೇಡಬಾಳ.	೧೯೬೬
		ಮೈಸೂರು ರಾಜ್ಯ ವಿದ್ಯಾ ಸಂಶೋಧನ ಇಲಾಖೆ, ಬೆಂಗಳೂರು.	೧೯೬೫
೪	ರಾಜಾಸ್ತಾನ	–	–
	ಬಿಡಿ ಲೇಖನಗಳು :		
	ಒಟ್ಟು ೧೩೮		

೨ : ಅಣ್ಣಾರಾಯರ ಬದುಕಿನ ಪ್ರಮುಖ ಘಟ್ಟಗಳು

೧.	೨೫-೦೮-೧೯೧೮	–	ರಂದು ಜನನ
೨.	ತಂದೆ-ತಾಯಿ	–	ಅಪ್ಪಣ್ಣ – ಚಂದ್ರಬಾಯಿ
೩.	ಪ್ರಾಥಮಿಕ ಶಿಕ್ಷಣ	–	ಸೇಡಬಾಳದಲ್ಲಿ
೪.	ವಿದ್ಯಾಭ್ಯಾಸ	–	ಮುಲ್ಕಿವರೆಗೆ ಮಾತ್ರ
೫.	೧೯೩೫	–	ವರ್ನಾಕ್ಯುಲರ ಫಾಯನಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದದ್ದು.
೬.	೧೯೩೯	–	ಪ್ರಾಥಮಿಕ ಶಿಕ್ಷಕರಾಗಿ ವೃತ್ತಿ ಆರಂಭಿಸಿದ್ದು
೭.	೧೯೪೧	–	ಕನ್ನಡ 'ಕಾವ' ಪ್ರಶಸ್ತಿ
೮.	೧೯೪೨	–	ಸೇಡಬಾಳದ ಚಂಪಾಬಾಯಿಯವರೊಂದಿಗೆ ವಿವಾಹ
೯.	೧೯೪೩	–	ಕಕನ್ನಡ 'ಜಾಣ' ಪ್ರಶಸ್ತಿ
೧೦.	೧೯೪೫	–	'ನಿಸರ್ಗ' ಕಾದಂಬರಿ ಪ್ರಕಟವಾದದ್ದು
೧೧.	೧೯೪೭	–	'ಶಾಂತಿ ಸೇವಾ ಸದನ'ದ ಸ್ಥಾಪನೆ
೧೨.	೧೯೫೦	–	ಧರ್ಮಸ್ಥಳದ ಸರ್ವಧರ್ಮ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದು
೧೩.	೧೯೫೨	–	'ಜೈನಧರ್ಮ' ಮೇರು ಕೃತಿ ಪ್ರಕಟವಾದದ್ದು
೧೪.	೧೯೫೩	–	ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣ
೧೫.	೧೯೫೪	–	'ಜಿನವಿಜಯ' ಪತ್ರಿಕೆಯ ಸಂಪಾದಕರಾದದ್ದು
೧೬.	೧೯೬೨	–	ಮುಖ್ಯಾಧ್ಯಾಪಕರಾಗಿ ಅಧಿಕಾರ ಸ್ವೀಕಾರ
೧೭.	೧೯೭೦	–	ಬೆಳಗಾವಿ ಜಿಲ್ಲಾ ಸಾಹಿತ್ಯ ಸಮ್ಮೇಳನ ಆಯೋಜಿಸಿದ್ದು
೧೮.	೧೯೭೫	–	ಸೇವೆಯಿಂದ ನಿವೃತ್ತಿ
೧೯.	೧೯೭೫	–	ಮರಣ

ಗ್ರಂಥಋಣ

ಗ್ರಂಥಋಣ

ಕ್ರ.ಸಂ	ಕೃತಿ	ಲೇಖಕರು	ಪ್ರಕಾಶನ ಸಂಸ್ಥೆ	ಪ್ರ. ವರ್ಷ
೧	ಕನ್ನಡ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು – ಒಂದು ಅಧ್ಯಯನ	ಮಹಾದೇವ ಕಣಿವಿ	ಪ್ರತಿಮಾ ಪ್ರಕಾಶನ, ಗುಳೇದಗುಡ್ಡ.	೧೯೯೪
೨	ಮಿರ್ಜಿ ಅಣ್ಣಾರಾಯರು ಒಂದು ಅಧ್ಯಯನ	ಶಿವಾನಂದ ಗಾಳಿ	ಸುಂದರ ಪುಸ್ತಕ ಪ್ರಕಾಶನ, ಧಾರವಾಡ	೧೯೯೫
೩	ನಿಸರ್ಗ	ಮಿರ್ಜಿ ಅಣ್ಣಾರಾಯರು	ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು	೧೯೪೫ ೨೦೧೩
೪	ಕುವೆಂಪು ಕಾದಂಬರಿಗಳು	ಸಂ; ಗುರುಪಾದ ಮರೆಗುದ್ದಿ	ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು	೨೦೦೪
೫	ಸಾಹಿತ್ಯ ಸಂಗಾತಿ	ಸಂ; ಡಾ. ವ್ಹಿ. ಎಸ್. ಮಾಳಿ	ರಾಣಿ ಚನ್ನಮ್ಮ ವಿ.ವಿ. ಬೆಳಗಾವಿ.	೨೦೧೨
೬	ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ	ಸಿದ್ದಣ್ಣಾ ಉತ್ನಾಳ	ಅನುಪಮ ಪ್ರಕಾಶನ, ಅಥಣಿ.	೧೯೯೦ ೧೯೯೭ ೨೦೧೦
೭	ಬಾಗೆಪರಿಸರದ ಸಾಹಿತ್ಯ	ಶೋಭಾ ಎಸ್. ಕೊಕಟನೂರ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೦೮
೮	ಮಧುರಖಂಡಿಯ ರಂಗ ಪರಂಪರೆ	ಎಂ. ಎಂ. ಯಳವಿ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೦೯
೯	ಬಳ್ಳಿಗೇರಿ ಲಾವಣಿ ಸಂಪ್ರದಾಯ ಒಂದು ಅಧ್ಯಯನ	ಶ್ರೀಶೈಲ ಪ. ಸನದಿ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೦೯

ಕ್ರ.ಸಂ	ಕೃತಿ	ಲೇಖಕರು		ಪ್ರ. ವರ್ಷ
೧೦	ಹುಲಗಬಾಳಿಯವರ ಹಾಸ್ಯ ಪ್ರಬಂಧಗಳು	ರಾಜಶ್ರೀ ಗುರುಲಿಂಗಪ್ಪಾ ಹುಬ್ಬಳ್ಳಿ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೦೯
೧೧	ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ	ಶ್ರೀ ವಿ. ಆಯ್. ಬಸನಗೌಡರ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೦೯
೧೨	ಮುರಗೋಡ ಮಹಾದೇವಪ್ಪನವರ ಚಳುವಳಿಗಳು	ಯಂಕಣ್ಣ ಸಂಗಪ್ಪ ನವಲಗಣ್ಣ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೧೧
೧೩	ಮಹಾಲಿಂಗ ಮಂಗಿಯವರ ಕಾವ್ಯದ ಅಧ್ಯಯನ	ಕು. ದೀಪಾ ಸುಭಾಸ ಗುರವ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೧೨
೧೪	ಎಸ್. ಬಿ. ಉತ್ನಾಳರವರ ಶರಣ ಹಾಗೂ ದಾಸ ಸಾಹಿತ್ಯದ ಅಧ್ಯಯನ	ಕು. ಭೀಮವ್ವ ಅಮರಣ್ಣ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೧೩
೧೫	ಡಾ. ವ್ಹಿ. ಎಸ್. ಮಾಳಿಯವರ ಸಂಶೋಧನ ಸಾಹಿತ್ಯದ ಅಧ್ಯಯನ	ಶ್ರೀ ಸಂಗಪ್ಪ ಬಸಪ್ಪ ಹಂಚಿನಾಳ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೧೨– ೨೦೧೩
೧೬	ಸಿ. ವಿ. ಕೆರಿಮನಿಯವರ ಸಂಶೋಧನ ಹಾಗೂ ವ್ಯಕ್ತಿ ಚಿತ್ರಣಗಳು	ಶ್ರೀ ಮಲ್ಲಿಕಾರ್ಜುನ ಶಿದ್ರಾಮಪ್ಪ ಇಂಚಲ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೧೩– ೨೦೧೪
೧೭	ಬಾಹೂರ ಬೊಮ್ಮಯ್ಯ	ಶ್ರೀ ಗಣಪತಿ ಗಂಗಾಧರ ಕಮತೆ	ಅಪ್ರಕಟಿತ ಎಂ.ಫಿಲ್. ನಿಬಂಧ. ಕ.ವಿ.ವಿ.ಹಂಪಿ.	೨೦೧೪

